# ಜೀಕೆ ಮಾಸ್ತರರ ಪ್ರಣಯ ಪ್ರಸಂಗ

## ೧

ಜೀಕೆ ಮಾಸ್ತರರ ಜೀವನದಲ್ಲಿ ಅದೂ ಆ ವಯಸ್ಸಿನಲ್ಲಿ ಇಂಥದೊಂದು ಘಟನೆ ನಡೆಯುವುದು ಅಸಂಭವ ಮಾತ್ರವಲ್ಲ; ಅವರನ್ನು ಬಲ್ಲ ಯಾರೂ ಇಂದೊಂದು ಘಟನೆಯನ್ನು ಅವರ ಸುತ್ತ ಊಹಿಸುವುದೂ ಸಾಧ್ಯವಿಲ್ಲ. ಕಟ್ಟುನಿಟ್ಟು ಶಿಸ್ತು ಸಂಯಮಗಳಿಗೆ ಆ ಮನುಷ್ಯ ಎಷ್ಟು ಹೆಸರಾಗಿದ್ದರೆಂದರೆ - ಹುಡುಗರು ತಂತಮ್ಮಲ್ಲಿ ಮಾತಾಡಿಕೊಳ್ಳುವಾಗ ಅವರನ್ನು 'ಕಟ್ಟುನಿಟ್ಟೆಂದೇ' ಕರೆಯುತ್ತಿದ್ದರು. ಅವರ ಪೂರ್ತಿ ಹೆಸರು ಗುಂಜಾಳ ಕರಿಬಸವಯ್ಯ ಎಂದು. ಆದರೆ ಇದ್ಯಾರಿಗೂ ತಿಳಿಯದು. ಜೀಕೆ ಮಾಸ್ತರರೆಂದೇ ಅವರನ್ನು ಎಲ್ಲರೂ ತಿಳಿದಿದ್ದರು. ಮತ್ತು ಹಾಗೇ ಕರೆಯುತ್ತಿದ್ದರು.

ಆ ಏರಿಯಾದಲ್ಲಿ ಅವರಷ್ಟು ಗೌರವಾರ್ಹ ವ್ಯಕ್ತಿ ಸಿಕ್ಕುವುದು ಕಷ್ಟ. ಅವರು ರಾಜಕಾರಣಿಯಲ್ಲ, ಭಾಷಣಕಾರರಲ್ಲ, ಅವರಿದ್ದ ಊರೇನು ರಾಜಧಾನಿಯಲ್ಲ, ಬರೀ ಒಂದು ತಾಲೂಕು ಸ್ಥಳವಷ್ಟೆ. ಅಲ್ಲಿದ್ದ ಮುನ್ಸಿಪಲ್ ಹೈಸ್ಕೂಲಿನಲ್ಲಿ ಮಾಸ್ತರರಾಗಿದ್ದವರು ಬಹಳ ನಿಷ್ಠೆಯಿಂದ ದುಡಿದು ಅಲ್ಲೊಂದು ಜೂನಿಯರ್ ಕಾಲೇಜಾಗುವಂತೆ ಮಾಡಿ, ಅದನ್ನು ಪೂರ್ಣ ಪ್ರಮಾಣದ ಕಾಲೇಜಾಗುವಂತೆ ಮಾಡಿದ್ದರು. ಇಷ್ಟಕ್ಕೂ ಅದೆಲ್ಲ ಅವರೊಬ್ಬರ ಪ್ರಯತ್ನದಿಂದಲೇ ಆಯಿತೆಂದೂ ಅಲ್ಲ. ಆದರೆ ದುಡಿಯುವ ಎಲ್ಲರೂ ಹಿಂದಿನ ಪ್ರೇರಶಕ್ತಿಯಾಗಿ ಹುರಿದುಂಬಿಸಿ ಕಾರ್ಯ ಮಾಡಿಸಿದ್ದು ಮಾತ್ರ ಅವರೇ. ಅದು ಆದಾಗ ತಾವೇ ಅದರ ಪ್ರಿನ್ಸಿಪಾಲರಾಗಬೇಕೆಂದೂ ಕನಸು ಕಂಡವರಲ್ಲ. ಆದರೆ ಮುನ್ಸಿಪಾಲ್ಟಿಯಲ್ಲಿರುವ ಬಹುಪಾಲು ಸದಸ್ಯರು ಅವರ ಹಳೆಯ ಶಿಷ್ಯರೇ. ಆದ್ದರಿಂದ, ಮತ್ತು ಅದೇ ಬಗೆಯ ಗೌರವ ಭಾವನೆ ಆ ಭಾಗದ ಜನರಲ್ಲಿರುವುದರಿಂದ ಅವರನ್ನೇ ಸರ್ವಾನುಮತದಿಂದ ಪ್ರಿನ್ಸಿಪಾಲರನ್ನಾಗಿ ಮಾಡಿದ್ದರು. ಮತ್ತು ಇವರೂ ಅವರ ನಿರೀಕ್ಷೆಯಂತೆಯೇ ಕಾಲೇಜನ್ನು ನಡೆಸಿದ್ದರು. ಅವರಿಗೆ ಯಾವ ಕೆಲಸ ಕೊಟ್ಟರೂ ಸೈ, ಅದು ಚೊಕ್ಕಟವಾಗಿ, ಒಂದು ಚಿಕ್ಕಾಸು ಕೂಡ ಎಪರಾತಪರ ಆಗದಂತೆ, ಮಾಡಿದವರಿಗೆ ಮಾಡಿಸಿದವರಿಗೆ ಹೆಸರು ಬರುವಂತೆ ಕಾರ್ಯರೂಪಕ್ಕೆ ಬರುತ್ತಿತ್ತು.

ಅವರ ಕೆಲಸ ಮತ್ತು ಕೀರ್ತಿಗನುಗುಣವಾಗಿ ಅವರ ವ್ಯಕ್ತಿತ್ವವಿತ್ತು. ಎತ್ತರ ಗಂಭೀರಾಕೃತಿ, ತೇಜಸ್ಸಿನಿಂದ ತುಂಬಿದ ಮುಖ, ಸಣ್ಣ ಕಣ್ಣುಗಳು, ಮುಖಕ್ಕೆ ತುಸು ದೊಡ್ಡದೇ ಎನಿಸುವ ಮೂಗು, ಸ್ಪಷ್ಟವಾದ ಅದರೆ ಅಂತ್ಯದಲ್ಲಿ ಒತ್ತಿಕೊಂಡ ತುಟಿಗಳು... ಯಾರೊಬ್ಬರೂ ಇವರನ್ನು ಒಮ್ಮೆ ಕಂಡರೂ ಸಾಕು ಮರೆಯಲು ಸಾಧ್ಯವಾಗುತ್ತಿರಲಿಲ್ಲ,- ಅಂಥ ವ್ಯಕ್ತಿತ್ವ.

ಅವರ ವ್ಯಕ್ತಿತ್ವಕ್ಕೆ ಒಪ್ಪಿತ್ತು ಅವರ ಉಡುಪು. ಉತ್ತರ ಕರ್ನಾಟಕದ ಕಾಲೇಜಿನ ಪ್ರಿನ್ಸಿಪಾಲರಿರಲಿ, ಅಧ್ಯಾಪಕರು ಕೂಡ ಸೂಟು ಧರಿಸದೆ ಹೊರಗೆ ಕಾಲಿಡಬಾರದು. ಜೀಕೆ ಒಬ್ಬರೇ ಇದಕ್ಕೆ ಅಪವಾದ. ಸ್ವಚ್ಛವಾದ ಗರಿಗರಿ ಧೋತ್ರ ಉಟ್ಟು, ಮ್ಯಾಲೊಂದು ಬಿಳಿ ಶರ್ಟು, ಅದರ ಮ್ಯಾಲೊಂದು ಕೋಟು ಹಾಕಿಕೊಂಡು ಬಕ್ಕತಲೆ ಹಾಗೇ ಬಿಡುತ್ತಿದ್ದರು. ಇದು ಅವರ ಹೈಸ್ಕೂಲಿನಲ್ಲಿದ್ದಾಗಿನ ಉಡುಪು ನಿಜ. ಆದರೆ ಪ್ರಿನ್ಸಿಪಾಲರಾದ ಮೇಲೆ ಅವರ ಹೆಸರು ಹ್ಯಾಗೋ ಹಾಗೇ ಉಡುಪೂ ಉಳಿದುಕೊಂಡಿತ್ತು. ಹುಡುಗರೇನಾದರೂ ಸೂಟು ಬೇಕೆಂದು ತಮ್ಮ ಮನೆಗಳಲ್ಲಿ ಪೀಡಿಸಿದರೆ 'ಜೀಕೆ ಮಾಸ್ತರನ್ನ ನೋಡಬಾರದ? ಹೆಂಗದಾರ' ಎಂದು ಮನೆಯವರು ಗದರುತ್ತಿದ್ದರು. ಅವರ ವಿಷಯದಲ್ಲಂತೂ ಅದು ನಿಜವಾಗಿತ್ತು. ಅವರು ಧರಿಸುತ್ತಿದ್ದ ಆ ಉಡುಪು ಅವರ ಉನ್ನತಾಕೃತಿಗೆ, ಅವರ ಬಟ್ಟದಲೆಗೆ ಮತ್ತು ಅವರ ನಿರುಮ್ಮಳ ಆತ್ಮ ವಿಶ್ವಾಸದ ಚಲನವಲನಗಳಿಗೆ ಸಮರ್ಪಕವಾಗಿ ಹೊಂದಿಕೊಂಡಿತ್ತು.

ಜೀಕೆ ಮಾಸ್ತರ ಮಾತಾಡುವುದು ಕಮ್ಮಿ. ಬೇರೆ ಜನ ಮಾತಾಡಿ ತಮ್ಮ ವಿದ್ವತ್ತು ತೋರಿ ಸುತ್ತಲಿದ್ದವರ ಮೇಲೆ ಪ್ರಭಾವ ಬೀರಿದರೆ ಇವರು ಸುಮ್ಮನೆ ಕೂತೇ ಆ ಕೆಲಸ ಮಾಡುತ್ತಿದ್ದರು. ಮಾತಾಡಿದರೆ ವಿನಾಯಿತಿ, ಭಿಡೆ - ಇವ್ಯಾವ ಹಂಗಿಲ್ಲದೆ, ಸ್ಪಷ್ಟವಾಗಿ, ಸಂದೇಹಕ್ಕೆ ಎಡೆ ಇಲ್ಲದಂತೆ ತಮ್ಮ ಅಭಿಪ್ರಾಯ ತಿಳಿಸುತ್ತಿದ್ದರು. ಬೇರೆಯವರನ್ನು ತನ್ನ ಅಭಿಪ್ರಾಯಕ್ಕೆ ಮಣಿಯುವಂತೆ ಮಾಡಲು

ಮಾತು ಕೃತಿಗಳಲ್ಲಿ ಎಷ್ಟು ಆತ್ಮವಿಶ್ವಾಸವಿರಬೇಕೆಂಬುದನ್ನು ಅವರು ಬಲ್ಲವರಾಗಿದ್ದರು. ಅವರ ವ್ಯಕ್ತಿತ್ವದಲ್ಲೇ ಒಂದು ಅಸಲುತನ ಇತ್ತು. ಮತ್ತು ಅದು ತಾವು ಶಿಸ್ತು ಸಂಯಮಗಳಲ್ಲಿ, ಹಳೆಯ ಆಚರಣೆಗಳಲ್ಲಿ ನಂಬಿಕೆಯಿಟ್ಟು ನಡೆದುದರಿಂದ ಬಂದುದೆಂದು ಭಾವಿಸಿದ್ದರು. ಅವರು ಆಗಾಗ ತಮ್ಮ ನಗಾರಿ ದನಿಯಲ್ಲಿ ಹೇಳುತ್ತ ಬಂದಿರುವಂತೆ ಅವರ ಸದಾಕಾಲದ ದೊಡ್ಡ ಚಿಂತೆಯೆಂದರೆ ಜಗತ್ತು ಬರಬರುತ್ತ ಭ್ರಷ್ಟವಾಗುತ್ತ ಬಂದಿದೆಯೆಂಬುದೇ ಆಗಿತ್ತು. ಆದ್ದರಿಂದಲೇ ತಮ್ಮ ಸುತ್ತಮುತ್ತ ಯಾವೆಂಥ ಘಟನೆ ನಡೆದರೂ ಅವರಿಗೆ ಆಶ್ಚರ್ಯವಾಗುತ್ತಿರಲಿಲ್ಲ. ಬದಲಾಗಿ ಅದು ಕೇವಲ ಭ್ರಷ್ಟ ಜೀವನದ ಕರ್ಮವಿಪಾಕವೆಂದೂ ಅದನ್ನು ಅನುಭವಿಸಿಯೇ ಕಳೆಯಬೇಕೆಂದೂ ಅಪ್ಪಣೆ ಕೊಡುತ್ತಿದ್ದರು. ಮತ್ತು ಜಗತ್ತು ಇನ್ನೂ ಭ್ರಷ್ಟವಾಗದಂತೆ ತಡೆಯುವುದೇ ಅಧ್ಯಾಪಕರಾದ ತಮ್ಮ ಪವಿತ್ರ ಕರ್ತವ್ಯವೆಂದು ನಂಬಿದ್ದರು.

ಮತ್ತು ಈ ಕಾರಣಕ್ಕಾಗೇ ಆಧುನಿಕ ವಿದ್ಯಾರ್ಥಿಗಳನ್ನವರು ತಿರಸ್ಕಾರದಿಂದ ಕಾಣುತ್ತಿದ್ದರು. ಇದಕ್ಕೆ ಅವರ ಆಂತರಿಕ ಹೆಮ್ಮೆ ಎಷ್ಟು ಕಾರಣವೋ ಅಷ್ಟೇ ಹಿಂದಿನ ಕಾಲದ ಜೀವನ ಪದ್ಧತಿಯಲ್ಲಿಯ ನಂಬಿಕೆಯೂ ಕಾರಣವಾಗಿತ್ತು. ಹಿಂದಿನವರು ಪ್ರಯೋಗ ಮಾಡಿ ಮಾಡಿ ಜೀವನದ ಉತ್ತಮ ನಡೆಯೆಂದರೆ ಯಾವುದು? - ಕೆಟ್ಟದ್ದು ಯಾವುದು? - ಎಂದೆಲ್ಲ ತೀರ್ಮಾನಿಸಿಬಿಟ್ಟಿದ್ದಾರೆ. ನಮಗೀಗ ಉಳಿದಿರುವುದೆಂದರೆ ಅವರು ಹೇಳಿದ ಉತ್ತಮಾಂಶಗಳನ್ನು ಆಚರಣೆಗೆ ತರುವುದಷ್ಟೆ. ಮತ್ತು ಇದೇ ಕಾರಣಕ್ಕಾಗಿ ಅವರು ಚಾತುರ್ವರ್ಣದ ಸಮರ್ಥಕರಾಗಿದ್ದರು. ಗಾಂಧೀಜಿ ಅಸ್ಪೃಶ್ಯತೆಯ ಬಗ್ಗೆ ತದ್ವಿರುದ್ಧ ಹೇಳಿದ್ದಾರೆಂದರೆ 'ಗಾಂಧೀಜಿಗೇನು ಗೊತ್ತು ತಲೆ' ಎಂದೂ ಹೇಳಿಯಾರು. ಸರಕಾರ ಹರಿಜನ ಗಿರಿಜನರಿಗೆ, ಹಿಂದುಳಿದ ವರ್ಗದವರಿಗೆ ಕೆಲವು ಸವಲತ್ತುಗಳನ್ನು ಘೋಷಿಸಿ ಕಾರ್ಯರೂಪಕ್ಕೆ ತಂದಿದ್ದ ಕಾಲ ಅದು. ಆಗಂತೂ ಜೀಕೆ ಸಿಕ್ಕಸಿಕ್ಕವರ ಎದುರಿಗೆ ಸರಕಾರವನ್ನು ಗೇಲಿ ಮಾಡಿದ್ದರು. 'ಇದು ಬಿಡರೀ ಹೊಲ್ಯಾರ ಸರಕಾರ' ಎಂದೂ ಅಂದಿದ್ದರು. ಅಂತೇ ಆ ಜಾತಿಯ ವಿದ್ಯಾರ್ಥಿಗಳ ಬಗ್ಗೆ ಅವಹೇಳನಕರ ಮಾತುಗಳನ್ನು ಅವರೆದುರಿನಲ್ಲೇ ಆಡಲೂ ಹಿಂಜರಿಯುತ್ತಿರಲಿಲ್ಲ. ಅಂದರೆ ಅವರ ಅಭಿಪ್ರಾಯವಿಷ್ಟೆ: ವಿದ್ಯೆ ಅವರಿಗಲ್ಲ,- ಎಂದು. ಸುದೈವದಿಂದ ಹರಿಜನ-ಗಿರಿಜನ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರ ಹಾಕಿರಲಿಲ್ಲ. ಸರಕಾರೀ ಆದೇಶದಂತೆ ಅವರಿಗೆ ಸಿಕ್ಕಬೇಕಾದ್ದನ್ನು ಧಾರಳವಾಗಿಯೇ ಕೊಡಿಸಿದ್ದರು. ಈ ವಿಚಾರದಲ್ಲಿ ಮನುಷ್ಯ ಚುಕ್ತ ಇದ್ದರು.

ಇನ್ನು ಜೀಕೆ ಪಾಠ ಮಾಡುವ ಕ್ರಮವೂ ಅವರದೇ. ನಗಾರಿ ಬಾರಿಸಿದಂಥ ದನಿಯಲ್ಲಿ ಅವರು ಕಾಳಿದಾಸನ ಮೇಘದೂತ ಹೇಳತೊಡಗಿದರೆ ಹುಡುಗರು ಕಾಲಾಂತರಗೊಂಡು ಕಾವ್ಯದ ವಿವರಗಳನ್ನು ಕಣ್ಣೆದರೇ ಕಾಣುತ್ತಿದ್ದರು. ಆದರೆ ಮೃದು ಭಾವನೆಗಳಿಗೆ ಉದಾಃ ಶೃಂಗಾರ, ವಿರಹ, ಕರುಣೆ - ಮುಂತಾದವುಗಳಿಗೆ ಅವರ ದನಿ ಒಪ್ಪುತ್ತಿರಲಿಲ್ಲ. ಆಗೆಲ್ಲ ಹುಡುಗರಿಗೆ ಕಸಿವಿಸಿಯಾಗುತ್ತಿತ್ತು. ಆದರೆ ವಿದ್ಯಾರ್ಥಿಗಳ ಕಸಿವಿಸಿಯನ್ನು ಮುಚ್ಚುಮರೆಯಿಲ್ಲದೆ ಧಿಕ್ಕರಿಸಿ, ಅದೇ ನಗಾರಿ ದನಿಯಲ್ಲೇ ಅಂಥದನ್ನೂ ಹೇಳುತ್ತಿದ್ದರು. ಹುಡುಗರೂ ಮನಸ್ಸು ಕಲ್ಲುಮಾಡಿ ಕೇಳುತ್ತಿದ್ದರು.

ಇಷ್ಟಾದರೂ ವಿದ್ಯಾರ್ಥಿಗಳಲ್ಲಿ ಜೀಕೆ ಜನಪ್ರಿಯರಾಗಿದ್ದರು. ಮನುಷ್ಯ ಒಂದು ತಿಂದವನಲ್ಲ, ಭ್ರಷ್ಟನಲ್ಲ, ಕೆಟ್ಟದ್ದು ಮಾಡಿದವನಲ್ಲ, ತನ್ನ ಕರ್ತವ್ಯಕ್ಕೆ ಎರಡು ಬಗೆದವನಲ್ಲ, ಊರಿನ ಉಸಾಬರಿಗೆ ಹೋದವನಲ್ಲ, ಜೊತೆಗೆ ಕಾಲೇಜು ಕಟ್ಟಿದವರು. ಅವರು ಊರಿನ ರಸ್ತೆಯಲ್ಲಿ ಬೆಳಗಿನ ಹೊತ್ತು ಕಾಣಿಸಿದರೆ ಈಗ ಗಂಟೆ ಹತ್ತುವರೆಯೆಂದು ಕಂಡವರು ತಂತಮ್ಮ ವಾಚು ಸರಿಪಡಿಸಿಕೊಳ್ಳಬೇಕು - ಹಾಗಿದ್ದರು. ಹುಡುಗರೊಂದಿಗೆ ವ್ಯವಹರಿಸುವಾಗಲೂ ತಮ್ಮ ಘಣತೆಗೆ ಕುಂದು ತಂದುಕೊಳ್ಳುತ್ತಿರಲಿಲ್ಲ. 'ಕೂತ್ಕೊಳ್ರಿ' ಎಂದು ಹೇಳುವ ತನಕ ಒಬ್ಬ ಅಧ್ಯಾಪಕನೂ ಅವರೆದರು ಕೂರುತ್ತಿರಲಿಲ್ಲ, ಎಂದರೆ ಎಂಥ ಆಸಾಮಿ ಅಂಥ ನೀವೇ ಊಹಿಸಿಕೊಳ್ಳಬಹುದು. ಇನ್ನೇನು, ಅವರ ಮನಸ್ಸಿನ ಗುಪ್ತ ಮೂಲೆಗಳಲ್ಲಿ ಕೆಲವು ಚಿಲ್ಲರೆ ಬೇಸರಗಳಿದ್ದದ್ದು ನಿಜ. ಆದರೆ ಅವನ್ನು ಬೇರೆಯವರಿಂದ ಮಾತ್ರವಲ್ಲದೆ ತಮ್ಮಿಂದಲೂ ಮರೆಮಾಚಿಕೊಳ್ಳುವಂಥ ಶಕ್ತಿ ಅವರಲ್ಲಿತ್ತು.

ಜೀಕೆ ಮಾಸ್ತರರ ಖಾಸಗೀ ಬದುಕೂ ಅಷ್ಟೆ. ಅವರ ಶ್ರೀಮತಿ ಗಿರಿಜಮ್ಮನ ವಯಸ್ಸು ಹತ್ತಿರ ಹತ್ತಿರ ಐವತ್ತಿದ್ದೀತು. ದಂಪತಿಗಳಿಬ್ಬರೂ ಶಿವಭಕ್ತರು. ವರ್ಷಕ್ಕೊಮ್ಮೆ ಸಾವಳಗಿ ಶಿವಲಿಂಗೇಶ್ವರ ಮಠಕ್ಕೆ ಹೋಗಿ ಬರುತ್ತಿದ್ದರು. ಮೊದ ಮೊದಲು ವ್ರತಾಚರಣೆಗಳ ಬಗ್ಗೆ

ಇಬ್ಬರಿಗೂ ಗೀಳಿತ್ತು. ಜೀಕೆ ವ್ರತಾಚರಣೆ, ಹ್ಯಾಗೆಂದು ನೀವೂ ಊಹಿಸಬಹುದು. ಒಂದು ಕೂದಲೆಳೆಯಷ್ಟು ಕಮ್ಮಿಯಾಗಬಾರದು, ಮಾತ್ರವಲ್ಲ ಹೆಚ್ಚೂ ಆಗಬಾರದು. ದೇವರು ಕೂಡ ಹೆದರಿ ಉಸಿರು ಬಿಗಿ ಹಿಡಿದು ವ್ರತ ಮುಗಿಯುವ ತನಕ ಹೇಳಿದಲ್ಲಿ ಬಿದ್ದಿರಬೇಕಿತ್ತು - ಆ ರೀತಿ ಮಾಡುತ್ತಿದ್ದರು. ಮುಂದೆ ಇಂಥ ಧಾರ್ಮಿಕತೆಯಲ್ಲಿ ಗಿರಿಜಮ್ಮನ ನಂಬಿಕೆ ಕಡಿಮೆ ಆದದ್ದು ಅವರ ಒಬ್ಬನೇ ಮಗ ವ್ರತಾಚರಣೆಗೇ ಆಹುತಿಯಾದನೆಂದು ನಂಬಿದಾಗ.

ಅದು ಹಿಂದಿನ ಮಾತು. ಇವರ ಮಗ ವೀರಭದ್ರಯ್ಯ ಆಗ ಹನ್ನೊಂದು ವರ್ಷದ ಬಾಲಕ. ಕರೀಹುಡುಗ ತುಂಬಿಕೊಂಡು ಚೆನ್ನಾಗೇ ಓಡಾಡಿಕೊಂಡಿದ್ದ. ಒಮ್ಮೆ ಅವ ಹೊಟ್ಟೆನೋವೆಂದು ಮಲಗಿದ. ಆ ದಿನವೇ ಇವರ ಕಟ್ಟುನಿಟ್ಟಿನ ವ್ರತ ಇತ್ತು. ದಂಪತಿಗಳು ಭಾರೀ ಮಡಿ ಮೈಲಿಗೆಯವರು, ಒಬ್ಬರನ್ನು ಮುಟ್ಟಬಾರದು, ಮಾತಾಡಬಾರದು. ಮಗನ ಹೊಟ್ಟೆನೋವಿನ ವಿಷಯ ತಿಳಿದ ಜೀಕೆ ವಿಚಲಿತರಾಗಲಿಲ್ಲ. ಪೂಜೆಯಿಂದೇಳಲೂ ಇಲ್ಲ. ಆದರೆ ಗಿರಿಜಮ್ಮ ತಡೆಯದೆ ಮಗನ ಬಳಿ ಕದ್ದುಹೋಗಿ ಡಾಕ್ಟರ ಬಳಿ ಹೋಗೆಂದು ಸನ್ನೆ ಮಾಡಿ ಸೂಚಿಸಿ ಬಂದಳು. ಮಗ ಹೋಗಲಿಲ್ಲ. ನೋವು ತಡೆಯದೆ ಬಿದ್ದು ಒದ್ದಾಡಿ ಗೋಳಾಡತೊಡಗಿದ. ಇವನು ಬೇಕಂತಲೇ ಹೀಗೆ ಮಾಡುತ್ತಿದ್ದಾನೆಂದು ಜೀಕೆ ಕೊಪಕೊಂಡರು ಕೂಡ. ಮತ್ತು ಇನ್ನಷ್ಟು ಗಟ್ಟಿ ಮನಸ್ಸು ಮಾಡಿ, ತಮ್ಮ ಏಕಾಗ್ರ ಹರಿಗಡಿಯದಂತೆ ಪೂಜೆಗೆ ತೊಡಗಿದರು. ಅವರು ಕೂತಿದ್ದ ಭದ್ರ ಭಂಗಿ, ಉಕ್ಕಿನ ಮುಖಭಾವಗಳನ್ನು ನೋಡಿ ಹೆದರಿದ ಗಿರಿಜಮ್ಮನೂ ಏಳಲಿಲ್ಲ. ಇವರ ಮನೆ ಊರು ಬಿಟ್ಟು ತುಸು ದೂರದಲ್ಲಿರುವುದರಿಂದಲೋ, ಇವರ ದುರ್ದೈವವೋ ಆಸುಪಾಸು ಯಾರೂ ಸಾಯಲೂ ಇಲ್ಲ. ಬಹಳ ಹೊತ್ತಿನ ತರುವಾಯ ಯಾರೋ ಅಧ್ಯಾಪಕರು ಬಂದು ಹುಡುಗನನ್ನು ಆಸ್ಪತ್ರೆಗೇನೋ ಒಯ್ದರು. ಆದರೆ ತಿರುಗಿ ತಂದದ್ದು ಅವನ ಹೆಣವನ್ನು.

ಆಮೇಲೆ ಆಕೆ ಆಳಾಗಲೇ ಇಲ್ಲ. ಕರ್ಮವಿಪಾಕದ ಹೆಸರಿನಲ್ಲಿ ಮಗನ ಸಾವನ್ನು ಅವಳ ಮನಸ್ಸಿನಿಂದ ತೆಗೆಯಲಿಕ್ಕೆ ಇವರೆಷ್ಟು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಮಾನಸಿಕ ಸ್ವಾಸ್ಥ್ಯವಿಲ್ಲದೆ ಆಕೆ ಒಂದಿಲ್ಲೊಂದು ರೋಗಕ್ಕೆ ತುತ್ತಾಗುತ್ತಿದ್ದಳು. ಇವರು ಮಾತ್ರ ಆಗಾಗ ವ್ರತಗಳನ್ನು ಆಚರಿಸುತ್ತಲೇ ಬಂದರು. ಅದೇ ಕರ್ಮವಿಪಾಕದ ಹೆಸರಿನಲ್ಲಿ ಮಗನ ದುಃಖದಿಂದ ಮುಕ್ತರೂ ಆಗಿದ್ದರು. ಮಕ್ಕಳಿರಲಿಲ್ಲವೆಂಬ ಚಿಂತೆ ಇವರಿಗಿತ್ತು ನಿಜ. ಆದರೆ ಕಾಲೇಜಿನ ವಿಪರೀತ ಜವಾಬ್ದಾರಿಗಳಲ್ಲಿ ಅದನ್ನು ಮರೆತರು.

ಮೊದಲೆಲ್ಲ ಹುಡುಗರು ಚೆನ್ನಾಗಿದ್ದರು. ಗುರುಹಿರಿಯರ ಬಗ್ಗೆ ಭಯ ಭಕ್ತಿ ಇಟ್ಟುಕೊಂಡಿದ್ದರು. ಆದರೆ ಈಗೀಗ ಕಾಲೇಜಿನ ಹವಾಮಾನ ಬದಲಾಗಿತ್ತು. ಹುಡುಗರು ಮುಂಚಿನಂತಿರಲಿಲ್ಲ. ಹದ್ದು ಮೀರಿ ಸ್ವಾತಂತ್ರ್ಯ ಬೇಡುತ್ತಿದ್ದರು. ಪಡೆಯುತ್ತಿದ್ದರು. ಒಮ್ಮೊಮ್ಮೆ ಇದೆಲ್ಲ ಇನ್ನು ಸಾಕು; ಶಿವಾ ಎನ್ನುತ್ತ ಮನೆಯಲ್ಲಿದ್ದರಾಯ್ತೆಂದೂ ಅಂದುಕೊಳ್ಳುತ್ತಿದ್ದರು. ಮತ್ತೊಮ್ಮೆ 'ಇನ್ನೇನು ರಿಟೈರಾಗಬೇಕಲ್ಲ. ಅಲ್ಲೀ ತನಕ ಕಾಲೇಜನ್ನು ಕಟ್ಟುನಿಟ್ಟು ಶಿಸ್ತುಸಂಯಮಗಳಿಂದ ನಡೆಸೋದು. ತಾನು ಬಿಟ್ಟ ಮೇಲೆ ಇದ್ದೇ ಇದೆ. 'ತಾಬಲ ಶಿವ ಬಲ' ಹೀಗೂ ಅಂದುಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿಯೇ ಆ ಘಟನೆ ನಡೆಯಿತು.

## ೧

ಕಾಲೇಜು ಸುರುವಾಗಿ ಹತ್ತುವರ್ಷ ಪೂರ್ತಿಯಾಗಿತ್ತಲ್ಲ. ಆ ಅವಧಿಯಲ್ಲಿ ಕಾಲೇಜು ಸಾಧಿಸಿದ ಪ್ರಗತಿ ಅಸಾಮಾನ್ಯವಾಗಿತ್ತು. ಮೂರು ಬಾರಿ ಬಿ.ಎ. ರ್‍ಯಾಂಕುಗಳು, ಡಿಬೇಟಿನ ರಾಜ್ಯಮಟ್ಟದ ಆರು ಷೀಲ್ಡುಗಳು, ಕಬಡ್ಡಿ ಷೀಲ್ಡುಗಳು... ಸ್ಥಳೀಯ ಮತ್ತು ವೈಯಕ್ತಿಕ ಪ್ರಶಸ್ತಿಗಳು ಇಷ್ಟನ್ನೇ ಲೆಕ್ಕಕ್ಕೆ ಹಿಡಿದರೆ ಒಟ್ಟು ಪ್ರಶಸ್ತಿಗಳೇ ನೂರು ಚಿಲ್ಲರೆ ಆದಾವು. ಈ ಹತ್ತೂ ವರ್ಷಗಳ ರಿಜಲ್ಟು ಕೂಡ ಶೇಕಡಾ ಐವತ್ತಕ್ಕಿಂತ ಕಮ್ಮಿ ಇಳಿದಿದ್ದಿಲ್ಲ. ಸದರಿ ಕಾಲೇಜಿನ ಶೀಘ್ರ ಯಶಸ್ಸಿನ ಖ್ಯಾತಿ ಆ ಭಾಗದ ದಿನಪತ್ರಿಕೆಯಲ್ಲಿ ಮೂರು ಲೇಖನಗಳಲ್ಲಿ ಮೊಳಗಿತ್ತು. ಆ ಮೂರರ ಪೈಕಿ ಒಂದರಲ್ಲಂತೂ ಫೋಟೋ ಸಮೇತ ಜೀಕೆ ಮಾಸ್ತರರ ಸಂದರ್ಶನ ಪ್ರಕಟವಾಗಿ ಅದರಲ್ಲಿ ವಿಶೇಷವಾಗಿ ಅವರ ಕಟ್ಟುನಿಟ್ಟು ಶಿಸ್ತು ಸಂಯಮಗಳನ್ನು ಹೊಗಲಿ ಅವರನ್ನು ಆಧುನಿಕ ದ್ರೋಣಾಚಾರ್ಯನೆಂದು ಪ್ರಶಂಸಿಸಲಾಗಿತ್ತು. ಮುನ್ಸಿಪಾಲ್ಟಿ ಮೆಂಬರರಂತೂ ಕಾಲೇಜಿನ ಬಗ್ಗೆ, ತಮ್ಮ ಗುರುಗಳಾದ ಜೀಕೆ ಬಗ್ಗೆ ಎಷ್ಟು ಹೆಮ್ಮೆ ತಳೆಯುತ್ತಿದ್ದರೆಂದರೆ ತಮ್ಮ

ಯಾವುದೇ ಭಾಷಣವನ್ನ ಜೀಕೆ ಹೆಸರೆತ್ತದೆ ಮುಗಿಸುತ್ತಿರಲಿಲ್ಲ. ಜೀಕೆ ಏನೇ ಯೋಜನೆ ಕೊಡಲಿ, ಎಷ್ಟೇ ಹಣ ಕೇಳಲಿ ಇಲ್ಲವೆನ್ನುವ ಧೈರ್ಯ ಯಾರಲ್ಲೂ ಇರಲಿಲ್ಲ. ಇಷ್ಟೆಲ್ಲಾ ಸಾಧನಗಳಿರುವಾಗ ಕಾಲೇಜಿನ ದಶಮಾನೋತ್ಸವ ಮಾಡಬಹುದಲ್ಲಾ ಎಂದು ಜೀಕೆ ಯೋಚನೆ ಮಾಡಿದರು. ಇನು ಕೇಳಬೇಕೆ, ಅವರ ಯೋಚನೆ ಮತ್ತು ಕಾರ್ಯಗಳಲ್ಲಿ ವ್ಯತ್ಯಾಸವೇ ಉಳಿಯಲಿಲ್ಲ. ದಶಮಾನೋತ್ಸವದ ಸಿದ್ಧತೆ ಭರದಿಂದ ನಡೆಯಿತು. ಜೀಕೆ ತಮ್ಮ ಸಹೋದ್ಯೋಗಿಗಳನ್ನು ಕರೆದು ಯಾರ್ಯಾರು, ಯಾವ್ಯವ ಕೆಲಸ ಮಾಡಬೇಕೆಂದು ಹೇಳಿ ಹಂಚಿದರು. ಇದರಲ್ಲಿ ವಿದ್ಯಾರ್ಥಿಗಳ ತೊಡಗುವಿಕೆಯೂ ಇರಬೇಕಲ್ಲ. ಮುಖ್ಯ ತೊಂದರೆ ಬಂದದ್ದೇ ಅಲ್ಲಿ.

ಕಾಲೇಜು ಯೂನಿಯನ್ನಿನ ಅಧ್ಯಕ್ಷ ಗಿರೆಪ್ಪ ಎಂಬ ಅಂತಿಮ ವರ್ಷದ ವಿದ್ಯಾರ್ಥಿ. ಪ್ರಾರಂಭದ ವರ್ಷಗಳಲ್ಲಿ ಅವ ಸರಿಕರಲ್ಲಿ ಬೆಳೆದಿದ್ದಾನಾದೀತು. ಇಲ್ಲದಿದ್ದರೆ ಯೂನಿಯನ್ ಅಧ್ಯಕ್ಷನಾಗೋದು ಹ್ಯಾಗೆ ಸಾಧ್ಯ? ಭೇಟಿಯಾದಾಗ ಮಾತ್ರ ಅವನ ನಾಗರಿಕವಾಗೇ ನಡೆದುಕೊಂಡಿದ್ದ.

ಆದರೆ ಹೊರಗೆ ಚಿಗರಿಕೊಂಡಿದ್ದ. ಆತನ ಬಗ್ಗೆ ಅಧ್ಯಾಪಕರ್ಯಾರೂ ಹಿತಕರವಾದ ಮಾತಾಡಿರಲಿಲ್ಲ. ಆತ ಹುಡುಗರ ಗ್ಯಾಂಗ್ ಕಟ್ಟಿ ಹುಡುಗಿಯರನ್ನು ಛೇಡಿಸುತ್ತಾನೆಂದು, ಬೇರೆ ಕ್ಲಾಸುಗಳಿಗೆ ನುಗ್ಗಿ ಧಾಂದಲೆ ಮಾಡುತ್ತಾನೆಂದು ಅಧ್ಯಾಪಕರ ದೂರಿತ್ತು. ಆದರೆ ಜೀಕೆ ಅವನನ್ನು ಗಮನಿಸಿದ್ದು ಹೋದ ಬಾರಿ ವಿದ್ಯಾರ್ಥಿಗಳು ಪಿಕ್‌ನಿಕ್ ಹೋಗಿ ಬಂದಮೇಲೆ. ಅಲ್ಲಿ ಈ ಗಿರೆಪ್ಪ ಮತ್ತು ಅವನ ಕ್ಲಾಸಿನವಳೇ ಆದ ರೋಜಾ ಎಂಬ ಕ್ರಿಶ್ಚಿಯನ್ ಹುಡುಗಿ ಎಲ್ಲರಿಂದ ಮರೆಯಾದವರು ಕೊನೆಗೆ ಬಸ್ಸು ವಾಪಸ್ಸು ಹೊರಟಾಗಲೂ ಬಂದಿರಲಿಲ್ಲವಂತೆ. ಕಾದು ಕಾದು ಇನ್ನೇನು ಅವರನ್ನು ಬಿಟ್ಟೇ ಹೋಗೋಣವೆಂದು ಅಧ್ಯಾಪಕರು ನಿರ್ಧರಿಸಿ ಹೊರಟಾಗ ಇಬ್ಬರೂ ಹಾಜರಾದರಂತೆ. ಅಂದಿನಿಂದ ಅವರಿಬ್ಬರ ಹೆಸರುಗಳು ಕಾಲೇಜಿನ ಗೋಡೆಗಳನ್ನು ಜೊತೆಜೊತೆಯಾಗಿ ಅಲಂಕರಿಸಿದ್ದವು. ಕಟ್ಟುನಿಟ್ಟು ಶಿಸ್ತು ಸಂಯಮದ ಜೀಕೆ ಇಂಥದನ್ನೆಲ್ಲ ಸಹಿಸುವುದು ಸಾಧ್ಯವೇ ಇರಲಿಲ್ಲ. ಆ ಬಾರಿ ಅವನನ್ನು ಕರೆದು ತಾಕೀತು ಮಾಡಿದ್ದರು. ಆಗಲೂ ಅವ ಮೆತ್ತಗಿದ್ದ. ಯೂನಿಯನ್ ಅಧ್ಯಕ್ಷನಾಗಿದ್ದನಲ್ಲ. ಈಗ ಅವನನ್ನು ದಶಮಾನೋತ್ಸವ ಸಮಿತಿಯ ಮೀಟಿಗೆಗೆ ಕರೆಯಲೇಬೇಕಾಯ್ತು, ಕರೆದರು.

ಜೀಕೆ ಛೇಂಬರಿನಲ್ಲೇ ಸದಸ್ಯರು ಸೇರಿದ್ದರು. ಅಲ್ಲಿಗೆ ಗಿರೆಪ್ಪ ಬಂದ. ಅವನ ಮುಖ ಹೊಸ ಪ್ರಾಯದ ಠೀವಿಯನ್ನ, ಅವರ ಅಸಡ್ಡೆಯನ್ನ ಸೂಚಿಸುತ್ತಿತ್ತು. ದಟ್ಟ ಬಣ್ಣಗಳ ಪ್ಯಾಂಟು ಶರ್ಟು ಹಾಕಿದ್ದ. ಕೈವಸ್ತ್ರವನ್ನು ಕತ್ತಿಗೆ ಸುತ್ತಿಕೊಂಡಿದ್ದ. ಮೀಸೆ ಹುರಿಮಾಡಿ ಕುಹಕವೆಂಬಂಥ ನಗೆ ನಗುತ್ತಿದ್ದ. ಆ ಅಹಂಕಾರೀ ಕರೀ ಮುಖ ಬದುಕಿನ ಬಗೆಗೆ ಕಾಳಜಿ ಇದ್ದವರಿಗೆ ಅಸಹ್ಯಕರವಾಗಿ, ಆದರೆ ಆ ವಯಸ್ಸಿನ ಹುಡುಗರಿಗೆ ಅದರಲ್ಲೂ ಹುಡುಗಿಯರಿಗೆ ಬಹುಶಃ ಮೋಹಕವಾಗಿ ಕಾಣಿಸಬಹುದಿತ್ತು. ದಟ್ಟವಾದ ಹುಲ್ಲುಮೆದೆಯ ಹಾಗಿದ್ದ ಹುಬ್ಬಿನ ಮೇಲೆ ಬಿದ್ದ ತನ್ನ ಗುಂಗುರು ಕೂದಲಿನ ಮೇಲೊಮ್ಮೆ ಠೀವಿಯಿಂದ ಕೈಯಾಡಿಸಿಕೊಂಡು ಸುತ್ತ ನೋಡಿದ. ಎಲ್ಲರೂ ಅವನನ್ನೇ ವಿಶೇಷವಾಗಿ ನೋಡುತ್ತಿದ್ದರು. ಕೆಲವು ಅಧ್ಯಾಪಕರಿಗಾಗಲೇ ಅಸಮಾಧಾನವಾಗಿತ್ತು. ಜೀಕೆ ಮುಖವನ್ನೇ ನೋಡುವುದರ ಮೂಲಕ ಅದನ್ನು ಅಭಿವ್ಯಕ್ತಿಸಿದರು. ಕೈವಸ್ತ್ರ ಕತ್ತಿಗೆ ಸುತ್ತಿಕೊಳ್ಳುತ್ತಾನಾ? ಛೇಂಬರಿನ ಹೊರಗೆ ಸುತ್ತಿಕೊಳ್ಳಲಿ. ಪ್ರಿನ್ಸಿಪಾಲರೆದುರಿಗೂ ಇವನ ಠೀವಿಯೇ? ಹೋಗಲಿ, ಬಂದವನು ಕೂತವರಿಗೆ ಬೇಡ, ಪ್ರಿನ್ಸಿಪಾಲರಿಗಾದರೂ ನಮಸ್ಕಾರ ಮಾಡಿದನ? ಇಲ್ಲ, ಹೋಗಲಿ, ಕೂತನಲ್ಲ, ಮುದ್ದೆಯಾಗಿ ವಿನಯದಿಂದ ಕೂತನ? ಇಲ್ಲ, ಎರಡೂ ಕೈ ಟೇಬಲ್ ಮೇಲಿರಿಸಿ ತನ್ನನ್ನೇ ಇರಿಯುತ್ತಿದ್ದ ಜೀಕೆ ದೃಷ್ಟಿಯನ್ನು ನಾನಿದಕ್ಕೆ ಕೇರ್ಮಾಡೋದಿಲ್ಲವೆಂಬಂತೆ ನಿವಾರಿಸಿ ಕೂತನೇ! ಆಗಲೇ ಜೀಕೆ ಮೂಡು ಔಟಾಗಿತ್ತು. ನಿಯಂತ್ರಿಸಿಕೊಂಡು ದಶಮಾನೋತ್ಸವದ ಪೀಠಿಕೆ ಮಾತಾಡಿದರು, 'ಯಾರನ್ನು ಮುಖ್ಯ ಅತಿಥಿಯನ್ನಾಗಿ ಕರೆಸೋಣ?' ಎಂದು ಎಲ್ಲರ ಮುಖ ನೋಡಿದರು. ಒಬ್ಬ ಅಧ್ಯಾಪಕರು ಮಂತ್ರಿಯೊಬ್ಬನ ಹೆಸರು ಹೇಳಿದರು. ಇನ್ನೊಬ್ಬರು ಮೈಸೂರಿನ ಸಾಹಿತಿಯೊಬ್ಬರ ಹೆಸರು ಹೇಳಿದರು. ಅದಾಗದೆಂದು ಗಿರೆಪ್ಪ ಒಬ್ಬ ಜನಪ್ರಿಯ ಸಿನಿಮಾ ನಟನ ಹೆಸರು ಹೇಳಿದ. ಕೊನೆಗೆ ಸಾಹಿತಿಗಳನ್ನೇ ಕರೆಸುವುದೆಂದು ತೀರ್ಮಾನಿಸಿದರು.

ಈ ವರ್ಷದ ಯೂನಿಯನ್ ಉದ್ಘಾಟನೆ ಆಗಬೇಕಿತ್ತಲ್ಲ. ದಶಮಾನೋತ್ಸವದೊಂದಿಗೇ ಅದೂ ಆಗಲೆಂದು ಜೀಕೆ ಸೂಚಿಸಿದರು. ಎಲ್ಲರೂ ಒಪ್ಪಿಕೊಂಡರು. ಗಿರೆಪ್ಪ ಈಗ ಬಾಯಿ ಹಾಕಿದ.

‘ಸರ್, ಹಾಂಗ ಮಾಡಾಕ ಆಗಾಣಿಲ್ಲರಿ. ಎರಡೂ ಬ್ಯಾರೆ ಬ್ಯಾರೆ ಆಗಲಿ.’

‘ಹೌಂದಪಾ, ಎರಡೂ ಕಾಲೇಜಿನ ಕಾರ್ಯಕ್ರಮ. ಎರಡೂ ಕಾರ್ಯಕ್ರಮ ಬ್ಯಾರೆ ಬ್ಯಾರೆ ಆದರೆ ಹುಚ್ಚುಚ್ಚಾರ ಖರ್ಚ ಆಗತೈತಿ, ಅದಕ್ಕೆರಡ ದಿನ, ಇದಕ್ಕೆರಡ ದಿನ ಅಂದರ ಹುಡ್ರ ಅಭ್ಯಾಸ ಹಾಳ ಆಗತೈತಿ’ - ಎಂದು ಮುನ್ಸಿಪಾಲ್ಟಿ ಚೇರ್‌ಮನ್ ಹೇಳಿದರು. ಹೇಳಿ ಜೀಕೆ ಮುಖ ನೋಡಿದರು. ಜೀಕೆ ಹೌದೆಂದು ತಲೆ ಹಾಕಿದರು. ಗಿರೆಪ್ಪ ಥಟ್ಟನೆ ಎದ್ದು ನಿಂತು,

‘ಇದಕ್ಕೆ ಹುಡುಗರು ಒಪ್ಪೋಹಾಂಗ ಕಾಣ್ಸಲ್ಲರಿ’ ಎಂದ.

‘ಒಪ್ಪದಿದ್ದರ ಹೆಂಗಪಾ, ನೀ ಯೂನಿಯನ್ ಅಧ್ಯಕ್ಷ, ಒಪ್ಪಸಬೇಕಪಾ.’

- ಎಂದೊಬ್ಬ ಅಧ್ಯಾಪಕರೆಂದರು. ತನ್ನನ್ನಿವರು ಬರೀ ನಾಮಕಾವಾಸ್ತೆ ಕರೆಸಿದ್ದಾರೆನ್ನಿಸಿತು ಗಿರೆಪ್ಪನಿಗೆ.

‘ನಾ ಹೇಳಿದ ಮಾತ ಒಂದೂ ನಡ್ಯಾಣಿಲ್ಲಂದ ಮ್ಯಾಲ ಅಧೆಂಗ ಒಪ್ಪಾಕಾದೀತ್ರಿ ಸರ್? ನಮ್ಮ ಮಾತ ನಡ್ಯಾಣಿಲ್ಲಂದ ಮ್ಯಾಲ ನಮ್ಮನ್ಯಾಕ ಕರಿಸಿದಿರಿ? ನೀವಃ ಮಾಡಿಕೊಳ್ರಿ.’

- ಎಂದು ಹೇಳಿ ಸರ‍್ರನೆ ಹೋಗಿಬಿಟ್ಟ.

- ಜೀಕೆ ಮಾಸ್ತರ ಇದನ್ನು ನಿರೀಕ್ಷಿಸಿರಲಿಲ್ಲ. ಒಳಗವರು ಉರಿಯುತ್ತಿದ್ದರೆಂಬುದನ್ನು ಅವರ ಕಣ್ಣುಗಳಿದಲೇ ಯಾರೂ ಊಹಿಸಬಹುದಿತ್ತು. ಕೈ ಕೈ ಹಿಸುಕಿಕೊಂಡು ತನ್ನನ್ನೇ ನೋಡುತ್ತಿದ್ದ ಎಲ್ಲರ ದೃಷ್ಟಿಗಳನ್ನು ನಿವಾರಿಸಿ ಏನೋ ಕಾಗದ ಹುಡುಕುವಂತೆ ಫೈಲುಗಳಲ್ಲಿ ಕೈ ಹಾಕಿದರು. ಆದರೆ ಸಹಾನುಭೂತಿಯ ದೃಷ್ಟಿಗಳನ್ನು ಎಲ್ಲರೂ ತನ್ನ ಮೈಯಲ್ಲಿ ನೆಟ್ಟದ್ದಾರೆ - ಎನ್ನಿಸಿತು. ಈಗ ಮೀಟಿಂಗಿಗೆ ಒಂದು ಮುಕ್ತಾಯ ಕೊಡಬೇಕಾದವರು ತಾವೇ ಎಂದುಕೊಂಡು ‘ಆಯ್ತು, ಡೇಟಗೀಟ ನೋಡಿಕೊಂಡು ನಿಮಗೆ ತಿಳಿಸ್ತೀವಿ’ ಎಂದು ಮುನ್ಸಿಪಾಲ್ಟಿ ಅಧ್ಯಕ್ಷರತ್ತ ನೋಡಿದರು. ಅವರಿಗಿದು ‘ಎದ್ದು ಹೊರಡು’ ಎಂಬಂತೆ ಕೇಳಿಸಿ ಸಪ್ಪಳ ಮಾಡದೆ ಹೋದರು. ಉಳಿದವರೂ ಮರೆಯಾದರು.

ಜೀಕೆ ಇದನ್ನು ನಿಜವಾಗಿಯೂ ನಿರೀಕ್ಷಿಸಿರಲಿಲ್ಲ. ಹಾಲಿ ವಿದ್ಯಾರ್ಥಿಗಳು ಮುಂಚಿನಂತಿಲ್ಲವೆಂಬ ಸಂಗತಿ ಅವರ ಅರಿವಿಗೆ ಬಾರದ್ದೇನಲ್ಲ. ನಮ್ಮ ನಿಮ್ಮಂಥವರಿಗೆ ಜೀಕೆ ಅದ್ಯಾಕಿಷ್ಟು ತಲೆಕಡೆಸಿಕೊಂಡರೆಂದೂ ಅನ್ನಿಸೀತು, ಹಾಗೆ ನೋಡಿದರೆ. ಅಂದರೆ ನಾವು ನೋಡವ ಈಚಿನ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಗಿರೆಪ್ಪ ತುಂಬ ಅಸಭ್ಯವಾಗೇನೂ ವರ್ತಿಸಿರಲಿಲ್ಲ. ಆದರೆ ಕಟ್ಟುನಿಟ್ಟಿಗೆ ಹೆಸರಾದ ಜೀಕೆಗೆ ಇಷ್ಟು ಸಾಕಯ್ತು. ಇದೂ ನಿಜ. ಅವರ ಅಧ್ಯಾಪಕ ವೃತ್ತಿಯಲ್ಲೇ ಇಂಥ ಅವಿಧೇಯತೆಯನ್ನು ಅವರು ಎದುರಿಸಿರಲಿಲ್ಲ. ಕಮಿಟಿ ಸದಸ್ಯರು ಹೋದುದಷ್ಟೇ ತಡ, ಟ್ರಿಣ್ಣೆಂದು ಗಂಟೆ ಬಾರಿಸಿದರು. ಸಿಂಗಪ್ಪ ಬಂದ, ಇನ್ನೇನು ‘ಕರಿ ಆ ಗಿರ‍್ಯಾನ’ ಎಂದು ಹೇಳುವವರಿದ್ದರು ಅದ್ಯಾಕೋ ತಡೆದು ಎನ್ಟೀನ್ನ ಕರಿ’ ಅಂದರು.

೩

ಎನ್.ಟಿ. ಆಯೋಗ್ಯ ಮತ್ತು ಅಜ್ಞಾನಿ ಅಧ್ಯಾಪಕನೆಂದು ಇವರಿಗೂ ಗೊತ್ತಿತ್ತು. ಸಣ್ಣ ಮನಸ್ಸಿನವ. ಸಾಮಾನ್ಯ ಮನುಷ್ಯರಲ್ಲಿರುವುದಕ್ಕಿಂತ ತುಸು ಹೆಚ್ಚಾಗಿಯೇ ದ್ವೇಷಾಸೂಯೆ ಅವನಲ್ಲಿದ್ದವು. ತಾನು ಕಂಡ ಯಾರ ಬಗ್ಗೆಯೂ ಆತ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡವನಲ್ಲ. ಸದಾ ಏನಾದರೊಂದು ಚಾಡಿ ಹೇಳುತ್ತ ಕಂಗೆಡುತ್ತ ಗೋಗೆರವಾತ. ಗಂಟೆಗಟ್ಟಳೆ ಬೇಕಾದರೆ ಆತ ಒಬ್ಬರ ಬಗ್ಗೆಯೇ ಚಾಡಿ ಹೇಳಬಲ್ಲವನಾಗಿದ್ದ. ಒಮ್ಮೆ ಇವ ‘ವಿಧ್ಯೆ, ವಿಧ್ಯಾರ್ಥಿ’ ಎಂದು ಬೋರ್ಡಿನ ಮೇಲೆ ಬರೆದು ಹಾಸ್ಯಸ್ಪದನಾಗಿದ್ದ.

ಹುಡುಗರಿಂದ ಇದು ಗೊತ್ತಾಗಿ ಜೀಕೆ ಕರೆದು ಕೇಳಿದರೆ 'ಇಲ್ಲರಿ ಸರ, ಬ್ರಾಮಣ ಹುಡುಗರಿಗೆ ನನ್ನ ಕಂಡರ ಆಗಾಣಿಲ್ಲರಿ; ಅದಕ್ಕs ಹಿಂಗ ಹೆಳ್ಯಾರ್ರಿ' ಎಂದು ಏನೇನೋ ತೊದಲಿದ. ಜೀಕೆ ಹುಬ್ಬೆರಿಸಿ 'ಅಯೋಗ್ಯ ನಿನ್ನ ಯೋಗ್ಯತೆ ನನಗ್ಗೊತ್ತಿಲ್ಲೇನು? ನಾಳೆಯಿಂದ ದಿನಾ ಹತ್ತು ಪುಟ ಕನ್ನಡ ಕಾಂಪೊಜಿಶನ್ ಬರದ ತೋರಿಸು' ಎಂದು ಗದರಿದ್ದರು. ಆಶ್ಚರ್ಯವೆಂದರೆ ಮಾರನೇ ದಿನ ಅವ ಗಂಭೀರವಾಗಿ ಹತ್ತು ಪುಟ ಬರೆದುಕೊಂಡು ಜೀಕೆ ಹತ್ತಿರ ಹೋಗಿ ಬೈಸಿಕೊಂಡಿದ್ದ. ಅವನ ಪಾಠಗಳೆಂದರೆ ಭಾರೀ ಬೋರು. ಇದು ತಿಳಿದು ಹುಡುಗರು ಅವನನ್ನು ಎನ್ಟಿ ಅನ್ನುವುದುರ ಬದಲು ಎಮ್ಟಿ ಎಂದು ಮೂಡು ಬಂದರೆ 'ಎಮ್ಟಿ ಎಮ್ಟಿ ಫೋರಟ್ವೆಂಟಿ' ಎಂದು ಗೇಲಿ ಮಾಡುತ್ತಿದ್ದರು. ಇದನ್ನು ಕೇಳಿ ಕೇಳಿ ಅವನ ಕಿವಿ ಎಷ್ಟು ದಡ್ಡು ಬಿದ್ದಿದ್ದವೆಂದರೆ ಸರಿಕರೆದುರು ಇದು ಕೇಳಿಸಿದಾಗಲೂ ಅವನಿಗೆ ಸಿಟ್ಟೇ ಬರುತ್ತಿರಲಿಲ್ಲ.

ತನ್ನ ಈ ಐಬುಗಳನ್ನೆಲ್ಲ ಆತ ಚಾಡಿ ಹೇಳುವುದರಿಂದ ತುಂಬಿಕೊಳ್ಳುತ್ತಿದ್ದ. ಮತ್ತು ಆ ಮೂಲಕವಾದರೂ ಜೀಕೆ ಫೆವರ್ ಗಳಿಸಲು ಪ್ರಯತ್ನಿಸುತ್ತಿದ್ದ. ಚಾಡಿಯೆಂದರೆ ದುರುದ್ದೇಶವುಳ್ಳ ಅತಿಶಯೋಕ್ತಿ ಇಲ್ಲವೆ ಸುಳ್ಳು ತಾನೆ? ಪ್ರತಿ ಮಾತಿಗೂ ಹಸ್ತಾಭಿನಯ ಮುಖಾಭಿಯನ ಮಾಡುವುದು ಅವನ ರೂಢಿ. ಮತ್ತು ಆ ಅಭಿನಯವೋ ಎದುರಿನವರು ತನ್ನ ಮಾತನ್ನು ನಂಬುತ್ತಿಲ್ಲವೆಂದು ಅದನ್ನು ಸಾಧ್ಯವಾದಷ್ಟು ರೀತಿಯಿಂದ ನಂಬಿಸಲೇಬೇಕೆಂದು ಪ್ರಯತ್ನ ಮಾಡುತ್ತಿದ್ದ ಹಾಗಿರುತ್ತಿತ್ತು. ಜೀಕೆ ಸ್ವಭಾವ ಗೊತ್ತಿದ್ದವರಿಗೆ ಈಗ ಅಶ್ಚರ್ಯವಾಗಬಹುದು. ಯಾಕೆಂದರೆ ಈ ಹಿಂದೆ ಅವರೆಂದೂ ಒಬ್ಬರ ವಿಚಾರವಾಗಿ ಯಾರನ್ನು ಕೇಳಿದರೂ ಎನ್‌ಟಿಯನ್ನು ಕೇಳಿದವರಲ್ಲ.

ಸಿಂಗಪ್ಪನ ಜೊತೆ ಎನ್‌ಟಿ ಗಾಬರಿಯಲ್ಲೇ ಜೀಕೆ ಛೇಂಬರಿಗೆ ಬಂದ. ತನ್ನ ವಿರುದ್ಧ ಏನು ದೂರಿದೆಯೋ ಎಂದು ಆತಂಕಗೊಂಡಿದ್ದವನಿಗೆ ಗಿರೆಪ್ಪನ ಬಗ್ಗೆ ಕೇಳಿದಾಗ, ಮನಸ್ಸು ಹಗುರಾಗಿ, ಇನ್ನಷ್ಟು ಉತ್ಸಾಹದಿಂದ, ಇನ್ನಷ್ಟು ಅತಿಶಯೋಕ್ತಿ ಬೆರಸಿ, ಗಿರೆಪ್ಪನ ಪೂರ್ವಾಪರ ಹೇಳಿ,-

'ಸರ, ಅವನ ಭಾಳ ಹಲಕಟ್ಟಿದ್ದಾನ್ರಿ. ಆ ಕ್ರಿಶ್ಚಿನ್ ಹುಡುಗಿ ರೋಜಾ ಇದ್ದಾಳಲ್ಲರಿ, ಆಕೀನ್ನ ಇಟ್ಟಕೊಂಡಾನವ.'

- ಎಂದ. ಜೀಕೆ ಹುಬ್ಬು ಗಂಟುಹಾಕಿ ಏರಿಸಿದರು. ನಂಬಲಿಲ್ಲವೆಂದು ಅನುಮಾನವಾಗಿ,

'ಅಂದರ ಅವ ಮತ್ತ ಆಕಿ ಯಾವತ್ತೂ ಕೂಡಿಕೊಂಡs ಇರತಾರರಿ.'

- ಎಂದ. ಜೀಕೆ ಹಾಗೇ ಹುಬ್ಬೇರಿಸಿಕೊಂಡೇ ಇವನನ್ನು ನೋಡುತ್ತಿದ್ದರು.

ಮತ್ತೆ,

'ಅಂದರ ಅವ ಯಾವತ್ತೂ ಆಕಿ ಎಡಬಲಾ ಓಡ್ಯಾಡತಾನ್ರಿ.'

- ಎಂದ. ಅವನು ಹೇಳುವ ತನಕ ನಡುವೆ ಬಾಯಿ ಹಾಕದೆ, ಹಾಹೂ ಎನ್ನದೆ, ಮುಖದಲ್ಲಿ ಯಾವ ಭಾವನ್ನೂ ತೋರಿಸದೆ ಕೇಳಿದರು. ಕೇಳಿ, 'ಆಯ್ತು ನೀ ಹೋಗು' ಎಂದರು. ಅಂದರೆ ಅವನು ಅಷ್ಟರಲ್ಲಿ ಹೋಗಿದ್ದ.

ಆ ದಿನ ಜೀಕೆ ಕಳಕಳಿಯಿಂದಲೇ ಕ್ಲಾಸಿಗೆ ಹೋದರು. ಕ್ಲಾಸಿನ ತುಂಬ ಒಮ್ಮೆ ಕಣ್ಣಾಡಿಸಿ ಹಾಜರಿ ಬುಕ್ಕನ್ನು ಕೈಗೆತ್ತಿಕೊಂಡರು. ವಿದ್ಯಾರ್ಥಿಗಳ ಹೆಸರು ಕೂಗುತ್ತ 'ರೋಜಾ' ಎಂದರು. 'ಎಸ್ಸರ್' ಎಂದೊಂದು ಹೆಣ್ಣಿನ ದನಿ ಕೇಳಿದೊಡನೆ ತಲೆ ಎತ್ತಿ ದನಿ ಬಂದ ಕಡೆ ನೋಡಿದರು. ಇಬ್ಬರ ಕಣ್ಣು ಕೂಡಿದವು. ಒಂದು ಕ್ಷಣ ಹಾಗೆ ನೋಡಿ ಮತ್ತೆ ಮುಂದಿನ ಹೆಸರಿಗೆ ಹೋದರು. ಸ್ಪೆಶಲ್ಲಾಗಿ ಆಕೆಯನ್ನು ಗಮನಿಸಿದರಲ್ಲ, ಓಹೊ, ಅವಳ ವ್ಯವಹಾರ ಪ್ರಿನ್ಸಿಪಾಲರವರೆಗೆ ಹೋಗಿದೆಯೆಂದು, ಅವಳಿಗೇನೋ ಕಾದಿದೆಯೆಂದು ಹುಡುಗರು ಆಡಿಕೊಂಡರು. ಆಯ್ತು, ಜೀಕೆ ಕಾಳಿದಾಸನ ವಿಕ್ರಮೋರ್ವಶೀಯವನ್ನ ಅದೇ ತಮ್ಮ ನಗಾರಿ ದನಿಯಲ್ಲಿ ಸುರು ಮಾಡಿದರು. ಓದಿ ವಿವರಿಸುವಾಗ ಕದ್ದು ಕದ್ದು ಅವಳ ಕಡೆ ನೋಡಿದರು. ಆದರೆ ಹಾಳಾದ ಆ ಹುಡುಗಿ ಇವರಿಗಿಂತ ಮೊದಲೇ ಬಹುಶಃ ಭಯದಿಂದ ಅಗಲವಾಗಿ ತೆರೆದ ತನ್ನ ಬಟ್ಟಲುಗಣ್ಣುಗಳಿಂದ ಇವರನ್ನೇ ನೋಡುತ್ತಿದ್ದಳು. ತಪ್ಪು ಮಾಡಿದವರಂತೆ ತಕ್ಷಣ ದೃಷ್ಟಿಯ ಗುರಿ ಬದಲಿಸಿ ಮತ್ತೆ ಪುಸ್ತಕದತ್ತ ಇಲ್ಲವೆ ಬೇರೆಯವರತ್ತ ನೋಡುತ್ತಾ ಪಾಠ ಮಾಡುತ್ತಿದ್ದರು.

ಇದಕ್ಕಿದ್ದಂತೆ ಹುಡುಗರೆಲ್ಲ ಪಾಠದ ಕಡೆ ಗಮನ ನೀಡದೆ ತಮ್ಮನ್ನು ಮತ್ತು ಆ ಹುಡುಗಿಯನ್ನು ಮಾತ್ರ ವಿಶೇಷವಾಗಿ ಗಮನಿಸುತ್ತಿದ್ದಾರೆಂದು ಅನ್ನಿಸಿತು. ತಕ್ಷಣ ಅದೇನು ಚಾತುರ್ಯವೋ ಸಿದ್ಧಬುದ್ಧಿಯೋ ಅವಳ ಕಡೆ ನೋಡದೆ ಊರ್ವಶಿಯ ರೂಪಲಾವಣ್ಯವನ್ನು ಆವೇಶಭರಿತರಾಗಿ ಚಮತ್ಕಾರದ ಅಲಂಕಾರಿನ ಭಾಷೆಯಲ್ಲಿ ವರ್ಣಿಸತೊಡಗಿದರು. ತುಂಬ ಸೂಕ್ಷ್ಮಗ್ರಾಹಿ ಹುಡುಗರು ಅವರ ದನಿ, ಅವರಿಗೆ ಅಸಹಜವಾದ ರೀತಿಯಲ್ಲಿ ತಾರಕಕ್ಕೇರಿದ್ದನ್ನು ಗಮನಿಸಿದರು. ಜೀಕೆ ಮುಖದಲ್ಲಿ ಬೆವರೊಡೆದಿತ್ತು ಎಂದರೆ ಅವರು ಹ್ಯಾಗೆ ಮತ್ತು ಎಷ್ಟು ಭಾವಪೂರಿತರಾಗಿದ್ದರೆಂಬುದನ್ನು ಊಹಿಸಬಹುದು. ಇನ್ನೇನು ಅವರು ವಿವರಿಸುತ್ತಿದ್ದ ಪದ್ಯ ಮುಗಿದು ಇನ್ನೊಂದು ಪದ್ಯ ಓದಬೇಕು; ಮತ್ತು ಆಗಲಾದರೂ ಅವರು ತಮ್ಮ ಸಹಜ ನಗಾರಿ ದನಿಗೆ ಬಂದಾರೆಂದು ಹುಡುಗರು ಹಾರೈಸುತ್ತಿದ್ದಾಗ, ಆ ಹುಡುಗಿ, ಅದೇ ರೋಜಾ ಎಂಬವಳು ತೇಲಗಣ್ಣು ಮೇಲುಗಣ್ಣಾಗಿ ಬವಳಿ ಬಂದು ಪಕ್ಕದ ವಿದ್ಯಾರ್ಥಿನಿಯ ಮೇಲೆ ಮೂರ್ಛೆ ಬಿದ್ದಳು. ಬಿದ್ದ ಸಪ್ಪಳಕ್ಕೆ ವಿದ್ಯಾರ್ಥಿಗಳಲ್ಲಿ ಗಲಿಬಿಲಿಯಾಗಿ ಜೀಕೆ ಪಾಠ ನಿಲ್ಲಿಸಿ ಮನುಷ್ಯರೊಳಗೆ ಬಂದರು. ಅಕ್ಕಪಕ್ಕದ ವಿದ್ಯಾರ್ಥಿಗಳಾಗಲೇ ಅವಳ ಸುತ್ತ ಮುಕರಿದ್ದರು. ಹುಡುಗಿಯೊಬ್ಬಳು ಪುಸ್ತಕದಿಂದ ಗಾಳಿ ಬೀಸುತ್ತಿದ್ದಳು. ಅಷ್ಟರಲ್ಲಿ ಸಿಪಾಯಿ ಸಿಂಗಪ್ಪ ನೀರು ತಂದು ರೋಜಾಳ ನೆತ್ತಿಗೆ ಬಡಿದು ಮುಖಕ್ಕೆ ಸಿಂಪಡಿಸಿದ. ಡಾಕ್ಟರಿಗೆ ಫೋನ್ ಮಾಡಲು ಒಬ್ಬ ಓಡಿದ. ಪಕ್ಕದ ಕ್ಲಾಸಿನಲ್ಲಿದ್ದ ಒಬ್ಬಿಬ್ಬರು ಅಧ್ಯಾಪಕರೂ ಬಂದರು. ಒಟ್ಟಿನಲ್ಲಿ ಅದೊಂದು ದೃಶ್ಯವೆ ಆಯ್ತು. ತುಸು ಹೊತ್ತಾದ ಮೇಲೆ ಹುಡುಗಿ ಮೆಲ್ಲಗೆ ಕಣ್ಣು ತೆರೆದಳು. ಸದ್ಯ ಜೀವ ಬಂತಲ್ಲ ಎಂದುಕೊಂಡು ಜೀಕೆ ಮೆಲ್ಲನೆ ತುಟಿ ಪಿಟಕ್ಕೆನ್ನದೆ, ಯಾರ ಕಡೆಗೂ ನೋಡದೆ ತಮ್ಮ ಛೇಂಬರಿಗೆ ಹೋದರು.

ತಮ್ಮ ಕ್ಲಾಸುಗಳಲ್ಲಿ ಹಿಂದೆಂದೂ ಹೀಗೆ ಆಗಿರಲಿಲ್ಲವಲ್ಲ, ಜೀಕೆ ತುಸು ಚಿಂತೆ ಮಾಡಿದರು. ಮುಖ ಕಪ್ಪಿಟ್ಟಿತು. ಕರ್ಚೀಫಿನಿಂದ ಒರೆಸಿಕೊಂಡರು. ಅವರಿಗೆ ಆಶ್ಚರ್ಯವಾದದ್ದು ಆ ಹುಡುಗಿ ಮೂರ್ಚೆ ಬಿದ್ದದ್ದಕ್ಕಲ್ಲ; ಬಿದ್ದಿದ್ದಾಳು, ಮೈಯಲ್ಲಿ ಹುಷಾರಿರಲಿಕ್ಕಿಲ್ಲ, ಇಲ್ಲಾ ನಿದ್ದೆಗೆಟ್ಟಿದ್ದಾಳು. ಆದರೆ ತನ್ನ ದನಿ ಈ ದಿನ ಅಸ್ವಾಭಾವಿಕ ರೀತಿಯಲ್ಲಿ ಏರಿದ್ದಿತ್ತಲ್ಲ, ಅದಕ್ಕೆ. ಯಾಕೆ ಹೀಗಾಯ್ತೆಂದು ಕಾರಣ ತಿಳಿಯಲು ನೋಡಿದರು, ಬಗೆಹರಿಯಲಿಲ. ಎಂದು ಹೊರಗೆ ಹೋಗಿ ದೂರದಲ್ಲಿ ಗುಂಪು ಗುಂಪಾಗಿ ನಿಂತಿದ್ದ ಹುಡುಗರನ್ನು ಮತ್ತೆ ಕ್ಲಾಸಿಗೆ ಕಳಿಸಿ, ಕ್ಲಾಸುಗಳು ಯಥಾಪ್ರಕಾರ ನಡಯುವ ತನಕ ಅಲ್ಲೇ ನಿಂತರು. ಹುಡುಗರಲ್ಲಿ ಗಿರೆಪ್ಪನೂ ನಿಂತಿದ್ದ. ಈಗ ಅವರ ತಲೆಯಲ್ಲಿ ಮತ್ತೆ ಎಂಟಿ ಹೇಳಿದ ಮಾತು ನುಸುಳಿದವು. ಮೂರ್ಛೆ ಬಿದ್ದ ಹುಡುಗಿಯನ್ನು ಜ್ಞಾಪಿಸಿಕೊಂಡರು. ಹುಡುಗಿಯೇನೋ ಚೆಲುವೆಯೇ. ಬಿಳಿ ಹುಡುಗಿ. ಆ ವಯಸ್ಸಿಗೆ ತುಸು ಹೆಚ್ಚೆನಿಸುವಂತೆ ಬೆಳೆದಿದ್ದಳು. ದಟ್ಟಕೂದಲಿನ, ಕತ್ತಿ ಧಾರೆಯಂಥ ಎಡಬೈತಲೆಯ ಪುಟ್ಟತಲೆ, ಸುಂದರವಾಗಿ ಬಾಗಿದ ಹುಬ್ಬು, ಮೂಗು ನೀಳವಾಗಿ ಅಂತ್ಯದಲ್ಲಿ ತುಸು ಚಪ್ಪಟೆಯಾಗಿ ಅವಳ ಸೌಂದರ್ಯವನ್ನು ಹೆಚ್ಚಿಸಿತ್ತೆನ್ನಬಹುದು. ತೆಳುದುಟಿಯ ಪುಟ್ಟಬಾಯನ್ನು ಅರೆ ತೆರದಿದ್ದಳಾದರೂ ಸಹಜವಾಗಿ ಸಖಿಯ ಆಲಿಂಗನದಲ್ಲಿ ನಿದ್ದೆ ಹೋಗಿದ್ದಾಳೆನಿಸುತ್ತಿತ್ತೇ ಹೊರತು ಮೂರ್ಛೆ ಬಿದ್ದಿದ್ದಾಳೆಂದು ಅನಿಸುತ್ತಲೇ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅವರು ಮೆಚ್ಚಿದ್ದು ಅವಳ ಮುಖಭಾವವನ್ನ, ಅದು ಮಗುವಿನಂತೆ ಮುಗ್ಧವಾಗಿತ್ತು ಮತ್ತು ಸರಳವಾಗಿತ್ತು. ಇಂಥವಳು ಗಿರೆಪ್ಪನನ್ನು ಮೆಚ್ಚುವಳೆ? ಆತ ಸೊಕ್ಕಿನ

ಕಾಡುಕೋಣದಂತಿದ್ದ. ಆ ಕಾಡು ಪ್ರಾಣಿಗೂ ಈ ಹೂ ಮುಗ್ದೆಗೂ ಎಲ್ಲಿಯ ಸಂಬಂಧ ಸಾಧ್ಯ? ಎಲ್ಲೋ ಮಾತಾಡಿದ್ದಾರಾದೀತು. ಅವನೇನೋ ಅಂಥವನೇ. ತಾನೇ ಮ್ಯಾಲೆಬಿದ್ದು ಹಲ್ಲುಗಿಂಜಿ ಮಾತಾಡಿಸಿದ್ದಾನು. ಅವ ಏನೆಂದನೋ, ಇವಳೇನಂದಳೋ, ಅಷ್ಟಕ್ಕೇ ಕೈಕಾಲು ಮೂಡಿಸಿ ಕಥೆ ಕಟ್ಟಿದ್ದಾರಾದೀತು. ಕಥೆಯೇ ಅನ್ನೋದಾದರೆ ಇಂಥ ಎಷ್ಟನ್ನು ತಾನು ಕೇಳಿಲ್ಲ? ಇದೂ ಅಂಥದೇ ಒಂದು ಎಂದು ಮನಸ್ಸಿನಿಂದ ಆ ವಿಚಾರ ತಳ್ಳಿಹಾಕಿ ಹಿಂದಿರುಗಿದರು.

೨೫

ಅದಾಗಿ ಐದಾರು ದಿನ ಮಹತ್ವದ್ದೇನೂ ಘಟಿಸಲಿಲ್ಲ. ದಶಮಾನೋತ್ಸವದ ತಯಾರಿ ತನ್ನ ಪಾಡಿಗೆ ತಾನು ನಡೆಯುತ್ತಿತ್ತು. ಎಲ್ಲರಿಗೂ ಕೆಲಸ ಹಂಚಿದ್ದರಿಂದ ಅವರವರು ತಂತಮ್ಮ ಕೆಲಸ ನೋಡಿಕೊಳ್ಳುತ್ತಿದ್ದರು. ಮೈಸೂರಿನ ಸಾಹಿತಿಗಳೊಬ್ಬರು ಮುಖ್ಯ ಅತಿಥಿಗಳಾಗಿ ಬರಲು ಒಪ್ಪಿದ್ದು ಅವರನ್ನು ಕರೆತರು, ಇಳಿಸುವ ಏರ್ಪಾಡುಗಳಾಗಿದ್ದವು. ಯಾರು ಸ್ವಾಗತಿಸಬೇಕು, ಯಾರು ವರದಿವಾಚನ ಮಾಡಬೇಕು, ಯಾರು ವಂದನಾರ್ಪಣೆ ಮಾಡಬೇಕು - ಇವೆಲ್ಲ ನಿರ್ಧಾರವಾಗಿಬಿಟ್ಟಿದ್ದವು. ಅಂದಿನ ಮೀಟಿಂಗಿನಿಂದ ಅಸಮಾಧಾನಗೊಂಡು ಹೋದ ಗಿರೆಪ್ಪನೂ ಜೀಕೆ ಮಾಸ್ತರರನ್ನು ಎದುರುಹಾಕಿಕೊಳ್ಳದೆ ದಾರಿಗೆ ಬಂದಿದ್ದ. ಈ ಮಧ್ಯೆ ಜೀಕೆ ಮೂರು ಬಾರಿ ರೋಜಾಳ ಕ್ಲಾಸಿಗೆ ಹೋಗಿದ್ದರು. ಮೊದಲೆರಡು ದಿನ ಅವಳು ಕ್ಲಾಸಿಗೆ ಬಂದಿರಲಿಲ್ಲ. ಮೂರನೇ ದಿನ ಬಂದಿದ್ದಳಾದರೂ ನಾಚಿಕೊಂಡು ಹುಡುಗಿಯರಲ್ಲಿ ಹುದುಗಿಕೊಂಡೇ ಪಾಠ ಕೇಳಿದ್ದಳು. ಎಲ್ಲರೆದುರಿನಲ್ಲಿ, ಅದೂ ಪ್ರಿನ್ಸಿಪಾಲರ ಕ್ಲಾಸಿನಲ್ಲಿ ಮೂರ್ಛೆ ಬಿದ್ದುದರಿಂದ ಹುಡುಗಿ ನಾಚಿ ನೀರಾಗಿರಲೂ ಸಾಕು. ಅವಳ ಸಂಕೋಚವನ್ನಾದರೂ ದೂರ ಮಾಡುವುದು ಒಳ್ಳೆಯದೆಂದು ಏನಿಲ್ಲದಿದ್ದರೂ ಕರೆದು ಆರೋಗ್ಯ ವಿಚಾರಿಸೋಣವೆಂದು ಲೇಡೀಸ್ ರೂಮಿಗೆ ಸಿಂಗಪ್ಪನನ್ನು ಕಳಿಸಿದರು.

ಈ ಹುಡುಗಿ ಛೇಂಬರಿಗೆ ಬಂದಾಗ ಇವರ ಲೆಕ್ಕಾಚಾರ ತಲೆಕೆಳಗಾದದ್ದು ನಿಜ. ನಾಚಿಕೆಯಾಗಲಿ ಭಯವಾಗಲಿ ಅವಳ ಮುಖದಲ್ಲಿರಲೇ ಇಲ್ಲ. ಮಾತ್ರವಲ್ಲ, ಒಳಗೊಳಗೇ ನಗುತ್ತಿದ್ದಳೆಂದು ಮತ್ತು ತುಳುಕುವ ಆ ನಗೆಯನ್ನು ಪ್ರಯತ್ನಪೂರ್ವಕ ನಿಯಂತ್ರಿಸಿದ್ದಾಳೆಂದು ಅವಳ ಕಣ್ಣು ತುಟಿಗಳಿಂದ ತಿಳಿಯುತ್ತಿತ್ತು. ಅವಳು ಧರಿಸಿದ್ದ ಉಡುಪಿನಲ್ಲಿ ಕೂಡ ಒಂದು ಸ್ಪಷ್ಟವಾದ ಉದ್ದೇಶವಿದ್ದಂತಿತ್ತು. ತನ್ನ ಅಂಗಸೌಷ್ಠವದ ಕೆಲವು ಉದ್ರೇಕಕಾರಿ ಪ್ರದೇಶಗಳ ಮೇಲೆ ಒತ್ತುಕೊಡುವುದಕ್ಕಾಗಿ, ಅಂದರೆ ಅವು ಒಡೆದು ಕಾಣುವುದಕ್ಕಾಗಿ ಜೀನ್ಸ್ ಪ್ಯಾಂಟು ಮತ್ತು ಟೀಷರ್ಟು ಧರಿಸಿದ್ದಳು. ನಿಷ್ಕಾಳಜಿಯಿಂದ ಇಲ್ಲವೆ ಅಂಕ ಮೀರಿ ಎಂಬಂತೆ ಕೂದಲು ಕೆನ್ನೆ ಹಣೆಗಳ ಮೇಲೆ ಸ್ವಚ್ಛಂದವಾಗಿ ಹರಿದಾಡುತ್ತಿದ್ದು ಅದನ್ನು ಎಡಗೈ ಕಿರಿಬೆರಳಿನಿಂದ ಹಿಂದೆ ಸರಿಸಿಕೊಳ್ಳುವಲ್ಲಿ ಒಂದು ಮಾದ ಸ್ಟೈಲಿತ್ತು.

ಭಾವೀ ಪ್ರಜೆಗಳ ಬಗ್ಗೆ ಜೀಕೆ ಅಸಮಾಧಾನಗೊಂಡರು. ಇನ್ನು ಮೇಲೆ ದೇಶ ಹಾಳಾಗುವುದರ ಬಗ್ಗೆ ಅವರಿಗೆ ಸಂಶಯವೇ ಉಳಿಯಲಿಲ್ಲ. ಅವರ ಹಳೆ ಥಿಯರಿ ಈಗ ಗೆಲುವಾಯಿತು. ಕೆಳಜಾತಿ ಮುಂಡೇದು. ಒಂದು ನೀತಿಯೇ, ಒಂದು ನಿಯಮವೇ? ಚಿಗುರು ಮೊಲೆ ಮೂಡಿದರೆ ಎದುರು ಕಾಣುವುದಿಲ್ಲ; ಇನ್ನು ಇಷ್ಟು ದೊಡ್ಡ ಮೊಲೆ ಮೂಡಿದರೆ ನನ್ನಂಥವನೇನು, ಇಡೀ ದೇಶವೇ ಕಾಣಿಸೋದಿಲ್ಲ. ಎದುರು ನಿಂತವಳಿಗೆ ಏನಾದರೂ ಹೇಳಬೇಲ್ಲ. ಮೊದಲಿನ ಸಹಾನುಭೂತಿಯ ಮಾತುಗಳು ಹಾರಿಹೋಗಿದ್ದವು. ಹಾಗೇ ಕಳಿಸಿದರೆ ಯಾಕೆ ಕರೆಸಿದ್ದು ಎಂದು ಸಂಶಯ ಬರಬಹುದಲ್ಲ. ತಾತ್ಸಾರಭರಿತ ವ್ಯಂಗ್ಯದ ದನಿಯಲ್ಲಿ 'ಕೂತುಕೋ' ಎಂದರು. ಕೂತಳು. 'ಛೇ, ಕೂರು ಎಂದೊಡನೆ ಕೂತೇಬಿಡೋದೆ? ಅದೂ ಹಿರಿಯರೆದುರಿಗೆ! ಅದೇ ಅದೇ, ಹೀನ ಜಾತಿಗೆ ಹೇಳಿ ಮಾತಡಿಸಿದ್ದಲ್ಲ ಸಂಸ್ಕೃತಿ ಎಂದರೆ, ಅದಕ್ಕೆ ಸಂಸ್ಕಾರ ಬೇಕು' - ಎಂದೇನೋ ಮನಸ್ಸಿನಲ್ಲಿ ವಟಗುಟ್ಟಿ,

'ಈಗ ಹೆಂಗ ಆರಾಮಿದ್ದಿ ಹೌಂದಲ್ಲೋ?' ಎಂದರು.

'ಹೂಂನ್ರಿ ಸರ್.'

ನಿಜ ಹೇಳಬೇಕೆಂದರೆ ಜೀಕೆ ಮಾಸ್ತರರಿಗೆ ಮಾತಾಡುವ ಮನಸ್ಸೇ ಇರಲಿಲ್ಲ. ನಿರಾಶೆಯಾಗಿತ್ತು. ಅವಳೊಬ್ಬ ಕೇವಲ ಹೂ ಮುಗ್ಧೆ ಎಂದು ಕಲ್ಪಿಸಿಕೊಂಡು ಸಮಾಧಾನ ಮಾಡೋಣವೆಂದು ಕರೆಸಿದರೆ ಇಲ್ಲಿ ಹಾವಭಾವ ಉಡುಪುಗಳಲ್ಲಿ ಹರೆಯದ ಚೂರಿಗಳನ್ನಿಟ್ಟುಕೊಂಡ ಪರಿಣತ ವಯಸ್ಸಿನ ಚದುರಿ ನಿಂತಿದ್ದಳು. ಇಂಥವಳು ಗಿರೆಪ್ಪನಂಥ ಕೋತಿಗೆ ಒಲಿಯುವಳೆ? ಆದರೆ ಆ ಕೋತಿ ಇವಳನ್ನು ಕಂಡು ಹುಚ್ಚನಾದದ್ದು ಹೆಚ್ಚಲ್ಲ - ಎನ್ನಿಸಿತು. ಆಯಿತು. ಏನಾದರೂ ಮಾತಾಡಿ ಅವಳನ್ನೀಗ ಸಾಗುಹಾಕಬೇಕಲ್ಲ.

'ಆಯಿತು, ಇನ್ನಮ್ಯಾಲ ಹಂಗೆಲ್ಲ ಕ್ಲಾಸಿನಾಗ ಮೂರ್ಛೆ ಗೀರ್ಛೆ ಬೀಳಬ್ಯಾಡ' ಎಂದರು.

ಹುಡುಗಿ ಫಕ್ಕನೆ ಮಾದಕ ನಗೆ ನಕ್ಕು, ನಕ್ಕದ್ದು ತಪ್ಪಾಯಿತೇನೋ ಎಂಬಂತೆ ಕೈಯಿಂದ ಹೊಳೆವ ಹಲ್ಲುಗಳನ್ನು ಮುಚ್ಚಿಕೊಂಡು ಬಟ್ಟಲುಗಣ್ಣುಗಳ ನೇರದೃಷ್ಟಿಯೊಂದನ್ನು ಜೀಕೆ ಮಾಸ್ತರರತ್ತ ಬೀರಿ ಹೊರಟುಹೋದಳು. ನಕ್ಕಳಲ್ಲ ಹಲ್ಲು ಫಳ್ಳನೇ ಫ್ಲಾಷ್ ಲೈಟಿನಂತೆ ಹೊಳೆದು ಜೀಕೆ ಮಾಸ್ತರರ ಹೃದಯ ಅವಳ ಭಂಗಿಯನ್ನು ಚೂಟಿ ಕೆಮರಾದಂತೆ ಸೆರೆ ಹಿಡಿದುಕೊಂಡಿತು. ಅನಿರೀಕ್ಷಿತವಾಗಿ ಮೈಕಾವೇರಿ ತತ್ತರಿಸಿ ತನ್ನ ಜೀವಮಾನದಲ್ಲಿ ಎಂದೆದೂ ಅನುಭವಿಸಿಲ್ಲದಂಥ ಬಿಸಿನೀರಿನ ಪ್ರವಾಹದಲ್ಲಿ ತಾನು ಕೊಚ್ಚಿಹೋಗುತ್ತಿರುವಂತೆ, ಬಚಾವಾಗಲಿಕ್ಕೆ ತನ್ನಲ್ಲಿ ಶಕ್ತಿಯೇ ಇಲ್ಲದಂತೆ ಅನ್ನಿಸಿ ಹತಾಶರಾಗಿ ಹಾಗೆಯೇ ಹಿಂದಕ್ಕೆ ಒರಗಿದರು.

ಯಾರೋ ಸಾಮಾನ್ಯರಾದರೆ ಅದು ಬೇರೆ ಮಾತು. ಜೀಕೆಯಂಥವರು ವಿವಶರಾಗುವುದು ನಿಜವಾಗಿಯೂ ಆಶ್ಚರ್ಯಕರವೇ. ಕಾರಣ ತಿಳಿಯಲು ಅವರು ಪಟ್ಟು ಹಿಡಿದು ಕೂತುಬಿಟ್ಟರು. ಅವಳ ಆಕರ್ಷಣೆಗೆ ಒಳಗಾದೆನೆ? ಇರಲಾರದು. ತನ್ನ ಈವರೆಗಿನ ಅನುಭವದಲ್ಲಿ ಎಷ್ಟು ಚೆಲುವೆರನ್ನ, ಎಷ್ಟು ಜನ ವಿದ್ಯಾರ್ಥಿನಿಯರನ್ನು ಕಂಡಿಲ್ಲ? ಅವರಲ್ಲಿಲ್ಲದ ವಿಶೇಷ ಇವಳಲ್ಲೇನಿದೆ? ಅಥವಾ ಅವಳೇ ತನ್ನ ಮೇಲೆ ಮೋಡಿ ಮಾಡಿದಳೆ? ಅದೂ ಇರಲಾರದು, ಯಾಕೆಂದರೆ ಅವಳು ಮಾಡಿದ್ದೇನು? ತನ್ನ ಮಾತಿಗೆ ನಕ್ಕಳಷ್ಟೆ. 'ಇನ್ನು ಮೇಲೆ ಮೂರ್ಛೆ ಬೀಳಬೇಡ' ಎಂದು ಹೇಳಿದ್ದರೆ ಎದುರಿಗಿದ್ದ ಯಾರೂ ನಗಲೇಬೇಕಾದ ಮಾತು. ಅಷ್ಟಕೆ ಅಲ್ಲಸಲ್ಲದ ಅರ್ಥಹಚ್ಚಿ ತಾನು ಗಡಿಬಿಡಿಗೊಂಡಿದ್ದು ತಪ್ಪು - ಎಂದೇ ತೀರ್ಮಾನಿಸಿದರು. ಹೀಗೆ ಎಷ್ಟು ಹೊತ್ತು ಕೂತಿದ್ದರೋ, ಅಷ್ಟರಲ್ಲಿ ದೂರದ ಕ್ಲಾಸೊಂದರಲ್ಲಿ ಗಲಾಟೆಯಾಗುತ್ತಿರುವಂತೆ ಕೇಳಿಸಿತು. ಗಡಬಡಿಸಿ ಎದ್ದು ಹೊರಗೆ ಬಂದರು.

ಮೂಲೆಯ ಕ್ಲಾಸ್ ರೂಮಿನಲ್ಲಿ ಹುಡುಗಿಯರು ಅರಚುತ್ತಿದ್ದರು. ಹುಡುಗರು ಹೋ ಎಂದು ಕೇಕೆ ಹಾಕಿ ಚಪ್ಪಾಳೆ ತಟ್ಟಿ ನಗುತ್ತಿದ್ದರು. ಅಕ್ಕಪಕ್ಕದ ಕ್ಲಾಸಿನಿಂದಲೂ ವಿದ್ಯಾರ್ಥಿಗಳು ಏನಾಯಿತೆಂದು ನೋಡಬರುತ್ತಿದ್ದಂತೆ ಜೀಕೆ ತಡಮಾಡದೆ ದಾಪುಗಾಲು ಹಾಕುತ್ತ ಆ ಕಡೆ ನಡೆದರು. ಒಂದರೆಡು ಹೆಜ್ಜೆ ಇಡುವಷ್ಟರಲ್ಲಿ ಎಂಟಿ ಪುಟಿದು ಹಿಂದಕ್ಕೆ ನೆಗೆವ ಚೆಂಡಿನಂತೆ ಕ್ಲಾಸ್ ರೂಮಿನಿಂದ ಸಿಡಿದು ಹುಚ್ಚರ ಹಾಗೆ ಓಡುತ್ತ ತನ್ನ ಕಡೆ ಬಂದ. ಹಾಸ್ಯಾಸ್ಪದನಾಗಿದ್ದ ಅವನನ್ನು ನೋಡಲು ಕೆಲವು ಹುಡುಗರೂ ಹೊರಬಂದರು. ಅಷ್ಟರಲ್ಲಿ ಜೀಕೆ ತಮ್ಮ ಕಡೆಗೇ ಬರುತ್ತಿರುವುದೂ ಗೊತ್ತಾದೊಡನೆ ಒಲ್ಲದ ಮನಸ್ಸಿನಿಂದ ತಮ್ಮ ತಮ್ಮ ಕ್ಲಾಸುಗಳಿಗೆ ನುಗ್ಗಿದರು. ಎಂಟಿ ಓಡಿಬಂದವನೇ 'ಸರ್!' ಎಂದ. ಏನು ಎಂಬಂತೆ ದುರುಗುಟ್ಟಿ ನೋಡಿದರು. ಅವನ ಬಾಯಿಂದ ಮಾತೇ ಬರಲೊಲ್ಲದು. ಅವ ಬೆವರಿದ್ದ, ಬೆದರಿದ್ದ, ತೇಗುತ್ತಿದ್ದ. ಆದ್ದರಿಂದ ಬಾಯಿ ಬಾಯಿ ಬಿಡುತ್ತಿದ್ದ. ಈಗ ತನ್ನನ್ನು ಇಡಿಯಾಗಿ, ಹಸಿಹಸಿಯಾಗಿ ಹಾಗೆಯೇ ನುಂಗುವಂತೆ ನೋಡುತ್ತಿದ್ದ ಪ್ರಿನ್ಸಿಪಾಲರ ದೃಷ್ಟಿ ಎದುರಿಸಲಾರದೆ ಕಂಗಾಲಾದ. ಅವನ ಅವಸ್ಥೆಯನ್ನು ನೋಡುತ್ತ ನಿಲ್ಲದೆ ಜೀಕೆ ಇನ್ನಷ್ಟು ವೇಗದಿಂದ ಕ್ಲಾಸಿನತ್ತ ನಡೆದರು.

ಹೋಗಿ ನೋಡಿದರೆ, ಗುಲ್ಲು ಗದ್ದಲ ಏನೇನಿರಲಿಲ್ಲ. ಈಗಷ್ಟೆ ಒಂದು ಕ್ಲಾಸು ಮುಗಿದು ಇನ್ನೊಂದಕ್ಕೆ ಕಾಯುತ್ತಿರುವಂತೆ ಹುಡುಗರು ಶಿಸ್ತು ಮತ್ತು ಆಯಾಸದಲ್ಲಿರುವವರಂತೆ ಕೂತಿದ್ದರು. ಜೀಕೆ ಎಲ್ಲರನ್ನೂ ದುರುಗುಟ್ಟಿ ನೋಡಿದರು. 'ಏನಿದು ಗದ್ದಲ?' ಎಂದು ಗುಡುಗಿದರು. ಯಾರೂ ಮಾತಾಡಲಿಲ್ಲ. ಇವರ ಕಣ್ಣುಗಳನ್ನು ನೇರ ಎದುರಿಸಲೂ ಇಲ್ಲ. ಹಾಗೆ ಕೆಳಮುಖ ಮಾಡಿ ಕೂತವರಲ್ಲಿ ರೋಜಾ ಕೂಡ ಇದ್ದಳು. ಮುಖ ಕೆಳಗಿದ್ದರೂ ಕಣ್ಣು ನೆತ್ತಿಗೇರಿಸಿ ಹುಬ್ಬಿನ ಗುಂಟ ಇವರನ್ನೇ ನೋಡುತ್ತಿದ್ದಳು. ಅವಳಕೆ ಕಡೆ ಕೈ ಮಾಡಿ 'ನೀ ಹೇಳು, ಏನಿದು ಗದ್ದಲ?' ಆಕೆ ಗಕ್ಕನೆ ಎದ್ದು ಮಾತುಬಾರದೆ ತಡಬಡಿಸಿ ಫಕ್ಕನೆ ಬಾಗಿಲ ಕಡೆ ಕೈಮಾಡಿ ತೋರಿಸಿದಳು. ಅಲ್ಲಿ ಎಂಟಿ ಕುರಿಯ ಹಾಗೆ ನಿಂತಿದ್ದ. ತೋರುಬೆರಳಿಗೆ ಗುರಿಯಾದದ್ದೇ, - ಸರಕ್ಕನೆ ಒಳಬಂಧು 'ಸರ, ಇದರಾಗೊಂದು ರಬ್ಬರ್

ಹಾವೈತ್ರಿ....' ಎಂದು ತೊದಲಿದ. ಟೇಬಲ್ಲಿನ ಮೇಲೊಂದು ಸಣ್ಣ ಡಬ್ಬಿ ಇತ್ತು. ತಗೊಂಡು ನಡುಗವ ಬೆರಳುಗಳಿಂದ ಅದರ ಮುಚ್ಚಳ ತೆಗೆದ. ತೆಗೆದೊಡನೆ ಒಂದು ರಬ್ಬರ್ ಹಾವು ಟಣ್ಣನೆ 'ಅಗೋ' ನೆಗೆದು ಹುಡುಗಿಯರಲ್ಲೇ ಬಿತ್ತು. ಹಾವಿನಂತಯೇ ಹುಡುಗಿಯರಿಬ್ಬರು ನೆಗೆದು ಆಯ್ ಎಂದು ಕಿರುಚಿಕೊಂಡರು. ಹುಡುಗರು ತಡೆಯದೆ ಮತ್ತೆ ಹೋ ಎಂದು ನಕ್ಕು ಜೀಕೆ ಮಾಸ್ತರರನ್ನು ನೋಡಿ ಸರಿಹೋಗಲಿಲ್ಲವೆಂದು ಸುಮ್ಮನಾದರು. ಒಳಗೆ ಮಾತ್ರ ನಗುತ್ತಲೇ ಇದ್ದರು. ಹಾವಿನ ನೆಗೆತಕ್ಕೆ ಎಂಟಿ ಕೂಡ ಹಿಂದೆ ಸರಿದ. ಜೀಕೆ ಮಾತ್ರ ಸುಮ್ಮನೆ ಇದ್ದರು. ದುರ್ದೈವದಿಂದ ರೋಜಾ ಅದೇ ಮಾದ ನಗೆಯನ್ನ, ಅಂದರೆ ಇವರ ಛೇಂಬರಿನಲ್ಲಿ ನಕ್ಕಿದ್ದಳಲ್ಲ, ಇವರು ಕ್ಲಿಕ್ ಮಾಡಿಕೊಂಡಿದರಲ್ಲ - ನಕ್ಕಳು. ಜೀಕೆ ಒಳಗಿನ ಉದ್ವೇಗ ಉಕ್ಕಿಬಿಟ್ಟಿತು. ಅದನ್ನು ಹತ್ತಿಕ್ಕುವಂತೆ ತುಟಿ ಬಿಗಿಹಿಡಿದರು. ಉಕ್ಕಿದ ಉದ್ವೇಗ ಕೆಂಪಾಗಿದ್ದಿತೆಂಬುದನ್ನು ಅವರ ಕಣ್ಣುಗಳಿಂದಲೇ ತಿಳಿಯಬಹುದಿತ್ತು. ಕ್ಲಾಸಿನಲ್ಲಿ ಯಾಕೆ ಗದ್ದಲವಾಯಿತೆಂದು ತಿಳಿಯತಲ್ಲ. ಎಂಟಿ ಆ ಹಾವನ್ನು ಮತ್ತೆ ಡಬ್ಬಿಯೊಳಗೆ ಹಾಕುವ ತನಕ ಸುಮ್ಮನಿದ್ದು, ಹಾಕಿದ ಮೇಲೆ 'ಇಲ್ಲಿ ಕೊಡು' ಎಂಬಂತೆ ಕೈ ನೀಡಿದರು. ಎಂಟಿ ಕೊಟ್ಟ. ಇಡೀ ಕ್ಲಾಸಿನಲ್ಲಿ ಗೋರಿಯಲ್ಲಿರುವಂಥ ಮೌನ ಆವರಿಸಿತು. ತುಸು ಹೊತ್ತು ಎಲ್ಲರನ್ನೂ ಮತ್ತು ವಿಶೇಷವಾಗಿ ರೋಜಾಳನ್ನು ನೋಡಿ 'ಇದನ್ನು ಯಾರು ತಂದದ್ದು?' ಎಂದರು. ಯಾರು ಹೇಳುತ್ತಾರೆ? ಹಾಗೇ ಬಿಗಿದ ಮುಖದಲ್ಲೇ ಡಬ್ಬಿ ತಗೊಂಡೇ ಎಂಟಿ ಕಡೆ ಕೂಡ ನೋಡದೆ 'ಇನ್ನ ಕ್ಲಾಸ್ ತಗೋ' ಎಂದು ಹೇಳಿ ಬಾಗಿಲು ದಾಟಿದರು. ಯಾರು ತಂದದ್ದೆಂದು ಸಮ ವಿಚಾಸದೆ ಡಬ್ಬಿ ತಗೊಂಡು ಬಿಮ್ಮನೆ ಹೋದದ್ದಕ್ಕೆ ಹುಡುಗರಿಗೆ ಆಶ್ಚರ್ಯವಾಯಿತು.

## ೬

ಜೀಕೆ ಮಾಸ್ತರ ಮನೆಗೆ ಬಂದಾಗ ಮಡದಿ ಗಿರಿಜಮ್ಮ ಉಪ್ಪಿಟ್ಟು ಮಾಡಿ ಕಾಯುತ್ತಿದ್ದಳು. ಎಂದಿನಂತೆ ಮೌನವಾಗಿಯೇ ಕೋಟು ಕಳಚಿ ಮುಖ ತೊಳೆದುಕೊಂಡು ಬಂದು ಕೂತರು. ಗಂಡನಿಗೆ ಕೊಟ್ಟು ತಾನೂ ನೀಡಿಕೊಂಡು ಇವರ ಎದುರಿನಲ್ಲೇ ಕೂತಳು.

'ಏನೋ ಡಬ್ಬಿ ತಂದೀರಲ್ಲ. ಚಾಕಲೇಟೇನು?' ಎಂದಳು.

'ಅಲ್ಲ.'

ಗಿರಿಜಮ್ಮ ಮತ್ತೆ ಮಾತನ್ನು ಮುಂದುವರಿಸಲಿಲ್ಲ.

'ಏನೈತಿ, ತಗದ ನೀನ ನೋಡು.'

- ಎಂದರು. ಮತ್ತೆ ತಾವೇ. ಗಿರಿಜಮ್ಮ ಹೋಗಿ ಡಬ್ಬಿ ತಂದಳು. ಇನ್ನೇನು ಅದರ ಮುಚ್ಚಳ ತೆಗೆಯಬೇಕೆನ್ನುವಷ್ಟರಲ್ಲಿ ಜೀಕೆ ಹೇಳಿದರು.

'ಹುಷಾರ್, ಅದರಾಗೊಂದು ಹಾವೈತಿ.'

ಗಿರಿಜಮ್ಮ ನಂಬಲಿಲ್ಲ. ಮುಚ್ಚಳ ತೆಗೆದಳು. ತೆಗೆದುದೇ ತಡ ಹೆಡೆ ತೆಗೆದು ರಬ್ಬರ್ ಹಾವು ಟಣ್ಣನೆ ಹಾರಿ ಟೇಬಲ್ ಮೇಲೆ ಬಿದ್ದಿತು. ಗಿರಿಜಮ್ಮ ಹೌಹಾರಿ ಹಿಂದೆ ವಾಲಿ 'ಅವ್ವಯ್ಯ' ಎಂದು ಕಿರಿಚಿದಳು. ಜೀಕೆ ಹ ಹ್ಹ ಹ್ಹಾ ಎಂದು ನಗತೊಡಗಿದರು. ಬಿದ್ದ ಹಾವು ಟಾಪಲಾಗದೆ ಬ್ಯಾಲೆನ್ಸ್ ಸರಿದೂಗಿಸಿ ಹೆಡೆಯನ್ನು ಎಡಬಲ ಆಡತೊಡಗಿತು. ಬೇರೆ ಸಂದರ್ಭದಲ್ಲಾಗಿದ್ದರೆ ಗಂಡ ಈ ರೀತಿ ನಗೋದನ್ನು ಗಿರಜಮ್ಮ ಮನಸಾರೆ ಮೆಚ್ಚುತ್ತಿದ್ದಳು. ಆದರೀಗ ಎದುರಿಗೆ ಹಾವು ಆಡತೊಡಗಿತ್ತು. ಜೀಕೆ ನಗುತ್ತಿದ್ದುದರಿಂದ ಇದು ನಿಜವಾದ ಹಾವಾಗಿರಲಿಕ್ಕಿಲ್ಲವೆಂದು ಈ ಪರಿ ಮೋಸ ಮಾಡಿದ್ದಕ್ಕೆ ಗಂಡನ ಮೇಲೆ ಸಿಟ್ಟು ಮಾಡಿದಳು. ಈ ದೃಶ್ಯ ಕ್ಲಾಸಿನಲ್ಲಿ ಹ್ಯಾಗೆ ನಡೆದಿರಬಹುದೆಂದು ಜೀಕೆ ಊಹಿಸಿದರು. ಹುಡುಗನೊಬ್ಬ ಹುಡುಗಿಯರ ಗುಂಪಿನಲ್ಲಿ ಈ ಹಾವನ್ನು ನೆಗೆಯಬಿಟ್ಟನೆನ್ನುವ, ಹುಡುಗಿಯರು ಕಿರಿಚುತ್ತಾರೆ. ಹಿಂದೆ ಹಾರುತ್ತಾರೆ. ಈ ಸಲ ರೋಜಾಳ ಮೇಲೆ ಹಾರಿತೆನ್ನುವ! ಅವಳೂ ಕಿರಿಚಿ ಹಾರುವುದನ್ನು

ಕಲ್ಪಿಸಿಕೊಂಡರು ಸೆರಗು ಸಾರಿ ಉಡುಪು ಅಸ್ತವ್ಯವಸ್ತವಾಗಿ ಅವಳ ಹರೆಯದ ಗುಟ್ಟಿನ ಉಬ್ಬುಗಳು ಎದ್ದು ಕಾಣುತ್ತವೆ. ಈ ಅಪರೂಪ ದೃಶ್ಯದಿಂದ ಹುಡುಗರು ಹುರುಪುಗೊಂಡು ಮತ್ತೆ ಮತ್ತೆ ಅವಳ ಮೇಲೆ ಹಾವನ್ನು ಹರಿಯಬಿಡುತ್ತಾರೆ. ಮತ್ತೆ ಮತ್ತೆ ಅವಳ ಅಸ್ತವ್ಯಸ್ತವಾಗಿ ಆದರೆ ಒಂದು ಥರದ ಸ್ಟೈಲಿನಲ್ಲಿ ಕಿರಿಚುತ್ತಾಳೆ. ಈ ನೆಪದಲ್ಲಿ ತನ್ನ ಮೈಮಾಟವನ್ನು ತೋರಿಸಿಕೊಳ್ಳುವುದು ಅವಳಿಗೂ ಇಷ್ಟವೇ. ಈ ಹಾವು ರಬ್ಬರಿನದೆಂದು ಅಪಾಯಕಾರಿ ಅಲ್ಲವೆಂದು ತಿಳಿದೂ ಗಾಬರಿಯನ್ನು ಅಭಿನಯಿಸುತ್ತಾಳೆ. ಕೈಯೆತ್ತಿ ಹಿಂದೆ ವಾಲಿ ಎದೆ ತೋರಿಸುತ್ತಾಳೆ. ನರ್ತನದ ಭಂಗಿಯಲ್ಲಿ ನಿಂತು ಹಿಂದೆ ಸರಿದು ಸೊಂಟದ ವಕ್ರಗಳನ್ನು, ನಿತಂಬದ ದುಂಡು ಸೊಕ್ಕನ್ನು ತೋರಿಸುತ್ತಾಳೆ. ಹುಡುಗರ ಹೃದಯಗಳಿಗೆ ಬೆಂಕಿಯಿಡುತ್ತಾಳೆ.

ವಾಸ್ತವಕ್ಕೆ ಬಂದಾಗ ಗಿರಿಜಮ್ಮ ಆ ಹಾವನ್ನು ಕೈಯಲ್ಲಿ ಹಿಡಿದು ನೋಡುತ್ತಿದ್ದಳು. ಪ್ರಥಮ ಬಾರಿ ಎಂಬಂತೆ ಜೀಕೆ ಮಡದಿಯನ್ನು ನೋಡಿದರು; ಗಿರಿಜಮ್ಮ ಆಗಲೇ ಮುದುಕಿಯಾಗಿದ್ದಳು. ತಲೆತುಂಬ ಬಿಳಿಕೂದಲು, ಹೆಬ್ಬೆರಳು ಗಾತ್ರ ಬೈತಲೆ - ಮಕ್ಕಳಿಲ್ಲದ ಚಿಂತೆ ಮುಖದಲ್ಲಿ ಬಗೆಬಗೆಯ ಗೆರೆಗಳಾಗಿ ಮೂಡಿತ್ತು. ಯಾವುದೇ ಆಶೋತ್ತರಗಳಿಲ್ಲದ ಕಣ್ಣು ಕಳೆಯಿಲ್ಲದೆ, ಸಾಲದ್ದಕ್ಕೆ ಸುತ್ತು ಗುಳಿಬಿದ್ದುದರಿಂದ ತಳದಲ್ಲಿ ನೀರಿಲ್ಲದ ಆಳ ಬಾವಿಯನ್ನು ಜ್ಞಾಪಿಸುತ್ತಿದ್ದವು. ನೋಡಿದವರ ಮೇಲೆ ಯಾವುದೇ ಪರಿಣಾಮ ಬೀರಲಾರದ ಅಥವಾ ಬಹಳ ಪರಿಚಯವಾದರೆ ಮಾತ್ರ ನೆನಪಿನಲ್ಲಿಡಬಹುದಾದ ವ್ಯಕ್ತಿತ್ವ ಅವಳದು, ಅದು ಸರಿ, ಅದ್ಯಾಕೆ ಎಂದಿಲ್ಲದ ಈ ದಿನ ತಾನು ಈ ಪರಿ ಯೋಚನೆ ಮಾಡುತ್ತಿದೆನೆ ಎಂದುಕೊಂಡು ಜೀಕೆ ಆಶ್ಚರ್ಯಪಟ್ಟರು. ಸಲ್ಲದೆಂದೂ ಅಂದುಕೊಂಡರು.

ಮಾರನೇ ದಿನ ಮಧ್ಯಾಹ್ನದವರೆಗೆ ಜೀಕೆ ನಾರ್ಮಲ್ಲಾಗೇ ಇದ್ದರು. ಮಧ್ಯಾಹ್ನ ಆ ಹುಡುಗಿ, ಅದೇ ರೋಜಾ ಎಂಬವಳು ಬಂದು ತನಗೆ ತಿಳಿಯದ ಪಠ್ಯದ ಭಾಗಗಳನ್ನು ವಿವರಿಸಬೇಕೆಂದು ಕೇಳಿದ್ದೇ ಆಯಿತು. ಜೀಕೆ ಮಾಸ್ತರರು ಹೌಹಾರಿ ಮೈಮರೆತು ಬಿಟ್ಟರು. ಅವಳು ಕೇಳಿದ್ದು ವಿಕ್ರಮೋರ್ವಶೀಯದ ಯಾವುದೋ ಒಂದು ಸಾಮಾನ್ಯ ಪದ್ಯದ ಒಂದು ಸಾಲಿನ ಅರ್ಥವನ್ನ. ಅವನ್ನಿವರು ಒಂದು ನಿಮಿಷದಲ್ಲಿ ಹೇಳಿಬಿಡಬಹುದಿತ್ತು. ಅದು ಬಿಟ್ಟು ಆ ಸಾಲಿನ ನೆಪದಲ್ಲಿ ತಮಗೆ ಅಸಹಜವಾದ ಎತ್ತರದ ದನಿಯಲ್ಲಿ ಕಾಳಿದಾಸನ ವಂಶಾವಳಿಯನ್ನ ವರದಿ ಇಡೀ ಸಂಸ್ಕೃತ ಸಾಹಿತ್ಯದ ತಳಬುಡವನ್ನೆಲ್ಲ ಸೀಸುತ್ತ ನಿರರ್ಗಳ ಭಾಷಣ ಮಾಡತೊಡಗಿದರು. ಅಲ್ಲಿರುವೆಲ್ಲ ಪವಿತ್ರವಾದ ಜ್ಞಾನವನ್ನು ಅವಳಿಗೆ ತಿಳಿಸಲೇಬೇಕೆಂದು, ಅವಳು ತಿಳಿಯಲೇಬೇಕೆಂದು ಮತ್ತು ಅವಳು ಮಾತ್ರ ತಿಳಿಯಬಲ್ಲಳೆಂದು ಮತ್ತು ಈ ಜ್ಞಾನದಾನದ ಪವಿತ್ರ ಮುಹೂರ್ತ ಇನ್ನೊಮ್ಮೆ ಬರಲಾರದೆಂದು - ಅವರು ತಿಳಿದಂತಿತ್ತು. ಮಾತಿಗೊಮ್ಮೆ ಹಸ್ತಾಭಿನಯ ಮಾಡುತ್ತಿದ್ದರು. ಮುದುಕ ಭಾರೀ ಕೆಟ್ಟ ನಟ. ವಿಚಿತ್ರವಾಗಿ ಮತ್ತು ಅನಿರೀಕ್ಷಿತವಾಗಿ ಕಣ್ಣುಗಳನ್ನು ಮುಚ್ಚಿಬಿಚ್ಚಿ, ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಮಾತಾಡುವ ಮಾತುಗಳಿಗೂ ಅಭಿನಯಕ್ಕೂ ತಾಳೆಯೇ ಆಗುತ್ತಿರಲಿಲ್ಲ.

ಛೇಬರಿನ ಹೊರಗಿದ್ದವರಿಗೆ ಪ್ರಿನ್ಸಿಪಾಲರು ಯಾರ ಮೇಲೋ ರೇಗಿ ಬೈಯುತ್ತಿದ್ದರೆಂದೇ ಅನ್ನಿಸುತ್ತಿತ್ತು. ಸಿಪಾಯಿ ಸಿಂಗಪ್ಪ ಒಂದೆರಡು ಬಾರಿ ಇಣುಕಿ ನೋಡಿ ರೇಗುತ್ತಿಲ್ಲವೆಂದು ಖಾತ್ರಿ ಮಾಡಿಕೊಂಡು ಹೊರಗೆ ಕೂತ. ಆದರೂ ಅವನಿಗೆ ಆಶ್ಚರ್ಯವಾಗಿತ್ತು. ಯಾಕೆಂದರೆ ಜೀಕೆ ಹೀಗೆಂದೂ ಛೇಂಬರಿನಲ್ಲಿ ಒಬ್ಬರ ಅನುಮಾನಗಳನ್ನು ಬಗೆಹರಿಸದವರಲ್ಲ. ಅವರನ್ನು ಕೇಳುವ ಧೈರ್ಯವಾದರೂ ಯಾರಿಗಿತ್ತು? ರೋಜಾ ಮಾತ್ರ ಜೀಕೆ ಮಾಸ್ತರರ ಒಂದೊಂದು ಮಾತಿಗೂ 'ಅಬ್ಬ ಎಂಥ ಅಪರೂಪದ ಜ್ಞಾನವಿದು!' ಎಂಬಂತೆ ಆಶ್ಚರ್ಯವನ್ನೂ ಅದು ತನಗೆ ಮಾತ್ರ ಸಿಕ್ಕಿತಲ್ಲ ಎಂಬ ಆನಂದವನ್ನೂ ಅಭಿನಯಿಸುತ್ತಿದ್ದಳು. ಕಿವಿಯಿಂದ ಜ್ಞಾನವನ್ನೂ ಅಗಲವಾಗಿ ತೆರೆದ ಕಣ್ಣುಗಳಿಂದ ಅವರ ಭಾವಭಂಗಿಗಳ ಅಪರೂಪ ರೂಪವನ್ನೂ ಈಂಟುತ್ತಿದ್ದಳು. ಜೀಕೆಯವರ ಆರ್ಭಟ ಕೇಳಿಸಿಕೊಂಡ ಒಬ್ಬಿಬ್ಬರು ಅಧ್ಯಾಪಕರು ಏನೋ ಅನಾಹುತವಾಗಿದೆಯೆಂದು ಸ್ಟಾಫ್ ರೂಮಿನಿಂದ ಜೀಕೆ ಛೇಂಬರಿನತ್ತ ಧಾವಿಸಿ ಬಂದು ಸಿಂಗಪ್ಪನಿಂದ ವಿಷಯ ತಿಳಿದು ಆಶ್ಚರ್ಯಭರಿತರಾಗಿ ಹೋದರು. ಮುಂದೆ ಗಂಟೆಯಾದಾಗಲೇ ಜೀಕೆ ಭೂಲೋಕಕ್ಕೆ ಬಂದರು. ರೋಜಾ ವಿನಯದಿಂದ ಕೃತಜ್ಞತೆ ಹೇಳಿ ಹೊರಟಾಗ 'ಮುಂದೆ ಏನಾರ ತಿಳೀದಿದ್ದರ ಬರ್ತಾ ಇರು' ಎಂದು ಹೇಳುವುದನ್ನು ಮರೆಯಲಿಲ್ಲ.

ತಮಗೇ ಗೊತ್ತಿಲ್ಲದಂತೆ ಜೀಕೆ ಆ ದಿನ ಭರ್ಜರಿ ಮೂಡಿನಲ್ಲಿದ್ದರು. ಸಿಪಾಯಿ ಸಿಂಗಪ್ಪನಿಂದ ಚಹಾ ತರಿಸಿ ಅವನಿಗೂ ಕುಡಿಯ ಹೇಳಿದ್ದಲ್ಲದೆ ಅವನ ಯೋಗಕ್ಷೇವನ್ನೂ ವಿಚಾರಿಸಿದರು. ಎಂಟಿಯಂಥ ಎಂಟಿಯ ಬಗೆಗೂ ಸಹಾನುಭೂತಿ ತೋರಿದ್ದಲ್ಲದೆ

'ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳನ್ನ ತಪ್ಪದೇ ಓದಿದರೆ ನಿನ್ನ ಕನ್ನಡ ಸುಧಾರಿಸುತ್ತದೆ' ಎಂದು ಸಲಹೆ ಕೂಡ ಮಾಡಿದರು. ಏನಾದರೂ ಕೆಲಸವಿದ್ದಾಗ ಅಧ್ಯಾಪಕರನ್ನು ತಮ್ಮ ಛೇಂಬರಿಗೇ ಕರೆಸುವುದು ರೂಢಿ. ಆದರೆ ಆ ದಿನ ತಾವೇ ಸ್ಟಾಫ್ ರೂಮಿಗೆ ಹೋಗಿ ದಶಮಾನೋತ್ಸವದ ತಯಾರಿಯ ಬಗ್ಗೆ ಚರ್ಚಿಸಿದರು.

೭

ನಾಳೆ ದಶಮಾನೋತ್ಸವ ಇದೆಯೆಂದರೆ ಇಂದು ಕಾಲೇಜಿನಲ್ಲಿ ಹಬ್ಬದ ವಾತಾವರಣ ಮೂಡಿತ್ತು. ಗಿರೆಪ್ಪ ಖುದ್ದಾಗಿ ಯೂನಿಯನ್ ಸದಸ್ಯರಿಗೆ ಕೆಲಸ ಹಂಚಿ ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದ. ಆಮಂತ್ರಣ ಪತ್ರಿಕೆ ಹಂಚಿಕೆ ಆಗಿತ್ತು. ಪೆಂಡಾಲ್ ಹಾಕಿಯಾಗಿತ್ತು. ಗಿರೆಪ್ಪ ಮಿಂಚಿನಂತೆ ಸಂಚರಿಸಿ ಕೆಲಸ ನಿರ್ವಹಿಸುತ್ತಿದ್ದ ರೀತಿ ನೋಡಿ ಜೀಕೆ ಕೂಡ ಆಶ್ಚರ್ಯಪಟ್ಟರು. ಮತ್ತು ಆತನ ಬಗೆಗಿನ ತಮ್ಮ ಮುಂಚಿನ ಅಭಿಪ್ರಾಯವನ್ನು ತಿದ್ದಿಕೊಳ್ಳಬೇಕೆಂದಿದ್ದರು. ಪೆಂಡಾಲನ್ನು ರೋಜಾಳ ನೇತೃತ್ವದ ಹುಡುಗ ಹುಡುಗಿಯರ ತಂಡ ಹೂಮಾಲೆಗಳಿಂದ ಸಿಂಗರಿಸುತ್ತಿದ್ದರು. ಆಕೆ ಆಗಾಗ ತಮ್ಮ ಕಡೆ ಕದ್ದು ನೋಡಿದ್ದನ್ನು, ನೋಡಿ ಮಂದ ಹಾಸ ಬೀರಿದ್ದನ್ನು ಜೀಕೆ ವಿಶೇಷವಾಗಿ ಗಮನಿಸಿದರು. ಜೀಕೆಗೆ ಆಗ ಎಷ್ಟು ಆನಂದವಾಯಿತೆಂದರೆ ಕೆಲಸ ಮಾಡುತ್ತಿದ್ದ ಎಲ್ಲರಿಗೂ ಕರದಂಟು ಉಪ್ಪಿಟ್ಟು ಚಹಾ ಕೊಡಿಸಬೇಕೆಂದು ಎಂಟಿಗೆ ಆಜ್ಞೆ ಮಾಡಿದರು. ಆದರೆ ಗಿರೆಪ್ಪ ಲವಲವಿಕೆಯಿಂದ ಹುಡುಗಿಯರ ಆಸುಪಾಸಿನಲ್ಲೇ ಸುಳಿದಾಡುತ್ತಿದ್ದದ್ದು ಹುಡುಗಿಯರು ಅಂದರೆ ರೋಜಾಳಂಥವರು ಆತನ ಬಗ್ಗೆ ಅನಗತ್ಯ ಉತ್ಸಾಹ ತೋರಿಸುತ್ತಿದ್ದದ್ದು, ಆತನ ನೆರವು ಕೇಳುತ್ತಿದ್ದದ್ದು, ಅವ ಮಾಡುತ್ತಿದ್ದದ್ದು ಇವೆಲ್ಲ ಜೀಕೆಗೆ ಸರಿಬರಲಿಲ್ಲ. ಅವನನ್ನು ಕರೆದು ಏನೋ ಒಂದು ಕೆಲಸ ಹೇಳಿ ಬೇರೆ ಕಡೆ ಕಳಿಸಿದರು. ಆಮೇಲೆ ನಿರುಮ್ಮಳರಾಗಿ ದೇಖರೇಖಿ ನೋಡಿಕೊಳ್ಳುವ ನೆಪದಲ್ಲಿ - ಈಗ ಗಿರೆಪ್ಪ ಇರಲಿಲ್ಲವಲ್ಲ, ಬೇಕಾದರೆ ತನ್ನ ಸಹಾಯವನ್ನೇ ಕೇಳಲೆಂದು ಹುಡುಗಿಯರ ಹತ್ತಿರ ಹೋದರು. ಅವರ್‍ಯಾರೂ ಕೇಳಲಿಲ್ಲ. ಆದರೆ ರೋಜಾ ಒಂದರೆಡು ಬಾರಿ ನೋಡಿದ್ದರಿಂದ ಸಮಾಧಾನಗೊಂಡರು.

ಇಷ್ಟಾಯಿತಲ್ಲ, ಮಧ್ಯಾಹ್ನದ ವಿಶ್ರಾಂತಿಯ ನಂತರ ಕೆಲವು ಕ್ಲಾಸುಗಳು ಪ್ರಾರಂಭವಾದವು. ಯೂನಿಯನ್ ಸದಸ್ಯರಿಗೆ ಕ್ಲಾಸಿಗೆ ಹಾಜರಾಗದಿರುವ ವಿನಾಯಿತಿ ಸಿಕ್ಕಿದ್ದರಿಂದ ಅವರು ನಾಳೆಯ ಕೆಲಸ ನೋಡಿಕೊಳ್ಳುತ್ತಿದ್ದರು. ಕಾರ್ಯಕ್ರಮದಲ್ಲಿ, ಪ್ರಾರ್ಥನೆ ಮಾಡಲಿದ್ದ ವಿದ್ಯಾರ್ಥಿನಿಯರು ಪೆಂಡಾಲ್ ಪಕ್ಕದ ಜಮಖಾನ ಹಾಲಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದರು. ಅತಿಥಿಗಳು ಟ್ರೇನಿನಿಂದ ಹೊರಟ ಬಗ್ಗೆ ಟೆಲಿಗ್ರಾಮ್ ಬಂದಿತ್ತು. ಜೀಕೆ ಅದನ್ನು ಇತಿಹಾಸದ ಅಧ್ಯಾಪಕರಿಗೆ ತೋರಿಸಿ ನಾಳೆ ಅವರ ವ್ಯವಸ್ಥೆ ಮಾಡಬೇಕಾಗಿ ಹೇಳಿದ್ದರು. ಎಲ್ಲವೂ ತಾವು ಬಯಸಿದಂತೆಯೇ ನಡೆಯುತ್ತಿದ್ದುದಕ್ಕೆ ಸಮಾಧಾನಪಟ್ಟುಕೊಂಡು ತಾವು ಸ್ವಾಗತ ಭಾಷಣ ಮಾಡಬೇಕಿತ್ತಲ್ಲ; ಅದನ್ನು ಬರೆಯುವುದಕ್ಕೆ ಕೂತರು. ಕೂತಿನ್ನು 'ಸನ್ಮಾನ್ಯ ಅತಿಥಿಗಳೇ, ಅಧ್ಯಕ್ಷರೇ' ಆಗಿರಲಿಲ್ಲ ಎಂಟಿ ತೇಗುತ್ತ ಓಡಿಬಂದು "ಸರಃ" ಎಂದು. ಮುಖ ಮೇಲೆತ್ತಿ ನೋಡಿದರು. ಅಗಲವಾಗಿ ಕಣ್ಣು ತೆರೆದುಕೊಂಡು ಆ ಕೃಶಾಂಗಿ ಗಡಗಡ ನಡುಗುತ್ತ ತಲೆ ಕೆದರಿ ನಿಂತಲ್ಲಿ ನಿಲ್ಲದೆ ಚಡಪಡಿಸುತ್ತಿದ್ದ.

'ಏನು?' ಅಂದರೆ,

'ಸರ, ಘಾತಾಗೇತ್ರಿ! ಗಿರೆಪ್ಪ ರೋಜಾಗ ಮುದ್ದು ಕೊಟ್ಟರಿ!'

'ಏನು, ಬರೋಬರಿ ಬೊಗಳು.'

'ಜಮಖಾನ ಹಾಲಿನಾಗ ಹುಡಿಗೇರು ಹಾಡ ಪ್ರಾಕ್ಟೀಸ ಮಾಡುತ್ತಿದ್ದರ್ರಿ. ಗಿರೆಪ್ಪ, ರೋಜಾ ಪೆಂಡಾಲದಾಗ ಇದ್ದರ್ರಿ. ಅದೇನೇನ ಜಗಳಾಡಿದರೋ ರೋಜಾ ಓಡಕ್ಹತ್ತಿದಳ್ರಿ. ಗಿರೆಪ್ಪ ಬೆನ್ನ ಹತ್ತಿದ. ಆಕಿ ಓಡಿ ಓಡಿ ಜಮಖಾನಾ ಹಾಲಿನಾಗ ಹುಡಗೀರ ನಡುವ ಅಡಗಾಕ ಹೋದಳ್ರಿ. ಗಿರೆಪ್ಪ ಬಂದವನ ಆಕೀನ್ನ ಹಿಡಕೊಂಡು ಎತ್ತಿ ಕೆಳಗ ಒಗೆದ. ಒಗೆದವನ ಮ್ಯಾಲ ಬಿದ್ದು ಮುದ್ದುಕೊಟ್ಟ!'

ವಿಚಿತ್ರ ಭಾವನೆಗಳಿಂದ ಜೀಕೆ ಕಣ್ಣು ಫಳ್ಳನೆ ಹೊಳೆದವು. ಒಂದು ಕ್ಷಣ ತಲೆ ಹಿಡಿದು ಕೂತರು.

'ಖರೆ ಹೇಳು' ಎಂದು ಮುಷ್ಟಿ ಹಿಡಿದು ಮೇಜಿನ ಮೇಲೆ ಗುದ್ದಿದರು.

'ಖರೆ, ಖರೇನರಿ! ಬೇಕಾದರೆ ಎಮ್ಮೆಸ್ ಅಲ್ಲೇ ಇದ್ರು. ಅವರನ್ನ ಕೇಳ್ರಿ.'

ಜೀಕೆ ಕಿಚ್ಚಿನೊಳಗಿನ ಕೀಟದ ಹಾಗೆ ಮೈಯಾದ್ಯಂತ ಉರಿದರು. ಈ ರೀತಿ ಒಬ್ಬ ಹುಡುಗ ಒಬ್ಬ ಹುಡುಗಿಯನ್ನು ಅದೂ ಕಾಲೇಜಿನ ಆವರಣದಲ್ಲಿ ಅದೂ ತಾವಿರುವ ಕಾಲೇಜಿನ ಆವರಣದಲ್ಲಿ ಮುದ್ದಿಡುವುದೆಂದರೇನು? ಕಣ್ಣ ಕಳಚಿ ಬೀಳುವ ಹಾಗೆ ಖೆಕ್ಕರಿಸಿ ಎಂಟಿಯನ್ನೊಮ್ಮೆ ನೋಡಿ ಅಕ್ಷರಶಃ ಶರವೇಗದಲ್ಲಿ ಜಮಖಾನ ಹಾಲಿನತ್ತ ನಡೆದರು.

ಹುಡುಗ ಹುಡುಗಿಯರಾಗಲೇ ಅಲ್ಲಲ್ಲಿ ಗುಂಪು ಗುಂಪಾಗಿ ಮಾತಾಡುತ್ತಿದ್ದರು. ಹುಡುಗಿಯರು ಗಾಬರಿಗೊಂಡ ಮಕ್ಕಳಂತೆ ದೊಡ್ಡದಾಗಿ ಕಣ್ಣುಬಾಯಿ ತೆರೆದು ಮಾತಿಗೊಮ್ಮೆ ಉದ್ದಗಲ ಕೈಬೀಸುತ್ತ ಯಾರ್ಯಾರನ್ನೋ ನಿರ್ದೇಶಿಸುತ್ತಿದ್ದರು. ಜೀಕೆ ಬರುತ್ತಿದ್ದುದನ್ನು ನೋಡಿದೊಡನೆ ಪೆಂಡಾಲ್ ಬಳಿಯ ಹುಡುಗರ ಗುಂಪು ಚದುರಿತು. ಅವರ ಮಧ್ಯೆ ಇದ್ದ ಗಿರೆಪ್ಪ ಮಾತ್ರ ಅಚಲನಾಗಿ ಹಾಗೆ ನಿಂತಿದ್ದ. ಇವರನ್ನು ಕಂಡೊಡನೆ ಏನೋ ಕೆಲಸ ಮಾಡುವವರಂತೆ, ಕೆಲಸದಲ್ಲಿ ಇವರನ್ನು ಕಾಣಲಿಲ್ಲವೆಂಬಂತೆ ಒಳಗೆ ಹೆದರಿದ್ದರೂ ಹೊರಗೆ ದಿಮಾಕಿನ ಪೋಜು ಕೊಡುತ್ತಾ ನಿಂತಿದ್ದ. ಜೀಕೆಯವರನ್ನು ನೋಡಿ ಕೆಲವು ಹುಡುಗಿಯರು ಓಡಿ ಮರೆಯಾದರು. ಕೆಲವರಿಗೆ ಓಡಲು ಧೈರ್ಯಸಾಲದೆ ಅಲ್ಲಿಯೇ ನಿಂತರು. ಜೀಕೆ ಅಲ್ಲಿಗೇ ಹೋಗಿ,

'ಏನ ನಡೀತಿಲ್ಲಿ?' ಎಂದು ಕೇಳಿದರು, ಹುಡುಗಿಯರ್ಯಾರು ಬಾಯಿ ಬಿಡಲಿಲ್ಲ. ಪರಸ್ಪರ ಮುಖ ನೋಡಿಕೊಳ್ಳಲೂ ಆಗದೆ ದೊಡ್ಡ ಕಣ್ಣುಗಳಿಂದ ಪ್ರಿನ್ಸಿಪಾಲರನ್ನೇ ನೋಡುತ್ತ ನಿಂತರು.

'ರೋಜಾ ಎಲ್ಲಿ?' ಎಂದರು ಮತ್ತೆ. ಆಗಲೂ ಅವರು ಸುಮ್ಮನಿದ್ದಾಗ ಇನ್ನೂ ಎತ್ತರದ ದನಿಯಲ್ಲಿ 'ಹೇಳಿದ್ದು ಕೇಳಸಲಿಲ್ಲ? ಎಲ್ಲಿ ರೋಜಾ?' ಎಂದು ಗುಡುಗಿದರು. ಹುಡುಗಿಯೊಬ್ಬಳು 'ಮನೀಗೆ ಹೋದಳ್ರಿ' ಎಂದು ಗಾಬರಿಯ ಎತ್ತರದ ದನಿಯಲ್ಲಿ, ಊರಕಡೆ ಕೈ ಮಾಡಿ ತೋರಿಸಿ ಹೇಳಿದಳು. ಈಗ ಜೀಕೆ ದೃಷ್ಟಿ ಗಿರೆಪ್ಪನತ್ತ ತಿರುಗಿತು. ಆತ ನಿಂತಿರಲಾರದೆ ಇವರ ಕಡೆ ಬೆನ್ನು ಮಾಡಿ ಅಲ್ಲೇ ಇದ್ದ ಕುರ್ಚಿಯೊಂದರಲ್ಲಿ ಕೂಡ, ಎಲ್ಲಿದ್ದರೋ ಇತಿಹಾಸದ ಅಧ್ಯಾಪಕರೂ ಬಂದರು. ಎಂಟಿ ಓಡುತ್ತ ಅವರನ್ನು ಸೇರಿಕೊಂಡ. ಆದರೆ ರಾವು ಹೊಡೆಯುತ್ತಿದ್ದ ಜೀಕೆ ಮುಖ ನೋಡಿ ಇಬ್ಬರಿಗೂ ಏನೂ ಮಾತಾಡಲಿಕ್ಕೇ ಆಗಲಿಲ್ಲ. ಇವರ ಪರದಾಟ ನೋಡುತ್ತ ನಿಂತಿರದೆ ಜೀಕೆ ಗಿರೆಪ್ಪ ಕೂತಲ್ಲಿಗೆ ಹೋದರು.

ಗಿರೆಪ್ಪ ಎದ್ದು ನಿಂತ. ಅವನನ್ನು ಹರಿದು ತಿನ್ನುವ ಹಾಗೆ ಹುಬ್ಬು ಗಂಟಿಕ್ಕಿ ದೃಷ್ಟಿಯನ್ನು ಚೂಪುಗೊಳಿಸಿ ನೋಡುತ್ತ,

'ಇಷ್ಟ ಸೊಕ್ಕ ಬಂತೇನೊ ನಿನಗ?' ಎಂದರು. ಗಿರೆಪ್ಪ ಮುಗ್ಧನಂತೆ 'ಏನ ಸರ?' ಅಂದ.

'ಏನ ಮಾಡಿದಿ ಗೊತ್ತಿಲ್ಲ ನಿನಗ?'

'ಗೊತ್ತಿಲ್ಲರಿ ಸರ'

'ಬಾಯಾಗ ಬೆರಳಿಟ್ಟರ ಕಚ್ಚಾಕ ಬರಾಣಿಲ್ಲ ಅಲ್ಲ?' ಎಂದು ಅಣಿಗಿಸುತ್ತ 'ಏಯ್ ಎಂಟಿ ಹೇಳವಗ' ಎಂದು ಉಕ್ಕಿ ಬರುತ್ತಿದ್ದ ಸಿಟ್ಟನ್ನು ನಿಯಂತ್ರಿಸಿಕೊಂಡರು. ಎಂಟಿ ಈ ತನಕ ಮಾತಾಡುವಾಗ ಮಾತ್ರ ಅಭಿನಯ ಮಾಡುತ್ತಿದ್ದವನು ಈಗ ಮಾತಿಲ್ಲದೆ ಕೈಬಾಯಿ ಮಾಡತೊಡಗಿದ. ಈ ಅರೆಗೊಡ್ಡಿತನ ನೋಡಲಾರದೆ,

‘ರೋಜಾಗ ಏನ ಮಾಡಿದಿ?’

- ಎಂದರು. ಗಿರೆಪ್ಪ ಸುಮ್ಮನಿದ್ದ. ಅವನು ಸಿಕ್ಕುಬಿದ್ದನೆಂದೇ ತಾನು ಮಾಡಿದ್ದನ್ನು ಒಪ್ಪಿಕೊಂಡನೆಂದೇ ಭಾವಿಸಿದರು. ಆದರೂ ಅವನ ಬಾಯಿಂದ ಹೊರಡಿಸಬೇಕೆಂದು,

‘ನಿನಗೂ ರೋಜಾಗೂ ಏನ ಸಂಬಂಧ?

- ಎಂದು ವದರಿದ ಹಾಗೆ ಮಾತಾಡಿದರು.

‘ಸರ ನೀವು ನನ್ನ ಖಾಸಗಿ ವ್ಯವಹಾರಕ್ಕೆ ಕೈಹಾಕಬಾರದು’ ಎಂದು ತಣ್ಣಗೆ ಹೇಳಿ ಗಿರೆಪ್ಪ ಕತ್ತಿನ ಕಾಲರ್ ಝಾಡಿಸಿ ತೀಡಿಕೊಳ್ಳುತ್ತ ಹೋಗಿಬಿಟ್ಟ.

ಮೊದಲಿನ ಕೋಪಕ್ಕೆ ಈಗಿನ ಅವಮಾನವೂ ಸೇರಿ ಮುಖ ಮುಚ್ಚಿಕೊಳ್ಳುವಂತಾಯಿತು ಜೀಕೆಗೆ. ಕುದಿಯುವ ನೀರಿನ ಹಾಗೆ ನಡುಗುತ್ತಿದ್ದರು. ದೂರದಲ್ಲಿ ಚದುರಿ ನಿಂತಿದ್ದ ಹುಡುಗರು ಇವರನ್ನೇ ನೋಡುತ್ತಿದ್ದರು. ದಾಪುಗಾಲು ಹಾಕುತ್ತ ಛೇಂಬರಿಗೆ ಹೋದರು, ಕುರ್ಚಿಯಲ್ಲಿ ಕುಕ್ಕರಿಸಿ ಕೈಕೈ ಹಿಸುಕಿಕೊಂಡರು. ತಕ್ಷಣ ಏನು ಹೊಳೆಯಿತೊ, ಗಿರೆಪ್ಪನನ್ನು ಕಾಲೇಜಿನಿಂದ ಡಿಸ್‌ಮಿಸ್ ಮಾಡಿದ್ದಾಗಿ ಕಾಗದಲ್ಲಿ ಗೀಚಿ ಕರೆಗಂಟೆ ಬಾರಿಸಿದರು.

ವ್ಯವಹಾರ ಜ್ಞಾನವುಳ್ಳ ಯಾವ ಪ್ರಿನ್ಸಿಪಾಲನೂ ಮಾಡದ ಕೆಲಸವನ್ನು ಜೀಕೆ ಮಾಡಿದ್ದರು. ನಾಳೆ ಎಂದರೆ ನಾಳೆಯೇ ದಶಮಾನೋತ್ಸವವಿದೆ. ಕಾಲೇಜ್ ಯೂನಿಯನ್ ಉದ್ಘಾಟನೆಯಿದೆ. ಆಮಂತ್ರಣ ಪತ್ರಿಕೆ ಹಂಚಿಯಾಗಿದೆ. ಅದ್ದೂರಿ ತಯಾರಿಯಾಗಿದೆ. ಸಂದರ್ಭ ಹೀಗಿದ್ದಾಗ ಯೂನಿಯನ್ ಅಧ್ಯಕ್ಷನನ್ನು ಡಿಸ್‌ಮಿಸ್ ಮಾಡುವುದು ಕಲ್ಲೆತ್ತಿ ಕಾಲಿನ ಮೇಲೆ ಚೆಲ್ಲಿಕೊಂಡಂತೆ. ಇದನ್ನು ಜೀಕೆ ಮಾಸ್ತರರಂಥ ಅನುಭವಿಗಳಿಗೆ ಯಾರು ಹೇಳಬೇಕು? ಮಾರನೇ ದಿನ ಅನಿರೀಕ್ಷಿತವಾದ ಅಘಾತ ಕಾದಿತ್ತು.

## ೮

ಅತಿಥಿಗಳು ಬಂದಿದ್ದರು. ಊರಿನ ಆಮಂತ್ರಿತರು ಹೆಂಡತಿ ಮಕ್ಕಳೊಂದಿಗೆ ಕಾರ್ಯಕ್ರಮಕ್ಕೆ ಬಂದು ಕೂತಿದ್ದರು. ಆದರೆ ಪೆಂಡಾಲ್ ಬಳಿ ಒಬ್ಬ ವಿದ್ಯಾರ್ಥಿಯೂ ಇರಲಿಲ್ಲ. ಅಧ್ಯಾಪಕರ ಗೋಳು ಹೇಳತೀರದು. ಯಾವನಾದರೂ ವಿದ್ಯಾರ್ಥಿ ಸಮೀಪದಲ್ಲಿ ಕಂಡರೂ ಸಾಕು ಕೈಹಿಡಿದು ಕರೆತರಲು ಸಿದ್ಧರಾಗಿದ್ದರು. ಪೆಂಡಾಲ್ ಬಳಿ ಅತ್ತಿತ್ತ ಸುಳಿದಾಡುತ್ತಿದ್ದರು. ನಿರಾಶರಾಗಿ ಮತ್ತೆ ಒಳಗೆ ಬರುತ್ತಿದ್ದರು. ಕೆಲವರು ಗಿರೆಪ್ಪನನ್ನು ಹುಡುಕಿಕೊಂಡು ಹೋಗಿದ್ದರು. ಕಾರ್ಯಕ್ರಮ ರದ್ದುಪಡಿಸುವುದಂತೂ ಸಾಧ್ಯವೇ ಇರಲಿಲ್ಲ. ಜೀಕೆ ಒಳಗೊಳಗೇ ಅಳ್ಳಕಾಗಿದ್ದರು. ಮುಖದಲ್ಲಿ ಹಿಂದಿನ ತೇಜಸ್ಸಿರಲಿಲ್ಲ. ಹುಬ್ಬುಗಂಟಿಕ್ಕಿ ಬಂದದ್ದನ್ನು ಎದುರಿಸಿಯೇ ತೀರಬೇಕೆಂಬ ಹಟತೊಟ್ಟಂತಿದ್ದರು. ಊರಿನ ಕೆಲವರು ವಿದ್ಯಾರ್ಥಿಗಳಿಲ್ಲದ್ದನ್ನು ಗಮನಿಸಿದ್ದರು. ಗಿರೆಪ್ಪನ್ನು ಡಿಸ್‌ಮಿಸ್ ಮಾಡಿದ್ದು ಅನೇಕರಿಗೆ ತಿಳಿದಿತ್ತು. ಮತ್ತು ಅದು ಸರಿಯಾದ ಕ್ರಮವೆಂದು ಎಲ್ಲರೂ ಒಪ್ಪಿಕೊಂಡರು. ಆದರೆ ಹುಡುಗರ ಸ್ಟ್ರೈಕ್ ನೋಡಿ ಈ ಸಂದರ್ಭದಲ್ಲಿ ಜೀಕೆ ಹಾಗೆ ಮಾಡಿದ್ದು ತಪ್ಪೆಂದೂ ಅಂದುಕೊಂಡರು. ಜೀಕೆಯವರ ಕಟ್ಟಾಭಿಮಾನಿಗಳಿಗೆ ಮಾತ್ರ ಆ ಎಸ್.ಸಿ. ಹುಡುಗನ ಪೊಗರಿನ ಬಗ್ಗೆ ಸಿಟ್ಟುಬಂದಿತ್ತು. ಆದರೆ ಯಾರೂ ಜೀಕೆಗೆ ತಮ್ಮ ಅಸಮಾಧಾನವನ್ನು ಹೇಳಲಿಲ್ಲ. ಗುಜುಗುಜು ಮಾತಾಡಿಕೊಂಡರಷ್ಟೆ. ಈ ತನಕ ಅತಿಥಿಗಳೊಂದಿಗೆ ಮಾತಾಡುತ್ತಿದ್ದ ಮುನಿಸಿ ಪಾಲಿಟಿ ಅಧ್ಯಕ್ಷರು ಪ್ರಿನ್ಸಿಪಾಲರನ್ನು ನೋಡಿ ‘ಯಾಕ್ರೀ ಸರ, ನಿಮ್ಮ ಶಿಷ್ಯರಾರೂ ಇದ್ದಾಂಗಿಲ್ಲಲ್ಲ?’ ಎಂದರು. ಅವರು ಸುಮ್ಮನಿದ್ದುದಕ್ಕೆ ತಾವು ಮಾಡಿದ್ದು ತಪ್ಪೆಂಬ ಅರಿವಾಗಿ ತಾವೂ ಉಮ್ಮನಾಗಿ ‘ಕಾರ್ಯಕ್ರಮ ಸುರು ಮಾಡೊಣೇನ್ರಿ?’ ಅಂದರು.

ಅಂತೂ ಕಾರ್ಯಕ್ರಮ ಮುಗಿಯಿತು. ಸಾಯಂಕಾಲದ ಕಾರ್ಯಕ್ರಮಗಳನ್ನು ರದ್ದುಗೊಳಿಸಿ, ಬಂದ ಅತಿಥಿಗಳನ್ನು ಅದೇ ದಿನ ಇಳಿ ಹೊತ್ತಿನಲ್ಲಿ ಸಾಗುಹಾಕಲಾಯಿತು. ರಜಾ ಘೋಷಿಸಿದ್ದರಿಂದ ಕಾಲೇಜಿನಲ್ಲಿ ಯಾರೂ ಇರಲಿಲ್ಲ. ಸಿಪಾಯಿ ಸಿಂಗಪ್ಪನನ್ನೂ ಮನೆಗೆ ಕಳಿಸಿದ್ದರು. ಜೀಕೆ ಮಾತ್ರ ಛೇಂಬರಿನಲ್ಲಿ ಕುರ್ಚಿಗೆ ಒರಗಿ ಶೂನ್ಯಮನಸ್ಕರಾಗಿ ಕೂತಿದ್ದರು. ಸೋಲು ಅವರ ಮನಸ್ಸಿನ ಮೇಲೆ ಭಾರಿ ಆಘಾತ ಮಾಡಿತ್ತು. ಇಡೀ ಜೀವಮಾನದಲ್ಲಿ ಇಂಥದನ್ನವರು ಅನುಭವಿಸಿರಲಿಲ್ಲ. ಕಾಲೇಜನ್ನು ಕಟ್ಟಿ ಇಷ್ಟು ದಿನ ಶಿಸ್ತಿನಿಂದ ನಡೆಸಿಕೊಂಡು ಬಂದು ಈಗ ಗಿರೆಪ್ಪನಂಥ ಒಬ್ಬ ಯಃಕಶ್ಚಿತ್ ಬಾಲಕನಿಂದ ಸೋಲನ್ನು ಅನುಭವಿಸಬೇಕಾಯಿತೇ? ಈ ಭಾಗ ಹುಡುಗರು ಉಚ್ಚಶಿಕ್ಷಣ ಪಡೆಯಲಿಕ್ಕೆ ಬೆಳಗಾವಿಗೆ ಹೋಗುವುದರ ಬದಲು ಇಲ್ಲೇ ಕಲಿಯಲೆಂಬ, ಅಷ್ಟು ದೂರ ಮತ್ತು ತುಟ್ಟಿಯ ಊರಿಗೆ ಹೋಗಿ ಕಲಿಯುವುದು ಬಡವರಿಗೆಲ್ಲಿ ಸಾಧ್ಯವೆಂಬ ಘನವಾದ ಉದ್ದೇಶದಿಂದ ಕಾಲೇಜನ್ನು ಕಟ್ಟಿದ್ದರು. ಮತ್ತು ಅವರ ಉದ್ದೇಶ ಈಡೇರಿದ್ದೂ ನಿಜ. ಆದರೆ ಆ ಹುಡುಗರ್ಯಾರೂ ತನ್ನನ್ನು ಈ ದಿನ ಗುರುತಿಸಿರಲಿಲ್ಲ. ಗಿರೆಪ್ಪನಂಥ ಒಬ್ಬ ಹಲ್ಕಟ್ಟನ ಮಾತಿಗೆ ಬೆಲೆ ಕೊಟ್ಟರೇ ಹೊರತು ತನ್ನ ಮಾನ ಮರ್ಯಾದೆಯ ಬಗ್ಗೆ ಕಾಳಜಿಯ ಮಾಡಲಿಲ್ಲ. ತನ್ನ ಸ್ಥಳದಲ್ಲಿ ಇನ್ನ ಯಾರಿದ್ದರೂ ಗಿರೆಪ್ಪನನ್ನು ಡಿಸ್‌ಮಿಸ್ ಮಾಡುತ್ತಿದ್ದರು. ಬಹುಶಃ ಒಂದು ದಿನ ತಡಮಾಡಿ. ಇವರಿಗೆ ನ್ಯಾಯಾನ್ಯಾಯಗಳ ಪರಿವೆಯೇ ಬೇಡ. ತಾನೀವರೆಗೂ ಸ್ವಂತ ಕಾಳಜಿ ಬಿಟ್ಟು ಹೊಟ್ಟೆ ಕಟ್ಟಿ ಕಟ್ಟು ನಿಟ್ಟು ಅಂದದ್ದು ದಂಡವೆಂದಾಯಿತು. ಸ್ಪಷ್ಟವಾಗಿ ನಮಗೆ ಗಿರೆಪ್ಪ ಬೇಕು, ಬೇಡ ಎಂದು ಸೂಚಿಸಿದರೆಂದಾಯಿತು. ಅರ್ಥಾತ್ ಸ್ಪರ್ಧೆ ಇದ್ದದ್ದು ಗಿರೆಪ್ಪ ಮತ್ತು ಜೀಕೆ ಮಧ್ಯೆ. ಸ್ವಚ್ಛಂದತೆ ಮತ್ತು ಶಿಸ್ತುಗಳ ಮಧ್ಯೆ. ಅಂದರೆ ಇವರಿಗೆ ಶಿಸ್ತು ಬೇಡ, ಸ್ವಚ್ಛಂದತೆ ಬೇಕು ಎಂದಾಯಿತು. ಈ ಯೋಚನೆ ತಲೆಗೆ ಸೇರುತ್ತಲೂ ಜೀಕೆಗೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ದುಃಖವಾಯಿತು. ತನಗೆ ವಯಸ್ಸಾಗಿದೆ ಎಂದುಕೊಂಡರು. ಇಂದಿನ ಸಭೆಯ ಜನ ದೃಷ್ಟಿಗಳಿಂದ ತಮ್ಮನ್ನು ತಿವಿಯುತ್ತಿದ್ದುನ್ನು ನೆನೆಸಿಕೊಂಡರು. ಅವರೀಗಲೂ ತಮ್ಮ ಬಗ್ಗೆ ಮಾತಾಡಿಕೊಳ್ಳುತ್ತಿರಬಹುದು. ಗಿರೆಪ್ಪ ವಿದ್ಯಾರ್ಥಿಗಳೊಂದಿಗೆ ತನ್ನ ವಿಜಯೋತ್ಸವ ಆಚರಿಸುತ್ತಿರಬಹುದು. ಈ ತನಕ ಹತ್ತು ಮಂದಿಗೆ ಬೇಕಾಗಿ ಬದುಕಿದವರು ಬೇಡವೆಂದಾದ ಮೇಲೆಯು ಅವರ ಮಧ್ಯೆ ಬದುಕುವುದು ನಾಚಿಕೆಗೇಡು. ಸಾಕಲ್ಲ ಈತನಕ ತಾನು ನಂಬಿದ್ದಂತೆ ನಡೆದಾಯಿತು. ಹಿರಿಯರು ಹಾಕಿಕೊಟ್ಟ ದಾರಿ ತುಳಿದಾಯಿತು. ಇನ್ನುಳಿದಂತೆ ಮನೆಯಲ್ಲಿದ್ದು ಶಿವಲಿಂಗಾ ಎಂದುಕೊಂಡಿದ್ದರಾಯಿತು. ಇದೇ ಸರಿಯೆಂದು ನಿಶ್ಚಯಿಸಿ ರಾಜೀನಾಮೆ ಬರೆಯಲು ಸಿದ್ಧರಾದರು. ಈ ಯೋಚನೆಗಳ ಮಧ್ಯೆ ತಾವು ಕಗ್ಗತ್ತಲಲ್ಲೇ ಕೂತಿರುವುದು ಗೊತ್ತಾಗಿರಲಿಲ್ಲ. ಲೈಟು ಹಾಕಿ ಕಾಗದ ಪೆನ್ನು ತಕ್ಕೊಂಡರು. ಮುನಿಸಿಪಾಲ್ಟಿಯ ಅಧ್ಯಕ್ಷರ ವಿಳಾಸ ಬರೆದು, - ಅಂದ ಹಾಗೆ ತಮ್ಮ ರಾಜೀನಾಮೆಯಿಂದ ಯಾರ್ಯಾರು ಏನೇನು ಅಂದುಕೊಂಡಾರು - ಎಂದು ಧೇನಿಸಿದರು. ಬಹುಶಃ ಎಲ್ಲರಿಗೂ ಅಘಾತವಾಗಬಹುದು. ಗಿರೆಪ್ಪ ಇದನ್ನು ನಿರೀಕ್ಷಿಸಿರಲಾರ. ಕೆಲವು ಹುಡುಗರಾದರೂ ತನ್ನ ಪಕ್ಷಪಾತಿಗಳಿರಬಹುದಲ್ಲ. ಅವರು ಗಿರೆಪ್ಪನಿಗೆ ಉಗಿದು ತನ್ನ ರಾಜೀನಾಮೆ ವಾಪಸ್ ತಗೋಬೇಕೆಂದು ಸಂಘ ಹೂಡಿಯಾರು ಅಥವಾ ಹೂಡಲಿ ಬಿಡಲಿ ತನಗೇನಾಗಬೇಕಾಗಿದೆ? - ಎಂದು ಗಟ್ಟಿಯಾಗಿ ರಾಜೀನಾಮೆ ಬರೆಯತೊಡಗಿದರು. ವಾಕ್ಯವಾಕ್ಯವನ್ನೂ ಅಳೆದು ತೂಕ ಮಾಡುತ್ತಿದ್ದುದರಿಂದ ಅವರಿಗೆ ಬೇರೆ ಪರಿವೆಯೇ ಇರಲಿಲ್ಲ.

ಬರೆಯುತ್ತಿದ್ದಾಗಲೇ 'ಮೇ ಐ ಕಮಿನ್ ಸರ' ಎಂದೊಂದು ಹೆಣ್ಣು ದನಿ ಕೇಳಿಸಿತು. ಕತ್ತೆತ್ತಿ ನೋಡಿದರು. ರೋಜಾ ಬಂದಿದ್ದಳು. ಇವರ ಎಸ್ಸಿಗೂ ಕಾಯದೆ ಒಳಬಂದು ಕೂತುಕೋ ಎಂದು ಹೇಳಿಸಿಕೊಳ್ಳದೆ ತಾನೇ ಕುರ್ಚಿಯೊಂದನ್ನು ಅವರ ಪಕ್ಕಕ್ಕೆ ಸರಿಸಿಕೊಂಡು ಕೂತೇ ಬಿಟ್ಟಳು. ಸರಿಯಾಗಿ ಆಶ್ಚರ್ಯಪಡಲಿಕ್ಕೂ ಆಗದೆ ಅವಳನ್ನೇ ನೋಡುತ್ತಿದ್ದಂತೆ ಆಕೆ ಅವರ ಟೇಬಲ್ ಮೇಲಿನ ಎಡಗೈ ಮೇಲೆ ತನ್ನ ಕೋಮಲವಾದ ಹಸ್ತ ಊರಿ, 'ಸರ, ದಯಮಾಡಿ ಗಿರೆಪ್ಪನ್ನ ವಾಪಸ್ ತಗೊಳ್ರಿ' ಎಂದಳು. ಕೈಸ್ಪರ್ಶ ಬೇರೆ ಸಂದರ್ಭದಲ್ಲಾಗಿದ್ದರೆ ಏನಂದುಕೊಳ್ಳುತ್ತಿದ್ದರೋ, ಈಗ ಮೆಲ್ಲಗೆ ಅವಳ ಹಸ್ತದಲ್ಲಿದ್ದ ತಮ್ಮ ಕೈಯನ್ನು ವಾಪಸ್ ತಗೊಂಡು ಎರಡೂ ಕೈಬೆರಳು ಹೆಣೆದು ಹಿಂದೆ ಒರಗಿ ಇವಳನ್ನೇ ನೋಡಿದರು. ತಾವು ರಾಜೀನಾಮೆ ಕೊಡುತ್ತಿದ್ದುದು ಒಂದರ್ಥದಲ್ಲಿ ಇವಳಿಗೋಸ್ಕರ ಅಲ್ಲವೇ? ಆದರೆ ಆ ಯಾವ ಭಾವನೆಯೂ ಅವಳ ಮುಖದಲ್ಲಿರಲಿಲ್ಲ. ಅವಮಾನವಾದದ್ದು ಇವಳಿಗೆ. ಆದದ್ದು ಗಿರೆಪ್ಪನಿಂದ. ಈಗ ಇವಳೇ ಅದೇ ಗಿರೆಪ್ಪನನ್ನು ವಾಪಸ್ ಕಾಲೇಜಿಗೆ ತಕ್ಕೊಳ್ಳಲು ಹೇಳುತ್ತಿದ್ದಾಳೆ! ಅವ ಇವಳ ಮಿಂಡನೇನೊ! ಆಯಿತು. ತನಗಿದೆಲ್ಲ ಯಾಕೆ? ಆದರೂ ಆಟ ಆಡಬಹುದೆನ್ನಿಸಿತು.

'ಯಾಕ ತಗೋಬೇಕು'

‘ಯಾಕಂದ್ರ ಆತನಿಗೆ ಹೆಂಗೂ ಗೊತ್ತಾಗೇತ್ರಿ.’

‘ಗೊತ್ತಾಗೋದೇನು?’

‘ನಾ ಬ್ಯಾರೆದವರನ್ನು ಪ್ರೀತಿಮಾಡೋದು’ - ಎಂದು ಹೇಳಿ ಬೆರಳಿನಿಂದ ಟೇಬಲ್ ಉಜ್ಜುತ್ತ ಮುಖ ಕೆಳಗೆ ಮಾಡಿದಳು. ಜೀಕೆಗದು ಅರ್ಥವಾಗಲಿಲ್ಲ. ‘ಅಂದರ?’ ಎಂದರು.

‘ಅವ ನನ್ನ ಪ್ರೀತಿ ಮಾಡತೇನಂತ ಐದಾರು ಕಾಗದ ಬರೆದಿದ್ದ. ನಾ ಸುಮ್ಮಕಿದ್ದೆ. ನಾ ಯಾರಿಗೊ ಒಂದು ಪ್ರೇಮಪತ್ರ ಬರೆದು ನೋಟ ಬುಕ್ಕಿನಾಗ ಇಟ್ಟಕೊಂಡಿದ್ದೆ. ಅಲ್ಲೇ ಕುರ್ಚಿ ಮಾಲಿಟ್ಟು ನಾ ಪೆಂಡಾಲದಾಗ ಮಾಲೀ ಕಟ್ಟತಿದ್ದೆ. ಅವ ಆ ಪತ್ರ ನೋಡಿದ. ಹೊಟ್ಟೆಕಿಚ್ಚಿನಿಂದ ಉರಿದ. ಮರೀಗಿ ನನ್ನ ಕರೆದು ‘ಇದು ಖರೆ ಏನು?’ ಅಂದ. ‘ಹೌದು’ ಅಂದೆ. ಅದಕ್ಕ ನನ್ನ ಹಿಡಕೊಂಡು ಅವಮಾನ ಮಾಡಾಕ ಬಂದ. ನಾ ಓಡಿದೆ. ಇಷ್ಟs ನಡೆದದ್ದು.

ಕೇಳಿ ಜೀಕೆ ಮಾಸ್ತರರೊಳಗೆ ಚೇತರಿಕೆ, ಕಚಗುಳಿ ಇಟ್ಟಂತಾಯಿತು. ತಗ್ಗಿದ ದನಿಯಲ್ಲಿ

‘ಅಂದರೆ ಅವ ಕಿಸ್ ಮಾಡ್ಲಿಲ್ಲ’ ಎಂದು

‘ಇಲ್ಲರಿ’

ತುಸು ನೆಮ್ಮದಿಯಾಯಿತು. ಓಹೋ ಇಷ್ಟೇನೋ ನಡೆದದ್ದು. ಆದರೆ ಎಂಟಿ ಹೇಳಿದ್ದೇ ಬೇರೆ. ಥೂ ಅಯೋಗ್ಯ. ಅವನ ಮಾತನ್ನ ನಂಬಿದೆನಲ್ಲ. ನಾನೆಂಥ ಮೂರ್ಖ. ಹೋಗಲಿ, ಖರೆ ಏನೆಂದು ಎಮ್ಮೆಸ್‌ನನ್ನಾದರೂ ವಿಚಾರಿಸಬಹುದಿತ್ತು. ಆದರೇನು ಕಿಸ್ ಮಾಡಿರಲಿ ಮಾಡಿಲ್ಲದಿರಲಿ ಹೀಗೆಲ್ಲ ಹುಡಿಗೇರನ್ನ ಬೇಕಾಬಿಟ್ಟಿ ಛೇಡಿಸೋದೆಂದರೆ? ಇದೂ ಡಿಸ್‌ಮಿಸ್ ಮಾಡೋದಕ್ಕೆ ಲಾಯಖ್ಖಾದ ಅವ್ಯವಹಾರವೆ. ಎದೆಯಲ್ಲಿ ಅಸೂಯೆಯೊಂದು ಬೆರಳಾಡಿಸಿದಂತಾಯಿತು. ತಗ್ಗಿದ ದನಿಯಲ್ಲಿ,

‘ನೀ ಬ್ಯಾರೆದವರನ್ನು ಪ್ರೀತಿ ಮಾಡತೇನಂದ್ಯಲ್ಲ, ಯಾರದು?’

- ಎಂದರು. ಆದರೆ ಇಷ್ಟು ನೇರವಾಗಿ ಕೇಳಿದ್ದು ತಪ್ಪೆಂದು ತಕ್ಷಣ ಹೊಳೆದು,

‘ನೋಡು ಪ್ರಿನ್ಸಿಪಾಲ ಆಗಿ ನಾ ಭಾಳ ಎಚ್ಚರದಿಂದ ಇರಬೇಕಾಗ್ತದ. ಅವ ಹಾಂಗೆ ಮಾಡಿದ್ದು ಜಲಸಿಯಿಂದ. ನಾಳೆ ಇಬ್ಬರಿಗೂ ಜಗಳ ಆಗಬಹುದು. ಏನೇನೋ ಅನಾಹುತ ಆಗಬಹುದು. ನಾವು ಮುನ್ನೆಚ್ಚರಿಕೆ ತಗೋಬೇಕ ನೋಡು ಅದಕ್ಕೆ ಕೇಳಿದೆ.

ರೋಜಾ ಮಾತಾಡಲಿಲ್ಲ. ನಾಚಿಕೊಂಡು ಮುಖ ಕೆಳಗೆ ಹಾಕಿದಳು. ಕೆನ್ನೆ ಕೆಂಪೇರಿದ್ದವು. ಅವಳ ಮೈಮಾಟವನ್ನು ಜೀಕೆ ಮನಸಾರ ನೋಡಿದರು. ತುಸು ಹೊತ್ತು ಕಣ್ಣಿನಿಂದ ಅವಳ ಅಂಗಾಂಗಳನ್ನು ತೀಡಿ ತೀಡಿ, ಕೊನೆಗೆ ಮಾತಿಲ್ಲದೆ ಬಹಳ ಹೊತ್ತು ಕೂತಿರಬಾರದಲ್ಲ ಎಂದು ಮತ್ತೆ ‘ಯಾರದು, ನೀ ಪ್ರೀತಿಸಿದ್ದು ಯಾರನ್ನ?’ ಎಂದರು. ಆಕೆ ಮೆಲ್ಲಗೆ ತನ್ನ ಬ್ಯಾಗಿನಿಂದ ಒಂದು ಮಡಿಸಿದ ಕಾಗದ ತೆಗೆದು ಅವರ ಮುಂದಿಟ್ಟಳು. ‘ನಾ ಓದಲಾ?’ ಎಂದರು. ಅವಳು ‘ಹ್ಞೂ’ ಎಂಬಂತೆ ಕತ್ತು ಹಾಕಿದೊಡನೆ ತನಗಿದರಲ್ಲಿ ಆಸಕ್ತಿ ಇಲ್ಲ, ಆದರೇನು ಮಾಡುವುದು, ಡ್ಯೂಟಿ ನೋಡು ಎಂಬಂತೆ ನಿರ್ಲಕ್ಷ್ಯದಿಂದ ಕಾಗದ ಬಿಚ್ಚಿ ನೋಡಿದರು. ‘ಪ್ರಿಯ ಜೀಕೆ ಎಂದು ಸುರುವಾಗಿತ್ತು. ತಕ್ಷಣ ಮೈಗೆ ವಿದ್ಯುತ್ ಅಘಾತವಾಗಿ ಒರಗಿದ್ದವರು ಮುಂದೆ ಬಂದು ಕೆಳಗಿನ ಸಹಿ ನೋಡಿದರು. “ನಿಮ್ಮೊಲವಿನ ರೋಜಾ” ಎಂದಿತ್ತು. ನಡುಗುವ ಕೈಗಳಲ್ಲಿ ಕಾಗದ ಹಿಡಿದು ಸರಸರ ಓದಿದರು. ನಿಮ್ಮನ್ನು ತೀವ್ರವಾಗಿ ಪ್ರೀಸುತ್ತೇನೆಂದೂ ಇಂಥ ಐದಾರು ಪ್ರೇಮಪತ್ರಗಳನ್ನು ಬರೆದು ನಿಮಗೆ ಕೊಡಲಾರದೆ ಹರಿದು ಹಾಕಿದ್ದೇನೆಂದೂ ಬರೆದಿದ್ದಳು. ‘ಪ್ರೇಮಕ್ಕೆ ಕಣ್ಣಿಲ್ಲವೆಂದು ಸಾಹಿತಿಗಳೂ

ಹೇಳುತ್ತಾರೆ. ನನಗೂ ಹಾಗೆ ಆಗಿದೆ ನಿಮಗೆ ಆಗಲೇ ಮದುವೆಯಾಗಿದೆ. ಇಬ್ಬರ ಮಧ್ಯೆ ಸಾಕಷ್ಟು ವಯಸ್ಸಿನ ಅಂತರವಿದ್ದರೂ ನೀವು ನನ್ನ ಹೃದಯವನ್ನು ತುಂಬಿದ್ದೀರಿ. ಈ ನಿಮ್ಮ ಪ್ರೇಮದಿಂದ ಪಾರಾಗುವುದಕ್ಕೆ ಈ ಮೂರು ವರ್ಷಗಳಿಂದಲೂ ಪ್ರಯತ್ನಿಸಿ ವಿಫಲಳಾಗಿದ್ದೇನೆ. ಈಗ ನೀವು ನನ್ನ ಪ್ರೇಮವನ್ನು ಸ್ವೀಕರಿಸಲೇಬೇಕೆಂದು ಕಳಕಳಿಯಿಂದ ತ್ರಿಕರಣಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇಂತೀ ನಿಮ್ಮೊಲವಿನ ರೋಜಾ' ಎಂದಿತ್ತು. ಜೀಕೆ ತಮ್ಮ ಕಣ್ಣುಕಿವಿಗಳನ್ನು ಮತ್ತು ರೋಜಾಳನ್ನು ನಂಬದಾದರು. ಇನ್ನೊಮ್ಮೆ ಓದಿ ಅವಳ ಕಡೆ ನೋಡಿದರು. ಮೈಕಾವೇರಿ ನಾಳಗಳ ನೆತ್ತರು ವಿರುದ್ಧ ದಿಕ್ಕಿನಲ್ಲಿ ಹರಿದಂತಾಯಿತು. ಮಾತಾಡಬೇಕೆಂದರೆ ಗಂಟಲೊಣಗಿತ್ತು. ತೊದಲುತ್ತ ಏನೋ, ಬಹುಶಃ ರೋಜಾ ಎಂದು ಹೇಳುವಷ್ಟರಲ್ಲಿ ಕರೆಂಟು ಹೋಯಿತು. ಕತ್ತಲೆಯಲ್ಲಿ ಬೆಳಕಿಗಾಗಿ ಎಂಬಂತೆ ಟೇಬಲ್ ಮೇಲೆ ಕೈಯಾಡಿಸುತ್ತಿದ್ದಾಗ ಅವಳ ಕೈಸಿಕ್ಕಿತು. ಕೈಕೈ ಮಿಲಾಯಿಸಿತು. ಕೈ ತೋಳಿನಗುಂಟ ಹರಿದು ಅವಳ ಬೆನ್ನಿನ ಇಳಿಜಾರಿಗಿಳಿಯತೊಡಗಿತು. ಏನಾಯಿತಯೆಂದು ತಿಳಿಯುವಷ್ಟರಲ್ಲಿ ಯಾವುದೋ ಶಕ್ತಿಯ ಸೆಳೆತಕ್ಕೆ ಸಿಕ್ಕಂತಾಗಿ ರೋಜಾಳನ್ನು ತಬ್ಬಿಕೊಂಡು ಮುತ್ತಿಟ್ಟರು. ಅವಳು ಅವರ ಕತ್ತನ್ನು ತೋಳುಗಳಿಂದ ಬಳಸಿ ಅವರ ಸುಡುವ ಹಣೆಯ ಮೇಲೆ ತಣ್ಣಗಿನ ತುಟಿ ಒತ್ತಿ ಕಿವಿಯಲ್ಲಿ 'ಸರ ಆಯ್ ಲವ್ ಯೂ' ಎಂದು ಪಿಸುಗುಟ್ಟಿದಳು. ಅಷ್ಟರಲ್ಲಿ ಲೈಟ್ ಬಂತು.

ರೋಜಾ ಸರ್ರನೆ ಹೊರಗೋಡಿ ಮರೆಯಾದಳು. ಜೀಕೆ ನೆಲಕ್ಕಿಳಿದರು. ಮೈ ಜ್ವರದಿಂದೆಂಬಂತೆ ಸುಡುತ್ತಿತ್ತು. ಕೈಕಾಲಲ್ಲಿಯ ಶಕ್ತಿ ಉಡುಗಿದೆ ಎನ್ನಿಸಿತು. ಥರಥರ ನಡುಗುತ್ತಿದ್ದರು. ತನಗೇ ತಿಳಿಯದ ತನ್ನ ಹೃದಯದ ಗುಟ್ಟನ್ನು ಪ್ರಥಮಬಾರಿ ಕಂಡು ಭೀತರಾದಂತಿದ್ದರು. ಅವಸರದಿಂದ ಟೇಬಲ್ ಮೇಲಿನ ಅವಳ ಪತ್ರ ತಗೊಂಡು ಜೇಬಿಗಿಳಿಬಿಟ್ಟು ಬಾಗಿಲಿಗೋಡಿ ಹೊರಗೆ ನೋಡಿದರು. ದೂರದಲ್ಲಿ ಪೆಂಡಾಲ್‌ನಲ್ಲಿ ಮಾತ್ರ ಯಾರೋ ಹುಡುಗ ಸುಳಿದಾಡುತ್ತಿದ್ದ ಹಾಗಿತ್ತು. ಯಾರದು, ಅರೆ ಗಿರೆಪ್ಪ! ಜೀಕೆ ಕಣ್ಣು ಭಗ್ಗನೆ ಹೊತ್ತಿಕೊಂಡವು. ಗಟ್ಟಿಯಾಗಿ ನಿಂತರು. ತುಸು ಹೊತ್ತು ಮತ್ಸರದಿಂದ ನೋಡಿ 'ಗೆದ್ದವನು ನೀನಲ್ಲೊ ಮಗನ, ನಾನು! ನಾನು ಗೆದ್ದವನು' ಎಂದು ಹೇಳಿ ತೊಡೆ ತಟ್ಟಿಕೊಂಡ, ತಟ್ಟಿಕೊಂಡು! ತಕ್ಷಣ ಹಾಗೆ ತಟ್ಟಿಕೊಂಡದ್ದು ಅನಾಗರಿಕವೆನ್ನಿಸಿ, ಸದ್ಯ ಯಾರೂ ನೋಡಲಿಲ್ಲವೆಂದು ಸಮಾಧಾನದಿಂದ ಹಿಂದಿರುಗಿದರು.

೬

ಜೀಕೆ ಅಕ್ಷರಶಃ ಆನಂದಿಂದ ಉನ್ಮತ್ತರಾದರು. ಬೆಳಗಿನ ಕಾರ್ಯಕ್ರಮದಲ್ಲಿ ಅವಮಾನವಾಗಿತ್ತಲ್ಲ ಅದರ ಯಾವ ಗುರುತೂ ಅವರ ನಡಿಗೆಯಲ್ಲಿರಲಿಲ್ಲ. ಬದುಲು ಗೆದ್ದವರಂತೆ ಕತ್ತೆತ್ತಿ ನಡೆಯುತ್ತ ಮನೆಗೆ ಹೋದರು. ನಿಜ ಹೇಳಬೇಕೆಂದರೆ ಒಳಗೊಳಗೇ ನಗುತ್ತಿದ್ದರು. ಮತ್ತು ಆ ನಗೆಯನ್ನು ಬಹು ಪ್ರಯಾಸದಿಂದ ತಡೆ ಹಿಡಿದಿದ್ದರು. ಮನೆಗೆ ಬಂದರೆ ಗಿರಿಜಮ್ಮ ಜ್ವರ ಬಂದು ಮಲಗಿದ್ದಳು. ಇವರು ಹೋಗುವುದರೊಳಗೆ ಡಾಕ್ಟರ್‌ಗೆ ತೋರಿಸಿ ಔಷಧಿ ನುಂಗಿ ಮಲಗಿದ್ದಳು. ಜೀಕೆ ಹೆಂಡತಿಗೆ ಗಂಜಿ ಕುಡಿಸಿದರು. ಅವಳು 'ಅದೇನು ಕೈಸುಡುತ್ತಾವಲ್ಲ, ನಿಮಗೂ ಜ್ವರ ಬಂದಿರಬೇಕು. ಡಾಕ್ಟರಿಗೆ ತೋರಿಸಬಾರದ?' ಎಂದಳು. 'ಖರೆ' ಎಂದು ಮನಸ್ಸಿನಲ್ಲೆ ಹೇಳಿಕೊಂಡರು.

ಊಟದ ಶಾಸ್ತ್ರ ಮಾಡಿದರು. ಹೆಂಡತಿ ಮಲಗಿದ್ದು ಖಾತ್ರಿಯಾದೊಡನೆ ಸ್ಟಡಿ ರೂಮಿಗೆ ಹೋಗಿ ಆ ಪತ್ರ ತೆಗೆದರು. ನಾಕೈದು ಬಾರಿ ಓದಿದರು. ಹೆಂಡತಿ ಎದ್ದು ಬರುವುದಿಲ್ಲವೆಂದು ಗೊತ್ತಿದ್ದರೂ ನಡುನಡುವೆ ಬಾಗಿಲ ಕಡೆ ಕಳ್ಳ ನೋಟ ಬೀರುತ್ತಿದ್ದರು. ಮತ್ತೆ ಓದಿ ಬಂದು ಮಲಗಿದರು. ನಿದ್ದೆಯಲ್ಲಿ ಬಂದೀತು? ಆ ದಿನದ ಘಟನೆಯನ್ನು ಅಂದರೆ ರೋಜಾ ಬಂದಿದ್ದರಿಂದ ಹಿಡಿದು ಮತ್ತೆ ಅವಳು ಮರೆಯಾದವರೆಗಿನ ಘಟನೆಯನ್ನು ವಿವರವಾಗಿ ನೆನೆದರು. ಮತ್ತೆ ಓದಬೇಕೆನಿಸಿ ಎದ್ದು ಹೋಗಿ ಪತ್ರ ಓದಿದರು. ಆ ಪತ್ರದ 'ನಿಮ್ಮೊಲವಿನ ರೋಜಾ' ಎಂದಿದ್ದಲ್ಲಿ ತುಟಿ ಒತ್ತಿದರು. ಪತ್ರವನ್ನು ಜತನವಾಗಿ ಕೋಟಿನ ಜೇಬಿನಲ್ಲಿಟ್ಟು ಬಂದು ಮಲಗಿದರು.

ಹೆಂಡತಿಗೆ ತಾನು ದ್ರೋಹ ಬಗೆದಂತಲ್ಲವೇ ಎಂದು ಅಂದುಕೊಂಡರು. ಆದರೆ ಈ ಸುಡುವ ಸುಖದ ಮುಂದೆ ದ್ರೋಹ ಕ್ಷುದ್ರವಾಗಿ ಕಂಡಿತು. ಈಗ ತಮ್ಮ ದೇಹದ ಗುಂಟ ರೋಜಾ ಕೂಡ ಮಲಗಿದ ಹಾಗೆ ಚಿತ್ರಿಸಿಕೊಂಡರು. ಮತ್ತು ಆ ಕಲ್ಪನೆಯ ರೋಜಾ ತಮ್ಮನ್ನು

ತಬ್ಬಿಕೊಂಡಿರುವಂತೆ ಮಾಡಿ ಮೆಲ್ಲಗೆ ಅವಳಿಗೂ ಹೊದಿಸಿದ ಹಾಗೆ ಹೊದಿಕೆ ಹೊದ್ದುಕೊಂಡರು. ಅವಳ ಮೈಯ ಏರಿಳಿವುಗಳ ಮಧುರವಾದ ಬಿಸಿಯನ್ನನುಭವಿಸುತ್ತ ತೇಲುಗಣ್ಣು ಮೇಲುಗಣ್ಣಾಗಿ ಬಿದ್ದುಕೊಂಡರು. ರೇಷ್ಮೆಯಂಥ ಮೈ ಅವಳದು. ಈಗೊಂದು ತಾಸಿನ ಹಿಂದೆ ಮುತ್ತಿಟ್ಟಳಲ್ಲ ಅದನ್ನು ಮತ್ತೆ ಮತ್ತೆ ರಿಪೀಟ್ ಮಾಡಿ ಬೆವರಿದರು. ಮನಸ್ಸಿನಲ್ಲೇ ನರಳಿದರು. ಇಬ್ಬರೂ ಅರ್ಥವಿಲ್ಲದ ಏನೇನೋ ಮಾತಾಡಿಕೊಂಡರು ಕೂಡ.

ಈಗ ಗಿರ್ಯಾ ಮಗ ಏನು ಮಾಡುತ್ತಿರಬಹುದು? ಮಲಗಿದ್ದಾನೋ ಅವನಿದ್ದಲ್ಲಿಗೆ ಹೋಗಿ ಎಬ್ಬಿಸಿ, ಈ ದಿನ ನಡೆದದ್ದನ್ನೆಲ್ಲ ಹೇಳಿ ಅವನು ಅಸೂಯೆಪಡುವ ಹಾಗೆ ಮಾಡಬೇಕು ಎನ್ನಿಸಿತು. 'ಲೇ ಗಿರ್ಯಾ ಮಗನ, ಇಕಾ ಇಲ್ಲಿ ನೋಡಲೆ; ರೋಜಾ ನನ್ನನ್ನು ತಬ್ಬಿಕೊಂಡು ಹೆಂಗ ಬಿದ್ದಾಳ ನೋಡು. ಏನೇನೋ ಮಾಡಕ ಹತ್ಯಾಳಲೇ! ಛೇ, ನನಗ ಆನಂದ ತುಳುಕಿ ತುಳುಕಿ ಅಳೋ ಹಾಂಗ ಆಗತೈತಿ, ಹಗಲಿ ರಾತ್ರಿ ಬರಿ ಹಿಂಗ ಇರಬೇಕನಸತೈತಿ. ಏಳಲೇಮಗನ ಗಿರ್ಯಾ, ಎದ್ದ ಬಾ, ರೋಜಾನ ಬಗ್ಗೆ ಮಾತಾಡೋಣ. ನೀನೂ ಹೇಳು ನಾನೂ ಹೇಳತೀನಿ. ಆದರ ನನಗ ಈ ಹೊತ್ತ ಅಧಾಂಗ ನಿನಗ ಆಗಿಲ್ಲಬಿಡು. ಯಾಕಂದರ ನೀ ಬರೀ ಆಕೀನ್ನ ಮುಟ್ಟಿದ್ದೀ ಆದೀತು, ಆದರ ನನಗೆ ಕೊಟ್ಟಳಲ್ಲ ಅಂಥ ಕಿಸ್ ನಿನಗ ಕೊಟ್ಟ ಇಲ್ಲ ಬಿಡು. ಬೇಕಾದರ ಆಣೀ ಮಾಡಿ ಹೇಳತೀನಿ....' ಎಂದೇನೇನೋ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಿರುವಂತೆ ಪಕ್ಕದಲ್ಲಿ ತುಂಟಾಟ ಮಾಡುತ್ತಿದ್ದ ರೋಜಾಳ ಕಾಲ್ಪನಿಕ ರೂಪ ಮತ್ತೆ ಕಣ್ಣಿಗೆ ಕಟ್ಟಿತು. ಇವರ ಮೈತುಂಬ ಅವಳ ಬಾಯಿ ಆಡಿದಂತೆನಿಸಿ ಸುಖದ ಅಮಲಿನಲ್ಲಿ ಬಿದ್ದುಕೊಂಡರು.

## ೧೦

ಪ್ರೇಮಕ್ಕೆ ದಿವ್ಯಶಕ್ತಿಯನ್ನಿತ್ತು ಅದನ್ನು ಮಾನವ ಹೃದಯದಲ್ಲಿಟ್ಟ ಶಿವಲಿಂಗ ದೇವರ ಮಹಿಮೆಗೆ ಶರಣು ಹೇಳೋಣ. ಒಣ ನೆಲದಲ್ಲಿ ನೀರು ಚಿಮ್ಮೋದನ್ನು, ಉಸುಕಿನಲ್ಲಿ ಹುಸಿರಾಡೋದನ್ನು, ಕಲ್ಲು ಕರಗುವದನ್ನು ನಾವು ಪವಾಡ ಎನ್ನುತ್ತೇವೆ. ಜೀಕೆ ಮಾಸ್ತರರ ಹೃದಯದಲ್ಲಿ ಅದು ಅಂಥ ವಯಸ್ಸಾದ ಹೃದಯದಲ್ಲಿ ಪ್ರೇಮ ಪಲ್ಲವಿಸಿದ್ದನ್ನು ಅದು ಹಾಹಾ ಅನ್ನುವುದರೊಳಗೆ ಹಬ್ಬಿ ಹೂ ಬಿಟ್ಟಿದ್ದನ್ನು ಪವಾಡವೇ ಎಂದು ನಾವು ಹೇಳಬಯಸುತ್ತೇವೆ. ನಾವು ಪವಾಡದ ನೆಪದಲ್ಲಿ ಕೊಟ್ಟ ಉಪಮೆ ಈಗಿನ ಅವರ ಸ್ಥಿತಿಗೆ ಹೆಚ್ಚೆನಿಸೀತು. ಆದ್ದರಿಂದ ರೋಜಾ ಅವರ ಹಣೆಯ ಮೇಲೆ ತುಟಿಯೂರಿದಳಲ್ಲ, ತುಟಿಯೂರಿದಳೆನ್ನುವುದಕ್ಕಿಂತ ಹೆಡೆಯೂರಿದಳೆನ್ನುವುದು ಸದ್ಯಕ್ಕೆ ಹೆಚ್ಚು ಸಮಂಜಸವೆಂದು ನಮ್ಮ ಭಾವನೆ. ಅದು ಅವರ ಅಂಗಾಲಿನಿಂದ ನೆತ್ತಿಯ ತನಕ ವಿಷ ಆವರಿಸುವಂತೆ ಮಾಡಿತು. ಮತ್ತು ಯಾವಾಗೆಂದರೆ ಆವಾಗ ಅದು ಮೈಯ ಎಲ್ಲೆಲ್ಲಿಂದಲೋ ಆನಂದವಾಗಿ ಚಿಮ್ಮುತ್ತಿತ್ತು. ಅವರ ಕಣ್ಣುಗಳಲ್ಲೀಗ ಈ ತನಕ ಅಪರಿಚತವಾದ ಚಂಚಲವಾದ ಬೆಳಕೊಂದು ಆಗಾಗ ಮಿಂಚಿ ಮಾಯವಾಗುತ್ತಿತ್ತು. ಮತ್ತು ಅದರ ಬೆಳಕಿನಲ್ಲಿ ಜಗತ್ತು ಎಂದಿಗಿಂತ ಹೆಚ್ಚು ಉದಾರವಾಗಿರುವಂತೆ ಆನಂದಮಯವಾಗಿರುವಂತೆ ತೋರುತ್ತಿತ್ತು. ಆದರೆ ಆ ಬೆಳಕು ಕೆಲವು ಸಂಗತಿಗಳಿಗೆ ಕುರುಡಾಗಿತ್ತು. ಎನ್ನುವುದನ್ನು ಒಪ್ಪಬೇಕು. ಉದಾ : ಜ್ವರದಿಂದ ನರಳುತ್ತಿದ್ದ ಗಿರಿಜಮ್ಮ ಅವರಿಗೆ ಕಾಣಲಿಲ್ಲ. ಈ ತನಕ ಯಾವ ವ್ಯವಸ್ಥೆಯ ಭಾಗವಾಗಿದ್ದರೋ ಆ ವ್ಯವಸ್ಥೆಗೆ ತಾವು ಹಾಸ್ಯಾಸ್ಪದರಾಗಬಹುದಾದ್ದೂ ಕಾಣಲಿಲ್ಲ. ಅವರ ಈಗಿನ ಇರುವಿಕೆಗೂ ದಶಮಾನೋತ್ಸವದ ಹಿಂದಿನದಕ್ಕೂ ಎಷ್ಟು ವ್ಯತ್ಯಾಸವಾಯಿತೆಂದರೆ ಅದನ್ನವರ ಪರ್ವಾಶ್ರಮ ಎಂದು ಕರೆಯಬಹುದಾದಷ್ಟು.

ಉದಾಹರಣೆಗೆ ಗಿರೆಪ್ಪನನ್ನು ಡಿಸ್‌ಮಿಸ್ ಮಾಡಿದ್ದ ಆರ್ಡರನ್ನು ವಾಪಸ್ ತೆಗೆದುಕೊಂಡರು. ಇದರಲ್ಲಿ ಔದಾರ್ಯ ಮತ್ತು ರೋಜಾಳ ಒತ್ತಾಯವಿದ್ದದ್ದು ನಿಜ. ಜೊತೆಗೇ ಹ್ಯಾಗೂ ಇದು ಅವನ ಅಂತಿಮ ವರ್ಷ. ಮಗ ನನ್ನನ್ನು ಸೋಲಿಸಬೇಕೆಂದನಲ್ಲ, ಈಗ ನನ್ನ ಗೆಲವು ಕಂಡು ಅಸೂಯೆಯಾಗಲಿ ಎಂಬ ಕೊಳಕು ಬುದ್ದಿಯೂ ಹಿನ್ನಲೆಗಿತ್ತು. ಜೀಕೆ ಪಾಠಗಳಲ್ಲಿ ಈಗ ವಾಚಾಳಿತನ ಹೆಚ್ಚಿತು. ಅಗತ್ಯ ಇರಲಿ ಇಲ್ಲದಿರಲಿ ತಮಗೆ ಗೊತ್ತಿದ್ದುದನ್ನೆಲ್ಲ ಜನಪ್ರಿಯ ಅಧ್ಯಾಪಕರು ಹೇಳುವಂಥ ಜೋಕು ಸಮೇತ ಹೇಳುತ್ತಿದ್ದರು. ಹೇಳಿ ಆಗಾಗ ರೋಜಾ ಕಡೆ ನೋಡುತ್ತಿದ್ದರು. ಒಂದೇ ದಿನ ರೋಜಾ ಕಾಣಿಸದಿದ್ದರೆ ಚಡಪಡಿಸುತ್ತಿದ್ದರು. ಅವರ ಸಂಸ್ಕೃತ ಕ್ಲಾಸಿದ್ದದ್ದು ವಾರಕ್ಕೆ ಮೂರು ಗಂಟೆ ಮಾತ್ರ. ದಿನಕ್ಕೊಮ್ಮೆಯಾದರು ಆ ಕ್ಲಾಸಿಗೆ ಹೋಗುವ ಅವಕಾಶವಿದ್ದರೆ ಎಷ್ಟು ಚೆನ್ನಾಗಿತ್ತಲ್ಲ ಎಂದು ಹಾರೈಸುತ್ತಿದ್ದರು. ಆ ಕ್ಲಾಸಿನ ಯಾವನಾದರೂ ಅಧ್ಯಾಪಕ ಅಬ್ಸೆಂಟ್ ಆದರೆ ಅದನ್ನೂ ತಾವೇ ತೆಗೆದುಕೊಳ್ಳುತ್ತಿದ್ದರು. ಚೆಕ್ ಮಾಡುವ ನೆಪದಲ್ಲಿ ಲೈಬ್ರರಿಗೂ

ಹೋಗಿ ಆ ಮೂಲಕ ರೋಜಾಳತ್ತ ದೃಷ್ಟಿ ಬೀರಿ ಬರುತ್ತಿದ್ದರು. ಆಕೆ ಆಗಾಗ ತನಗೆ ಬಾರದ ವಿಷಯ ತಿಳಿಯುವ ನೆಪದಲ್ಲಿ ಇವರ ಛೇಂಬರಿಗೆ ಬಂದು ರಸವತ್ತಾದ ಪ್ರೇಮಪತ್ರಗಳನ್ನು ಕೊಟ್ಟು ಹೋಗುತ್ತಿದ್ದಳು. ಇವರು ಅದನ್ನು ಸಿಪಾಯಿ ಸಿಂಗಪ್ಪನಿಗೂ ಕಾಣಿಸದಂತೆ ಟೇಬಲ್ ಕೆಳಗೆ ಹಿಡಿದು ಓದಿ ರೋಮಾಂಚಿತರಾಗುತ್ತಿದ್ದರು. ಅವಳು ಬಳಿಯಿದ್ದಾಗ ಒಂದು ಕುಡಿನೋಟ ಬೀರಿದರೆ ಸಾಕು ಪರವಶರಾಗಿ ಬಿಡುತ್ತಿದ್ದರು. ಜೋರಾಗಿ ಮಾತಾಡಿದರೆ ಅವಳೆಲ್ಲಿ ನೊಂದುಕೊಳ್ಳುವಳೋ ಎಂದು ತಮ್ಮ ನಗಾರಿ ಧ್ವನಿಯನ್ನು ತಗ್ಗಿಸಿ ಮೃದುವಾಗಿ ಮಾತಾಡುತ್ತಿದ್ದರು. ಸಿಪಾಯಿ ಸಿಂಗಪ್ಪನಿಗೆ ಕೇಳೀಸೀತೆಂಬ ಭಯವೂ ಇದ್ದಿತೆನ್ನುವ, ಆಕೆ ಹೋದಾಗ ಮಾತ್ರ ನಿರುತ್ಸಾಹದ ಆಳ ಸ್ಥಿತಿಗಿಳಿಯುತ್ತಿದ್ದರು. ನಿಟ್ಟುಸಿರು ಬಿಡುತ್ತ ಕೂರುತ್ತಿದ್ದರು.

ಹಂತಹಂತವಾಗಿ ಜೀಕೆ ಮಾಸ್ತರರ ಉಡುಪು ಬದಲಾಯಿತು. ಈಗ ನೀಟಾಗಿ ಬುಷ್‌ಷರ್ಟು ಪ್ಯಾಂಟ್ ಹಾಕಿ ತಲೆಬಾಚಿಕೊಂಡು ಬರುತ್ತಿದ್ದರು. ಮತ್ತು ಒಂದು ಬಾಚಣಿಕೆ ಸದಾ ಅವರ ಜೇಬಿನಲ್ಲಿರುತ್ತಿತ್ತು. ಈ ಬದಲಾವಣೆಗೆ ಅರ್ಧ ರೋಜಾಳ ಪ್ರೇಮ ಕಾರಣವಾಗಿದ್ದರೆ ಇನ್ನರ್ಧ ಗಿರೆಪ್ಪನ ಬಗೆಗಿನ ಅಸೂಯೆ ಕಾರಣವಾಗಿತ್ತು. ಅನಗತ್ಯವಾಗಿ ಆತನೊಂದಿಗೆ ಸ್ಪರ್ಧೆಗಿಳಿದಂತಿತ್ತು ಜೀಕೆ. ಈ ಬದಲಾವಣೆಯನ್ನು ಜನ ಗಮನಿಸದೇ ಇರಲಿಲ್ಲ. ಈ ಮುದುಕನಿಗೇನು ಎಡಪ್ರಾಯ ಬಂದಿದೆಯೇ ಎಂದು ಅಧ್ಯಾಪಕರು ಕದ್ದು ಆಡಿಕೊಂಡರು. ಮುದಿ ಹುಚ್ಚೆರಬೇಕೆಂದು ಹುಡುಗರಾಡಿಕೊಂಡರು. ಆದರೆ ಇವರೆಲ್ಲ ಉಡುಪಿನ ಬದಲಾವಣೆಯನ್ನು ಕಂಡವರೇ ಹೊರತು ರೋಜಾ ಮತ್ತು ಜೀಕೆಯವರ ಮಧ್ಯೆ ಸಂಬಂಧವಿದೆಯೆಂಬುದನ್ನು ಪತ್ತೆ ಹಚ್ಚಲಾಗಲಿಲ್ಲ. ಗಿರೆಪ್ಪನಿಗೆ ತಿಳಿದಿತ್ತೇನೋ ಅವನು ಯಾರ ಮುಂದೂ ಬಾಯಿ ಬಿಟ್ಟಿರಲಿಲ್ಲ. ಅಥವಾ ಅವನಿಗೂ ಇದರ ಸುಳಿವು ಹತ್ತಿರಲಿಕ್ಕಿಲ್ಲ. ಇನ್ನೇನು ರಿಟೈರಾಗುವ ಕಾಲ ಬಂತಲ್ಲ ಇದ್ದಷ್ಟು ದಿನ ಮಜಾ ಮಾಡಿ ಹೋಗೋಣವೆಂದಿರಬೇಕು ಎಂಬುದೇ ಎಲ್ಲರ ತರ್ಕವಾಗಿತ್ತು. ಆದರೆ ಎಂಟಿಗೆ ಮಾತ್ರ ಇದು ಗೊತ್ತಿತ್ತು.

ಇದೇ ನೆಪದಲ್ಲಿ ಎಂಟಿ ಜೀಕೆಮಾಸ್ತರರ ಆಪ್ತನಾಗಿಬಿಟ್ಟ. ಎಂಟಿ ವಿಚಾರಗೊತ್ತಿದ್ದೂ ಅವನನ್ನು ಸಮೀಪಕ್ಕೆ ಬಿಟ್ಟುಕೊಳ್ಳಲು ಕಾರಣ ಜೀಕೆ ಹೊರಗೆ ಧೈರ್ಯಸ್ಥರಂತೆ ಕಾಣುತ್ತಿದ್ದರೂ ಒಳಗೊಳಗೆ ತಮ್ಮಲ್ಲೇ ಅಪನಂಬಿಕೆ ತಳೆದಿದ್ದರು. ಅಂಥ ಪುಟ್ಟ ಹುಡುಗಿಯ ಜೊತೆ ಅವಳ ತಂದೆಯಂತೆ ಕಾಣುತ್ತಿದ್ದ ತಾವು ಸಂಬಂಧ ಹೊಂದಿರುವುದು ತಪ್ಪೆಂಬ, ಸಮಾಜ ಇದನ್ನು ಕಂಡು ನಗಬಹುದೆಂಬ ಭಾವನೆ ಅವರೆಷ್ಟೇ ಇದಕ್ಕೆ ವಿರುದ್ಧವಾಗಿ ಆಲೋಚಿಸಿದರೂ ಆಳದಲ್ಲಿತ್ತು. ಅಲ್ಲದೆ ಆ ದುಷ್ಟ ಗಿರೆಪ್ಪ ರೋಜಾಳನ್ನು ಗೆದ್ದುಬಿಟ್ಟಾನೆಂಬ ಭಯವೂ ಅವರಿಗಿತ್ತು. ಅವಳನ್ನು ಕಾಯಲು, ಅವಳ ಚಲನವಲನಗಳನ್ನು ಗಮನಿಸುತ್ತಿರಲು ಒಬ್ಬ ಚೇಲನ ಅವಶ್ಯಕತೆಯಿತ್ತು. ಎಂಟಿ ಇಂಥದಕ್ಕೆ ಹೇಳಿ ಮಾಡಿಸಿದವ. ಡೀಕೆ ತರುವಾಯ ತಾನೇ ಪ್ರಿನ್ಸಿಪಾಲನಾಗುವ ಹವಣಿಕೆಯುಳ್ಳ ಆತ ಇಂಥ ಅವಕಾಶನ್ನು ಹೇಗೆ ಬಿಟ್ಟಾನು? ಪ್ರಿನ್ಸಿಪಾಲರ ಬದಲಾದ ಯಾವ ಉಡುಪನ್ನೂ ಆತ ಹೊಗಳುತ್ತಿದ್ದ. ರೋಜಾ ಎಲ್ಲಿರುವಳೆಂದು ತಿಳಿದುಬಂದು ಹೇಳುತ್ತಿದ್ದ. ಆಕೆ ಆಯಾ ದಿನ ಯಾರ ಜೊತೆಗಿದ್ದಳು. ಸಾಧ್ಯವಾದರೆ ಏನೇನು ಮಾತಾಡಿದಳೆಂದೂ ವರದಿಯೊಪ್ಪಿಸುತ್ತಿದ್ದ. ವೀರ್ಯವೃದ್ಧಿಯಾಗುವ ಆಯುರ್ವೇದೀಯ ಟಾನಿಕ್‌ಗಳನ್ನೂ ತಂದುಕೊಡುತ್ತಿದ್ದ, ಆಶ್ಚರ್ಯವೆಂದರೆ ಈ ಬಗ್ಗೆ ಆತ ಇನ್ನೊಬ್ಬರೆದುರಿಗೆ ನಿಜವಾಗಿಯೂ ಬಾಯಿ ಬಿಟ್ಟಿರಲಿಲ್ಲ. ಯಾಕೆಂದರೆ ಅದೇನಾದರು ಜೀಕೆಗೆ ಗೊತ್ತಾದರೆ ಪ್ರಿನ್ಸಿಪಾಲನಾಗುವುದಿರಲಿ ತಾನು ಕೆಲಸದಲ್ಲಿರುವುದೂ ಶಕ್ಯವಿಲ್ಲವೆಂದು ಅವನಿಗೆ ಗೊತ್ತಿತ್ತು.

ಜೀಕೆ ಈಗ ಹುಡುಗರ ಬಗೆಗೆ ಹೆಚ್ಚು ಉದಾರಿಯಾಗಿದ್ದರು. ಹುಡುಗರೊಮ್ಮೆ ಯೂನಿಯನ್ ವತಿಯಿಂದ ಕೂಡಲಸಂಗಮಕ್ಕೆ ಒಂದು ದಿನದ ಟ್ರಿಪ್ಪು ತೆಗೆಯಬೇಕೆಂದರು. ಗಿರೆಪ್ಪ ಹೋಗಿ ಜೀಕೆ ಮಾಸ್ತರರನ್ನು ಕೇಳಿದ. ಅವರು ಒಪ್ಪಲಿಲ್ಲ. ಕೊನೆಗೆ ರೋಜಾ ಬಂದು ಹೇಳುತ್ತಲೂ ಒಪ್ಪಿಕೊಂಡರು. ಮತ್ತು ಆಶ್ಚರ್ಯವೆಂದರೆ ತಾವೂ ಬರುವುದಾಗಿ ಹೇಳಿದರು. ಆಯಿತು. ಅಲ್ಲಿಯೇ ಟಿ.ಬಿ.ಯಲ್ಲಿ ಒಂದು ದಿನದ ವಾಸವೆಂದೂ ವನಭೋಜನ ಮಾಡಿಕೊಂಡು ಮಾರನೇ ದಿನ ಬರುವುದೆಂದೂ ಆಯಿತು. ಜೀಕೆ ಇದ್ದಲ್ಲಿ ಎಂಟಿ ಇರಬೇಕಲ್ಲ. ಅವನೇ ಬಸ್ಸಿನ ವ್ಯವಸ್ಥೆಯನ್ನೂ ಮಾಡಿದ. ಪ್ರಿನ್ಸಿಪಾಲರು ತಮ್ಮ ಜೊತೆ ಬರುವುದು ಅನೇಕರಿಗೆ ಇಷ್ಟವಾಗಲಿಲ್ಲ. ಆದರೇನು ಮಾಡುವುದು. ಆಡುವ ಹಾಗಿಲ್ಲ. ಕೆಲವು ಹುಡುಗರಂತೂ ಆ ಮುದಿ ಜೀಕೆ ಜೊತೆಗೆ ಅದೇನು ಮಜವೆಂದು ಟ್ರಿಪ್ಪಿಗೆ ಬರಲೇ ಇಲ್ಲ. ಅಂತೂ ಇಂತೂ ಮುಕ್ಕಾಲು ಬಸ್ಸಿನ ಜನ ಆದರು. ಬಸ್ಸು ಹೊರಟಿತು.

ಲೆಕ್ಕಾಚಾರದಲ್ಲಿ ಅದು ಚಳಿಗಾಲ. ಆದರೆ ಆ ಭಾಗದಲ್ಲಿ ಚಳಿಗಾಲ ಎಲ್ಲಿ ಬರುತ್ತದೆ? ಅದು ಬೇಸಿಗೆಗೆ ಜಮಾ ಎನ್ನಬೇಕಷ್ಟೆ. ಜೊತೆಗೆ ಜೀಕೆ ಇದ್ದರಲ್ಲ, ಹುಡುಗರು ತುಟಿ ಬಿಗಿದುಕೊಂಡು ಕೂತಿದ್ದರು. ಜೀಕೆಗಿದು ಗೊತ್ತಾಗಿ ಯಾರಾದರೂ ಹಾಡಬಹುದಲ್ಲ ಎಂದು ಸೂಚಿಸಿದರು. ಸದ್ಯ ಅನೇಕರು ಹಾಡಿದರು. ಜೀಕೆ ಒತ್ತಾಯಮಾಡಿ ರೋಜಾಳಿಂದಲೂ ಹಾಡಿಸಿದರು. ಕೊನೆಗೆ ಎಲ್ಲರೂ ಸೇರಿ 'ಸರ ನೀವೂ ಒಂದ ಹಾಡರಿ' ಎಂದು ಜೀಕೆಗೇ ಒತ್ತಾಯ ಮಾಡಿದರು.  ಜೀಕೆ ಸಿಟ್ಟಿಗೇಳುತ್ತಾರೆಂದು ಎಂಟಿ ಭಾವನೆ. ಆದರೆ ಜೀಕೆ ಬಾಯಿ ತೆರೆದೇಬಿಟ್ಟರು! ಅದೇ ನಗಾರಿ ಧ್ವನಿಯಲ್ಲಿ ಹಿಂದಿ ಸಿನಿಮಾ ಗೀತೆಯೊಂದನ್ನು (ಅದೂ ಪ್ರೇಮಗೀತೆ) ಗಟ್ಟಿಯಾಗಿ ಹಾಡತೊಡಗಿದರು. ಅವರ ಹಾಡುಗಾರಿಕೆ ಹ್ಯಾಗಿತ್ತೆಂದರೆ ಹುಡುಗರು ಬಾಯಿ ಬಿಡದೆ ಹೊಟ್ಟೆಹಿಡಿದುಕೊಂಡು ಸೀಟಿನ ಮರೆಯಲ್ಲಿ ಬಿದ್ದು ಬಿದ್ದು ನಕ್ಕರು. ಹುಡುಗಿಯರಂತು ಹೊಟ್ಟೆಹಣ್ಣಾಗುವಂತೆ ನಕ್ಕರು. ಜೀಕೆಗಿದು ಗೊತ್ತಾಗುವಂತಿರಲಿಲ್ಲ. ಯಾಕೆಂದರೆ ಹಾಡುವಾಗ ಕಣ್ಣು ಮುಚ್ಚಿ ಚೆನ್ನಾಗಿ ಹಾಡುತ್ತಿದ್ದೇನೆಂಬ ಭ್ರಮೆಯಲ್ಲೇ ಹಾಡಿದ್ದರು. ಅದೇನಾದರೂ ಇದ್ದಿರಲಿ ಹುಡುಗರಿಗೆ ಮಾತ್ರ ಇದರಿಂದಷ್ಟು ಮನರಂಜನೆ ಸಿಕ್ಕಿತೆಂದರೆ ಮುಂದೆ ಟಿ.ಬಿ. ಬರುವವರೆಗೂ ಈ ಬಗ್ಗೆ ಕದ್ದು ಮಾತಾಡಿ ಅಣಗಿಸಿ ನಕ್ಕರು.

ಟಿ.ಬಿ.ಗೆ ಮುಟ್ಟಿದಾಗ ಮಧ್ಯಾಹ್ನ ಹನ್ನೆರಡು ಗಂಟೆ. ಬಸ್ಸಿನ ಧೂಳು, ಬಿಸಿಲಿನ ಸೆಕೆಯಿಂದಾಗಿ ವಿದ್ಯಾರ್ಥಿಗಳಿಗೆ ಆಯಾಸವಾಗಿತ್ತು. ಅವರ ಮುಖಗಳ ಮೇಲೆ ಕಳೆ ಬಂದದ್ದು ತುಂಬಿ ಹರಿಯುವ ನದಿಯನ್ನು ನೋಡಿದಾಗಲೇ. ಹುಡಗರಂತೂ ಜೀಕೆ ಮಾಸ್ತರರು ಮರೆಯಾಗುವುದನ್ನೇ ಕಾಯುತ್ತಿದ್ದರು. ಅವರೊಮ್ಮೆ ಬಾತ್‌ರೂಮಿಗೆ ಹೋದರೋ, ಅವರನ್ನಲ್ಲೇ ಬಿಟ್ಟು ಎಂಟಿಯ ತಾಕೀತನ್ನು ತಿರಸ್ಕರಿಸಿ ನದಿಗೆ ಓಡಿಬಿಟ್ಟರು. ಜೀಕೆ ಹೊರಗೆ ಬಂದು ನೋಡಿದರೆ ಎಂಟಿ ಒಬ್ಬನೇ ಮಿಕ ಮಿಕ ಕೂತಿದ್ದ. 'ಹುಡುಗರೆಲ್ಲಿ?' ಎಂದರು. 'ಹೊಳೀಗಿ ಹೋಗ್ಯಾರ್ರಿ ಸರ' ಎಂದು 'ರೋಜಾನೂ ಅವರ ಜೋಡಿ ಹೋಗ್ಯಾಳ್ರಿ' ಎಂದು ಹೇಳಿದ. 'ಎಬಡಾ, ನೀ ಯಾಕ ಇಲ್ಲಿ ಕುಂತಿ? ನೀರ ಭಾಳ ಆಳೈತಿ, ಹುಡುಗರೇನಾದರೂ ಈಜಿಗೀಜಾಕ ಹೋದಾರು ನಡಿನಡಿ' ಎಂದು ತಾವೂ ಜೊತೆಗೇ ಬಂದರು.

ಬಂದು ನೋಡಿದರೆ ಹುಡುಗಾಗಲೇ ನೀರಿಗಿಳಿದು ಹಾ ಹೋ ಕೇಕೆ ಹಾಕುತ್ತ ಈಜಾಡುತ್ತಿದ್ದರು. ಸದ್ಯ ಹುಡುಗಿಯರು ಈಜಾಡುತ್ತಿರಲಿಲ್ಲ. ಕಾಲುಗಳನ್ನು ನೀರಿಗಿಳಿಬಿಟ್ಟು ದಂಡೆಯ ಕಲ್ಲುಗಳ ಮೇಲೆ ಕೂತಿದ್ದರು. ಜೀಕೆ ಬಂದದ್ದನ್ನು ಹುಡುಗರು ನೋಡಿದರಾದರೂ ಯಾರೂ ಹೊಳೆ ಬಿಟ್ಟು ಹೊರಬರಲಿಲ್ಲ. ತಮ್ಮ ಪಾಡಿಗೆ ತಾವು ಬಗೆಬಗೆಯಾಗಿ ಈಜುತ್ತ ನೀರು ಗೊಜ್ಜಾಡುತ್ತ ಜಲಕ್ರೀಡೆಯಲ್ಲಿ ತೊಡಗಿದ್ದರು. ಹುಡುಗಿಯರಂತೂ ಜೀಕೆ ಮಾಸ್ತರರನ್ನು ಗಮನಿಸಲೇ ಇಲ್ಲ. ಗಿರೆಪ್ಪ ಎಲ್ಲ ಹುಡುಗರಿಗಿಂತ ದೂರದಲ್ಲಿದ್ದ. ಅಷ್ಟು ದೂರ ಹೋಗಲು ಇವರ್‍ಯಾರಿಗೂ ಧೈರ್ಯವಾಗಿರಲಿಲ್ಲ. ಆತ ಥರಾವರಿ ನೀರಾಟಗಳನ್ನು ತೋರಿಸುತ್ತಿದ್ದರಿಂದ ಹುಡುಗಿಯರು, ರೋಜಾ ಕೂಡ ಅವನನ್ನೇ ಮೆಚ್ಚುಗೆಯಿಂದ, ಹೊಳೆಯುವ ಕಣ್ಣುಗಳಿಂದ ನೋಡುತ್ತಿದ್ದಳು. ಆತ ಲೀಲಾಜಾಲವಾಗಿ ಈಜುತ್ತಿದ್ದ. ಇಲ್ಲಿ ಮುಳುಗಿ ಅಲ್ಲಿ ಏಳುತ್ತಿದ್ದ. ಆತ ಮುಳುಗಿದೊಡನೆ ಹುಡುಗಿಯರು 'ಅಕಾ ಅಲ್ಲಿ ಏಳತಾನ, ಇಕಾ ಇಲ್ಲಿ ಏಳತಾನ' ಎಂದು ಅಂದಾಜು ಕಟ್ಟುತ್ತಿದ್ದರೆ ಆತ ಇನ್ನೆಲ್ಲೋ ಎದ್ದು ಇವರನ್ನು ಬೆರಗುಗೊಳಿಸುತ್ತಿದ್ದ. ಅವ ಎದ್ದೊಡನೆ ಹುಡುಗಿಯರು ತಮ್ಮ ಅಂದಾಜು ಸರಿ ಅಥವಾ ತಪ್ಪಾದುದಕ್ಕೆ ಚಪ್ಪಾಳೆ ತಟ್ಟಿ ನಗುತ್ತಿದ್ದರು. ಕೆಲವರು ಆವ ಎಷ್ಟು ಹೊತ್ತು ಮುಳುಗುತ್ತಾನೆಂದು ಗಡಿಯಾರ ನೋಡಿ ಬೆಟ್‌ಕಟ್ಟುತ್ತಿದ್ದರು. ಹುಡುಗಿಯರು ಅಂದರೆ ರೋಜಾಳ ಲಕ್ಷ್ಯವನ್ನು ತನ್ನೆಡೆಗೆ ಸೆಳೆಯುವುದು ಹೇಗೆಂದು ಜೀಕೆಗೆ ಹೊಳೆಯದಾಯಿತು. ಕೂಗಿ 'ಏ ಗಿರೆಪ್ಪ, ಇನ್ನ ಸಾಕು, ಹೊರಗೆ ಬಾ' ಎಂದರು. ಅವನ ಕಿವಿಗೆ ಈ ಮಾತು ತಲುಪಲೇ ಇಲ್ಲ. ತನ್ನ ಪಾಡಿಗೆ ತಾನು ಈಜುತ್ತಿದ್ದ, ಮುಳುಗುತ್ತಿದ್ದ, ಏಳುತ್ತಿದ್ದ, ಪ್ರತಿಧ್ವನಿಯಾಗುವ ಹಾಗೆ ಝುಮ್ಮಿ ಹೊಡೆಯುತ್ತಿದ್ದ.

ಛೇ, ಇವರೆಂದೂ ಈಜೋದನ್ನು ಕಂಡಿಲ್ಲವೇ? ಈ ಪರಿ ಈಜು ನಾನರಿಯದ್ದೇ? ಗಿರ್‍ಯಾನ ಅಜ್ಜನ ಹಾಗೆ ನಾನು ಈಜಬಲ್ಲೆ ಎಂದು ಅಂದುಕೊಂಡು ಶರ್ಟು ಕಳಚಿ ಧೋತರ ಕಚ್ಚೆ ಎತ್ತಿ ಕಟ್ಟಿಕೊಂಡು ಜೀಕೆ ನೀರಿಗಿಳಿದೇ ಬಿಟ್ಟರು. ಹುಡುಗ ಹುಡುಗಿಯರೆಲ್ಲ ತಬ್ಬಿಬ್ಬಾದರು. ಹುಡುಗಿಯರು ಬೆರಗಿನಿಂದ ಎದ್ದು ನಿಂತರೆ ಇಷ್ಟರಲ್ಲೇ ಈಜುತ್ತಿದ್ದ ಹುಡುಗರು ದಂಡೆಗೆ ಬಂದು ಜೀಕೆ ಮಾಸ್ತರರನ್ನೆ ಹೊಮ್ಮಿಕಿನಿಂದ ನೋಡುತ್ತ ನಿಂತರು. ಗಿರೆಪ್ಪ ಗಮನಿಸಿದನಾದರೂ ಈ ಕಡೆ ಬರಲಿಲ್ಲ.

ಜೀಕೆ ಮಾಸ್ತರರಿಗೆ ಈಜು ಗೊತ್ತಿದ್ದದ್ದೇ. ವಯಸ್ಸಿನಲ್ಲಿ ಈಜಾಡಿದ್ದರು ಕೂಡ, ಗಿರೆಪ್ಪ ಎಲ್ಲಿ ಈಜುತ್ತಿದ್ದನೋ ಅಲ್ಲಿಗೇ ಬೀಸು ಕೈಚಾಚಿ ಈಜುತ್ತಾ ಹೊರಟರು. ಅವನು ಮಾಡುವ ಆಟಗಳಿಗಿಂತ ಭಿನ್ನವಾದ ಮತ್ತು ಇನ್ನೂ ವಿಚಿತ್ರವಾದ ಅನೇಕ ಆಟಗಳು ಅವರಿಗೆ ಗೊತ್ತಿದ್ದವು. ಅವನ್ನೆಲ್ಲ ಈ ಮುಗ್ಧೆಯರಿಗೆ, ರೋಜಾಳಿಗೆ ತೋರಿಸಿ ಬೆರಗಿನಿಂದ ಅವರ ಕಣ್ಣು ಫಳಫಳ ಹೊಳೆಯುವ ಹಾಗೆ ಮಾಡುವೆನೆಂದುಕೊಂಡರು. ಇವರು ಬರುತ್ತಿರುವುದನ್ನು ನೋಡಿ ಗಿರೆಪ್ಪ ಇನ್ನಷ್ಟು ದೂರ ಹೋದ. ಇವರೇನು ಕಮ್ಮಿ? ವೇಗವನ್ನು ಇನ್ನೂ ಜಾಸ್ತಿ ಮಾಡಿದರು. ಕೈಗಳನ್ನು ಒಂದಾದ ಮೇಲೊಂದರಂತೆ ರೆಕ್ಕೆಯ ಹಾಗೆ ಬೀಸಿ ನೀರಿಗೆಸೆಯುತ್ತಾ ಈಜಿದರು. ಗಿರೆಪ್ಪ ತಾನೂ ಜೋರಿನಿಂದೀಸಿದ. ಇಬ್ಬರೂ ಸ್ಪರ್ಧೆಗಿಳಿದರೆಂದು ದಂಡೆಯಲ್ಲಿ ನಿಂತಿದ್ದವರಿಗೆ ಗೊತ್ತಾಯಿತು. ಮತ್ತು ಯಾರು ಗೆಲ್ಲುತ್ತಾರೆ ನೋಡೋಣವೆಂದು ಅವರ ಆಸಕ್ತಿ ಕೆರಳಿತು. ಗಿರೆಪ್ಪ ಸಿಗಲೊಲ್ಲ, ಇವರು ಬಿಡಲೊಲ್ಲರು. ಇನ್ನೇನು ಸಿಕ್ಕನೆಂದಾಗ ಇನ್ನೊಂದು ಮಾರು ದೂರದಲ್ಲಿರುತ್ತಿದ್ದ. ದಂಡೆಯಲ್ಲಿ ಹುಡುಗಿಯರು ಕೇಕೆ ಹಾಕತೊಡಗಿದರು. ರೋಜಾ 'ಬಕಪ್ ಸರ ಬಕಪ್ ಸರ!' ಎಂದು ಕೂಗಿ ಹುರುಪು ಕೊಟ್ಟಳು. ತಾನು ಗಿರೆಪ್ಪನನ್ನು ಸೋಲಿಸುವುದು ರೋಜಾಳಿಗೆ ಇಷ್ಟ, ತಾನು ಇಷ್ಟರಲ್ಲೇ ತೋರಿಸುತ್ತೇನೆ ಎಂದು ಅಂದುಕೊಂಡರು. ಆದರೆ ಗಿರೆಪ್ಪನಿಗೂ ಇವರಿಗೂ ಮೊದಲಿದ್ದ ಅಂತರವೇ ಮುಂದುವರಿಯಿತು. ಸ್ವಲ್ಪದರಲ್ಲೇ ಹೆಚ್ಚು ಆಯಿತು. ಆತ ಮೊಸಳೆಯ ಹಾಗೆ ಮುಖ ಮೇಲೆ ಮಾಡಿ ಕೈ ಬೀಸಿದಾಗೊಂದು ಮಾರು ಮುಂದೆ ಹೋಗುತ್ತಿದ್ದ. ಮತ್ತು ಎಷ್ಟು ಸಹಜವಾಗಿ ಈಜುತ್ತಿದ್ದನೆಂದರೆ ನೋಡಿದವರಿಗೆ ಅವನು ನೀರಿನಲ್ಲೇ ಹುಟ್ಟಿದವನೆಂಬ ಭಾವನೆ ಬರುತ್ತಿತ್ತು. ಜೀಕೆ ಮಾಸ್ತರ ಪ್ರಯತ್ನಪೂರ್ವಕವಾಗಿ ಈಜುತ್ತಿರುವಂತೆ, ಒಮ್ಮೊಮ್ಮೆ ಅನಗತ್ಯವಾಗಿ ಒದ್ದಾಡಿದಂತೆ ಕಾಣಿಸುತ್ತಿತ್ತು. ಆದರೂ ಹುಡುಗ ಹುಡುಗಿಯರು ಕೇಕೆ ಹಾಕಿ ಹುರುಪು ಕೊಡುತ್ತಿದ್ದರು. ಒಬ್ಬರೂ ಗಿರೆಪ್ಪನನ್ನು ಪ್ರೋತ್ಸಾಹಿಸುವ ಮಾತು ಕೂಗಲಿಲ್ಲ. ಗಿರೆಪ್ಪನನ್ನು ಹಿಂದೆ ಹಾಕುವದಿರಲಿ ಅವನ ತನಕ ಹೋಗುವುದೂ ತನಗೆ ಸಾಧ್ಯವಾಗದು ಎನಿಸಿತು. ಇದ್ದಕ್ಕಿದ್ದಂತೆ ಕೈಕಾಲು ಸೋಲುತ್ತಿರುವ ಅನುಭವವಾಯಿತು. ತಿರುಗಿ ನೋಡಿದರೆ ದಂಡೆ ಬಿಟ್ಟು ಬಹುದೂರ ಬಂದಿದ್ದರು. ತಿರುಗಿ ಇಷ್ಟು ದೂರ ಈಜುವುದು ಸಾಧ್ಯವೇ ಎಂದುಕೊಂಡರು. ಹುಡುಗಿಯರು ಕೈಬೀಸಿ ಕೂಗುತ್ತಿದ್ದರು. ತಿರುಗಿ ನೋಡಿದರೆ ಗಿರೆಪ್ಪ ಬಹಳ ದೂರ ಹೋಗಿದ್ದ. ಇನ್ನು ಸಾಧ್ಯವಿಲ್ಲ ಎನ್ನಿಸಿತು. 'ಅವನವ್ವನ' ಎಂದು ಮನಸ್ಸಿನಲ್ಲೇ ಬೈದರು. ಕೈಕಾಲಲ್ಲಿ ಶಕ್ತಿ ಉಳಿದಿರಲೇ ಇಲ್ಲ. ಯಾಕಾದರೂ ನೀರಿಗಿಳಿದೆನೋ ಎನ್ನಿಸಿತು. ಸೋಲುವುದಿರಲಿ, ಜೀವ ಉಳಿದರೆ ಸಾಕೆನ್ನಿಸಿತು. ದಂಡೆ ಕಡೆ ತಿರುಗಿದರು.

ಕೈಕಾಲಿನಾಟ ನಿಂತಿತು. ಮೆಲ್ಲಗೆ ಕೈಬೀಸುವುದೂ ಸಾಧ್ಯವಾಗದಾಯಿತು. ಸಮ ಉಸಿರಾಟ ಸಾಗದಾಯಿತು. ನೀರು ಕುಡಿದರು. ಇವರು ಹಿಂದಿರುಗಿದ್ದನ್ನು ನೋಡಿ ಗಿರೆಪ್ಪ ತಾನೂ ವಾಪಸ್ಸು ಬಂದ. ಬರುವಾಗಲೂ ಇವರನ್ನು ಹಿಂದೆ ಹಾಕಿದ. ಜೀಕೆ ಭಾರೀ ಪರಿಶ್ರಮ ಪಡುತ್ತಿದ್ದಾರೆಂದೂ, ಕೈಸಾಗದೆ ನೀರು ಕುಡಿಯುತ್ತಿದ್ದಾರೆಂದೂ ದಂಡೆಯಲ್ಲಿದ್ದ ಹುಡುಗರಿಗೆ ಗೊತ್ತಾಯಿತು. ಒಬ್ಬಿಬ್ಬರಾಗಲೆ ಸಮೀಪ ಬಂದಿದ್ದ ಗಿರೆಪ್ಪನಿಗೆ 'ಗಿರೆಪ್ಪಾ' ಎಂದು ಕೂಗಿ ತಮ್ಮ ಆತಂಕ ಭಯಗಳನ್ನು ಸೂಚಿಸಿದರು. ಗಿರೆಪ್ಪ ತಿರುಗಿ ನೋಡಿದರೆ ಜೀಕೆ 'ಅಯ್ಯೋ' ಎಂದು ಅರೆಬರೆ ಕೂಗಿ ಒಂದೆರಡು ಬಾರಿ ಹತಾಶರಾಗಿ ಕೈಬಡಿದು ಮುಳುಗಿಬಿಟ್ಟರು. ದಂಡೆಯಲ್ಲಿದ್ದವರು ಹೋ ಎಂದು ಕಿರುಚಾಡತೊಡಗಿದರು. ಗಿರೆಪ್ಪ ತಡಮಾಡದೆ ಸರ್ರನೆ ಅವರು ಮುಳುಗಿದ್ದಲ್ಲಿಗೇ ನುಗ್ಗಿ ತಾನೂ ಮುಳುಗಿದ. ನಿಸ್ಸಹಾಯಕರಾಗಿ ತಬ್ಬಬಂದ ಜೀಕೆಯನ್ನು ದೂಕಿ ಅವರ ಜುಟ್ಟು ಹಿಡಿದು ರಭಸದಿಂದ ಈಜುತ್ತ ದಂಡೆಗೆ ಬಂದ. ಹೆಣದ ಹಾಗೆ ಜೀಕೆ ತೇಲುತ್ತ ಬಂದಾಗ ಹುಡಗಿಯರು ಕಿರುಚಿಕೊಂಡರು. ಗಿರೆಪ್ಪ ಹುಡುಗರ ಸಹಾಯದಿಂದ ಅವರನ್ನು ಹೊತ್ತು ನೀರ ಹೊರಗೆ ತಂದು ಮಲಗಿಸಿ ಹೊಟ್ಟೆಯ ಮೇಲೆ ಭಾರಹಾಕಿ ಕುಡಿದ ನೀರು ಹೊರತೆಗೆದ. ಸದ್ಯ ಜೀವವಿತ್ತು. ಗಾಳಿ ಬೀಸಿದರು. ತುಸು ಹೊತ್ತಾಗ ಬಳಿಕ ಟಿ.ಬಿ.ಗೆ ತಂದು ಹಾಸಿಗೆಯ ಮೇಲೆ ಒರಗಿಸಿ ಕಾಫೀ ಕೊಟ್ಟರು. ಜೀಕೆ ಮುಖ ಅಸಹಾಯತೆ ಮತ್ತು ಅವಮಾನಗಳಿಂದ ಚಿಕ್ಕದಾಗಿತ್ತು ಮತ್ತು ಕರ್‍ರಗಾಗಿತ್ತು.

ಅವರು ಕಣ್ಣು ತೆರೆದಾಗ ತಮ್ಮ ಹಾಸಿಗೆಯ ಬಳಿ ರೋಜಾ ಅಳುತ್ತ ಕೂತಿರುತ್ತಾಳೆ ಎಂದುಕೊಂಡಿದ್ದರು. ಬದಲು ಎಂಟಿ ಕೂತಿದ್ದ. ನಿರಾಶೆಯಿಂದ ಅವನನ್ನು ಸಮೀಪ ಕರೆದು ಅವಳೆಲ್ಲಿ ಎಂಬಂತೆ ಸನ್ನೆ ಮಾಡಿದರು.

'ಎಲ್ಲರೂ ಹೊರಗ ಕುಂತಾರ್‍ರಿ ಸರ, ಯಾರೂ ಊಟ ಮಾಡಿಲ್ಲ' ಎಂದ.

‘ಆಕಿ ಎಲ್ಲಿ? ಗಿರ್ಯಾನ ಜೋಡಿ ಕುಂತಾಳೇನು?’

‘ಇಲ್ಲರಿ, ಹುಡುಗೀರು ಬ್ಯಾರೆ ಹುಡುಗರು ಬ್ಯಾರೆ ಕುಂತಾರ್ರಿ.’

ತುಸು ಸಮಾಧಾನವಾಯಿತು. ಊಟ ಮಾಡಿ ಅದೇ ದಿನ ವಾಪಸ್ ಬಂದರು.

೧೧

ಇದಾಯಿತಲ್ಲ, ಗಿರೆಪ್ಪನ ಬಗ್ಗೆ ಜೀಕೆ ಕೃತಜ್ಞರಾಗಿರುವುದು ಬೇಡ ಅವನ ಬಗೆಗಿನ ಅಸೂಯೆಯನ್ನಾದರೂ ಕಡಿಮೆ ಮಾಡಿಕೊಂಡಾರೆಂಬ ಊಹೆ ಹುಸಿಯಾಯಿತು. ಅವನ ಹೆಸರು ಕಿವಿಗೆ ಬಿದ್ದರೇ ಉರಿದು ಬೀಳುತ್ತಿದ್ದರು. ಆತ ಯಾವುದಾದರೂ ತಪ್ಪಿನಲ್ಲಿ ಸಿಕ್ಕು ಬಿದ್ದರೆ ನಿಂತ ಕಾಲ ಮೇಲೆ ಡಿಸ್‌ಮಿಸ್ ಮಾಡಲು ಸಿದ್ಧರಿದ್ದರು. ರೋಜಾ ಅವನ ಜೊತೆ ಮಾತಾಡಿದಳೆಂದು ಎಂಟಿ ವರದಿ ಮಾಡಿದರೆ ಇಡೀ ರಾತ್ರಿ ನಿದ್ದೆಯಿಲ್ಲದೆ ಒದ್ದಾಡುತ್ತಿದ್ದರು. ಒಮ್ಮೆಯಂತೂ ಅವಳು ಬಂದಾಗ ನಿನ್ನನ್ನು ಆತನ ಜೊತೆ ಕಂಡರೆ ಅದೇ ದಿನ ತಾನು ಆತ್ಮಹತ್ಯೆ ಮಾಡಿಕೊಂಡು ಸಾಯುವುದಾಗಿ ಭಾವುಕರಾಗಿ ಅಳು ಧ್ವನಿಯಲ್ಲಿ ಹೇಳಿಬಿಟ್ಟರು. ಮೊದಮೊದಲು ರೋಜಾಳ ಪ್ರೇಮದ ವಿಷದಿಂದ ನೋಯುತ್ತಿದ್ದವರು ಈಗ ಗಿರೆಪ್ಪನ ಅಸೂಯೆಯ ವಿಷದಿಂದಲೂ ನರಳುವಂತಾದರು.

ಈ ಮಧ್ಯೆ ಪರೀಕ್ಷೆಗಳು ಮುಗಿದವು. ಈಗಂತೂ ಇದ್ದದ್ದೂ ಗಂಭೀರವಾದರು. ಇದು ರೋಜಾಳ ಅಂತಿಮ ವರ್ಷ, ಪರೀಕ್ಷೆ ಮುಗಿದ ಮೇಲೆ ಮಧ್ಯ ಒಮ್ಮೆ ಬರುವುದಾಗಿ ಹೇಳಿ ಹಳ್ಳಿಗೆ ಹೋದಳು. ಈ ಸಲ ಅವಳು ಬಂದಾಗ ತಮ್ಮ ಮುಂದಿನ ಬದುಕಿನ ಬಗ್ಗೆ ಮಾತಾಡಿ ಒಂದು ತೀರ್ಮಾನಕ್ಕೆ ಬರಲೇಬೇಕಾಗಿತ್ತು. ಅವಳು ಬಹುಶಃ ಇನ್ನು ಮೇಲೆ ಬರಲಾರಳೆಂದು ಒಮ್ಮೊಮ್ಮೆ ಸಂಶಯಪಟ್ಟರು. ಆದರೆ ಅವಳನ್ನು ಹಿಡಿದು ಸೆಳೆಯುವ ಮಂತ್ರವೊಂದಿತ್ತು. ಬಿ.ಎ. ಪರೀಕ್ಷೆಯ ಸಂಸ್ಕೃತದ ಉತ್ತರ ಪತ್ರಿಕೆ ತನಗೇ ಬರಲಿವೆಯೆಂದು ಹೇಳಿದ್ದರಿಂದ ಬಂದರೂ ಬಂದಾಳೆಂಬ ಆಸೆಯಿತ್ತು.

ಉತ್ತರ ಪತ್ರಿಕೆಗಳು ಬಂದವು. ಹೇಳಿ ಕಳಿಸಿದ ಹಾಗೆ ರೋಜಾ ಬಂದಳು. ಕಾಲೇಜಿನಲ್ಲೇ ಪ್ರೇಮಿಗಳ ಭೇಟಿ ಆಯಿತು. ಉತ್ತರ ಪತ್ರಿಕೆ ಮನೆಯಲ್ಲಿದೆಯೆಂದೂ ಸಂಜೆ ಏಳು ಗಂಟೆ ಮನೆಗೆ ಬಾ ಎಂದೂ ಹೇಳಿದರು. ಇವರ ಕಣ್ಣಿನೊಳಗಿದ್ದ ಚಂಚಲವಾದ ಹನಿಮೂನು ರೋಜಾಳಿಗೂ ಅರ್ಥವಾಯಿತು. ಬರಹೇಳಿದ್ದೇನೋ ಆಯಿತಲ್ಲ. ಉಪಾಯ ಸರಿಹೋಯಿತೇ ಎಂದು ಯೋಚನೆ ಮಾಡಿದರು. ಸುತ್ತ ಮನೆಗಳಿಲ್ಲದ್ದರಿಂದ, ಅವಳು, ಬರುವುದು ಕತ್ತಲಾದ್ದರಿಂದ ಅಪಾಯವಿಲ್ಲ ಎಂದೆನಿಸಿತು. ಗಿರಿಜಾ ಹಾಸಿಗೆ ಬಿಟ್ಟು ಏಳುವುದಿಲ್ಲ. ಸ್ಟಡಿ ರೂಮಿನಲ್ಲಿ ಏನು ನಡೆದರೂ ಅವಳಿಗೆ ಆಸಕ್ತಿ ಇರುವುದಿಲ್ಲ. ರೋಜಾ ಜೊತೆಬೇಕಾದಷ್ಟು ಮಾತಾಡಬಹುದಿತ್ತು. ಮತ್ತು ಏನೇನೋ ಮಾಡಬಹುದು. ಈ ತನಕ ತಮ್ಮ ಸಂಬಂಧ ಬರೀ ಪತ್ರ ವ್ಯವಹಾರದಲ್ಲಿತ್ತೇ ಹೊರತು ಅದಕ್ಕಿಂತ ಆಳಕ್ಕೆ ಹೋಗಿರಲಿಲ್ಲ. ಈಗ ಅದಕ್ಕೊಂದು ನಿಶ್ಚಿತ ರೂಪ ಕೊಡಬೇಕೆಂದು ಅಂದುಕೊಂಡರು.

ಸಂಜೆ ಆರೂವರೆಗೇ ಕತ್ತಲಾಗಿತ್ತು. ಏಳು ಗಂಟೆಗೆ ಜೀಕೆ ವರಾಂಡ ಮತ್ತು ಮನೆಮುಂದಿನ ಲೈಟ್ ಆರಿಸಿ, ಹೆಂಡತಿಗೆ ಗಂಜಿ ಕುಡಿಸಿ ಮಲಗಿಸಿ ಗೇಟಿನಲ್ಲಿ ಕಾಯುತ್ತ ನಿಂತರು. ಬಹಳ ಹೊತ್ತಿನ ತರುವಾಯ ರೋಜಾ ಬಂದಳು. ಗೆಲುವಾಗಿದ್ದಳು. ಬಂದವಳು ಮಂದಹಾಸ ಬೀರಿ ‘ಸ್ಸಾರಿ ಸರ, ಬಹಳ ಹೊತ್ತ ಕಾದಿರೇನ?’ ಎಂದಳು. ಅವಳ ಕೈಹಿಡಿದು ಕಿವಿಯಲ್ಲಿ ‘ಮೆಲ್ಲಗೆ ಮಾತಾಡು’ ಎಂದು ತುಂಟತನದಿಂದ ಹೇಳಿ ಒಳಗೆ ಕರೆದೊಯ್ದರು. ಮುಂದಿನ ಬಾಗಿಲಿಕ್ಕಿ ಮೆಲ್ಲಗೆ ಸ್ಟಡಿ ರೂಮಿಗೆ ಹೋದರು. ಸಂಭ್ರಮದಿಂದ ಅವಳ ಎರಡೂ ಕೈಹಿಡಿದು ತಾವು ಕೂರುತ್ತಿದ್ದ ಟೇಬಲ್ ಬಳಿಯ ಕುರ್ಚಿಯಲ್ಲಿ ಕೂರಿಸಿ, ಎದುರಿನ ಕುರ್ಚಿಯಲ್ಲಿ ತಾವು ಕೂತರು. ಆನಂದದಿಂದ ಕಣ್ಣೀರು ಬಂತು. ‘ಇನ್ನಿವಳು ತನ್ನವಳೇ, ತನ್ನವಳು ಮಾತ್ರ’ ಎಂದುಕೊಂಡು ನಡುಗುವ ಕೈಗಳಿಂದ ಅವಳ ಎರಡೂ

ಕೈಗಳನ್ನು ಹಿಡಿದು ಹಿಸುಕಿ ಬಾಗಿ ಮುದ್ದಿಟ್ಟರು. ತದೇಕ ದೃಷ್ಟಿಯಿಂದ ಅವಳನ್ನೇ ನೋಡುತ್ತ ತಮ್ಮ ಹೃದಯದಲ್ಲಿ ಗುಟ್ಟಾದದ್ದು ಏನಿದೆಯೋ, ತುಂಬ ಆತ್ಮೀಯವಾದದ್ದು ಏನಿದೆಯೋ ಅದನ್ನೆಲ್ಲ ಅವಳ ವಶಕ್ಕೆ ಅರ್ಪಿಸಿದವರಂತೆ ಧನ್ಯಭಾವನೆಯಲ್ಲಿ ಕುಳಿತರು.

ರೋಜಾ ಇದನ್ನೆಲ್ಲ ಸಂತೋಷಿಸುತ್ತಿದ್ದಳು. ಜೀಕೆ ಮಾಸ್ತರರಲ್ಲಿ ಈ ಪರಿ ವೈವಿಧ್ಯಯದ ಭಾವನೆಗಳನ್ನು ಸೃಷ್ಟಿಸಿದ ತನ್ನ ರೂಪರಾಶಿಯ ಬಗೆಗೆ ಒಳಗೊಳಗೇ ಹೆಮ್ಮೆಪಟ್ಟಳು. ಅವರು ಹಾಗೆ ನೋಡುತ್ತಿದ್ದರೆ ನಾಚಿ ದೃಷ್ಟಿ ತಪ್ಪಿಸುವ ರೂಮ್ ನೋಡಿದಳು. ಟೇಬಲ್ ನೋಡಿದಳು. ನೋಡಿ, 'ಸರ ಪೇಪರ್ ಎಲ್ಲಿ ಅದಾವ್ರಿ?' ಎಂದಳು. ಆಕೆ ಕೇಳುವುದು ಹೆಚ್ಚೊ ಇವರು ಕೊಡುವುದು ಹೆಚ್ಚೊ? ಅವಳು ಮನೆಗೆ ಬಂದದ್ದೇ ಹೆಚ್ಚಾಗಿ ಇವಳನ್ನು ಹ್ಯಾಗೆ ಸಂತೋಷಪಡಿಸಬೇಕೆಂದು ತಿಳಿಯದೆ ಚಡಪಡಿಸುತ್ತಿದ್ದರು. ಈಗ ಬಾಯಿ ಬಿಟ್ಟು ಕೇಳಿದರೆ ಹ್ಯಾಗಾಗಬೇಡ? ಅವಳು ಪ್ರಾಣ ಕೇಳಿದ್ದರೂ ಈಗ ಕೊಡುತ್ತಿದ್ದರು. ಉತ್ಸಾಹದಿಂದೆದ್ದು ಬೀರುವಿನಲ್ಲಿದ್ದ ಪೇಪರ್ ಬಂಡಲನ್ನು ತಂದು ಭಕ್ತಿಯಿಂದ ಅವಳ ಮುಂದಿಟ್ಟರು. ಮತ್ತೆ ಅವಳ ಮುಖವನ್ನೇ ನೋಡುತ್ತ 'ನಿನ್ನ ಪೇಪರ ತಗಿ' ಎಂದರು. ಆಕೆ ತನ್ನ ಪೇಪರ್ ತೆಗೆದು ಅವರ ಮುಂದಿಟ್ಟು ಮಾದಕವಾದ ಮಂದಹಾಸ ಬೀರಿದಳು. ಜೀಕೆ ಪರವಶರಾದರು. ಅವಳನ್ನೇ ನೋಡುತ್ತ 'ಎಷ್ಟು ಬೇಕೋ ಅಷ್ಟು ಮಾರ್ಕ್ಸ್ ನೀನೇ ಹಾಕಿಕೋ' ಎಂದರು. ಇಷ್ಟು ಸವಲತ್ತು ಸಿಕ್ಕದ್ದೇ ಆಕೆ ತಾನಿದರ ಪ್ರಯೋಜನ ತನಗಾಗಿ ತಕ್ಕೊಳ್ಳುತ್ತಿಲ್ಲ, ಕೇವಲ ನಿಮ್ಮ ಖುಷಿಗಾಗಿ ಮಾಡುತ್ತಿದ್ದೇನೆಂಬಂತೆ ಗಂಭೀರವಾಗಿ ಪ್ರತಿ ಪ್ರಶ್ನೆಗೆ ತನಗೆ ಬೇಕಾದಷ್ಟು ಮಾರ್ಕ್ಸ್ ಹಾಕಿಕೊಂಡು ಬೇರೀಜು ಮಾಡಿಟ್ಟು ಸಹಿಗಾಗಿ ಇವರ ಮುಂದೆ ಚಾಚಿದಳು. ಜೀಕೆ ತಪ್ಪಿಕೂಡ ಅವಳ ಮುಖದಿಂದ ದೃಷ್ಟಿ ತೆಗೆದಿರಲಿಲ್ಲ. ಹೇಳಿದಲ್ಲಿ ಸಹಿ ಹಾಕಿ ಮತ್ತೆ ಅವಳ ಮುಖವನ್ನೇ ಲವಲವಿಕೆಯಿಂದ ನೋಡುತ್ತಾ ಕೂತರು. ಅವಳು 'ತನ್ನ ಗೆಳತಿಯ ಪೇಪರೊಂದನ್ನು ನೋಡಲಾ?' ಎಂದು ಹೇಳಿ ಉತ್ತರಕ್ಕೂ ಕಾಯದೆ ಅದಕ್ಕೂ ಹಾಗೆ ಮಾರ್ಕ್ಸ್ ಹಾಕಿ ಸಹಿ ಮಾಡಿಸಿದರು.

'ತೃಪ್ತಿ ಆಯಿತಾ?' ಎಂದರು ಜೀಕೆ.

'ನೀವು ಸಮೀಪ ಇದ್ದರ ನನಗ ಯಾವಾಗಲೂ ತೃಪ್ತಿ' ಅಂದಳು.

ಜೀಕೆ ಆನಂದದಿಂದ ಎದ್ದು ಮುಂದೆ ಬಂದರು. ತಮ್ಮ ಎರಡೂ ಕೈಗಳನ್ನು ಅವಳ ಭುಜದ ಮೇಲಿಟ್ಟು,

'ಹೇಳು ರೋಜಾ, ಯಾವಾಗ ಮದುವೆ ಆಗೋಣ?' ಎಂದರು.

'ಸರಿ, ರಿಸಲ್ಟ ಇದ್ದ ದಿನಾ ನಾ ಹುಬ್ಬಳ್ಳಿಗೆ ಬರತೀನಿ, ನೀವೂ ಬರ್ರಿ. ಅಶೋಕ ಹೋಟಲದಾಗ ಇರ್ತೀನಿ. ಅಲ್ಲೇ ಮಾತಾಡೋಣ. ಬರೋಬರೀನಾ?' - ಎಂದು ಕತ್ತು ಕೊಂಕಿಸಿದಳು. ಅದೂ ಸರಿಯೆ, ಒಳಗೆ ಹೆಂಡತಿಯನ್ನಿಟ್ಟುಕೊಂಡು ಮದುವೆ ವಿಚಾರ ಮಾತಾಡೋದು ಅಷ್ಟು ಸರಿಯಾಗಲಿಕ್ಕಿಲ್ಲ. 'ಆಗಲಿ' ಎಂದರು. ತುಟಿಗೆ ಬೆರಳಿಟ್ಟುಕೊಂಡು ಮುದ್ದು ಕೊಡುವಂತೆ ಕಳ್ಳ ಸೂಚನೆ ಕೊಟ್ಟರು. ಅವಳು 'ಥೂ' ಎಂದು ನಾಚಿ ಮುಖ ಮುಚ್ಚಿಕೊಂಡಳು. ಈಗಲೂ ಅವಳು ಎಷ್ಟು ಸುಂದರಿಯಾಗಿ ಕಾಣುವಳಲ್ಲ ಎಂದು ಬೆರಗಾಗಿ ನೋಡುತ್ತ ನಿಂತರು. ಅವಳ ಮೈಯ ವಕ್ರತೆಗಳ ಮೇಲೆಲ್ಲ ಕಣ್ಣಾಡಿಸಿದರು. ಬೆನ್ನಿನ ಮೇಲೆ ಕೈಯಿಟ್ಟು ಕೈಯಾಡಿಸುತ್ತ ಕಂಕುಳಕ್ಕೂ ಅದರೊಳಗಿಂದ ಎದೆಗೂ ಬರುತ್ತಿರುವಾಗ ರೋಜಾ ಗೊಳ್ಳನೆ ನಕ್ಕು ಎದ್ದುಬಿಟ್ಟಳು. ತಕ್ಷಣ ಅಲ್ಲೇ ಟೇಬಲ್ ಮೇಲಿದ್ದ ಹಾವಿನ ಡಬ್ಬಿ ತಗೊಂಡು ಅದರೊಳಗಿನ ರಬ್ಬರ್ ಹಾವನ್ನು ಅವರ ಮೇಲೆ ಹಿಡಿದುಕೊಂಡು ಅವಳ ಮೇಲೆ ಎಸೆಯುವಷ್ಟರಲ್ಲಿ ಅವಳು ಹೊರಗೋಡಿ ಬಾಗಿಲು ತೆಗೆದು ಕತ್ತಲೆಯಲ್ಲಿ ಮರೆಯಾದಳು.

ಆ ಕ್ಷಣ ಜೀಕೆಗೆ ನಿರಾಶೆಯಾಯಿತಾದರೂ ಮನಸ್ಸಿನ ಹುರುಪು ಮಾಸಿರಲಿಲ್ಲ. ಒಳಗೆ ಹೋಗಿ ಗಿರಿಜಮ್ಮನ್ನು ನೋಡಿದರು. ಯಾಕೆಂದರೆ ಮದುವೆಯ ವಿಚಾರವನ್ನವರು ತಮ್ಮ ಸಹಜವಾದ ನಗಾರಿ ದನಿಯಲ್ಲೇ ಹೇಳಿದ್ದರಿಂದ ಅವಳೇನಾದರೂ ಕೇಳಿಕೊಂಡಳೇ ಎಂಬ ಅನುಮಾನವಿತ್ತು. ಆಕೆ ಮಲಗಿದ್ದಳು. ನೆಮ್ಮದಿಯ ನಿಟ್ಟುಸಿರುಬಿಟ್ಟು ಬಂದು ಕುರ್ಚಿಯಲ್ಲಿ ಕೂತರು. ಆ ಘಟನೆಯನ್ನು ಮತ್ತೆ ಮತ್ತೆ ನೆನಪು ಮಾಡಿಕೊಂಡರು. ಊಟ ಬೇಕಿರಲಿಲ್ಲ. ಲೈಟ್ ಆರಿಸಿ ಹಾಸಿಗೆಯಲ್ಲಿ ಬಿದ್ದುಕೊಂಡರು. ನಿದ್ದೆ ಬರಲೊಲ್ಲದು. ಎದ್ದು ಹಾಗೇ

ಕತ್ತಲಲ್ಲೇ ಆ ರಬ್ಬರ್ ಹಾವನ್ನು ಕೈಯಾಡಿಸಿ ಹುಡುಕಿ ತಂದರು. ರೋಜಾಳ ಚಿತ್ರವನ್ನು ಮೂಲೆಯಲ್ಲಿ ಕಲ್ಪಿಸಿ ಆ ಚಿತ್ರದ ಮೇಲೆ ಹಾವನ್ನು ನೆಗೆಸಿದರು. ಅವಳು ಗಾಬರಿಗೊಂಡದ್ದನ್ನ, ತಡವರಿಸಿ ಜಿಗಿದಾಡಿದ್ದನ್ನು ಚಿತ್ರಿಸಿಕೊಂಡು ನಕ್ಕರು. ಮತ್ತು ಚಿತ್ರದಲಿಲ್ನ ರೋಜಾಳ ಸೆರಗು ಜಾರಿಸಿ ಅವಳ ಎದೆಯನ್ನು ನೋಡಿದರು. ಅವರ ದೃಷ್ಟಿ ಅಲ್ಲಿರುವುದನ್ನು ಗಮನಿಸಿ ರೋಜಾ ಎದೆ ಮುಚ್ಚಿಕೊಂಡಳು. ಆಕೆ ಅಷ್ಟೊಂದು ಸುಂದರವಾಗಿ ಹೆದರಿದ್ದಕ್ಕೆ ಭಾರೀ ಖುಷಿಪಟ್ಟರು. ಮತ್ತು ಅವಳನ್ನು ಮತ್ತೆ ಮತ್ತೆ ಆ ಭಂಗಿಯಲ್ಲಿ ನೋಡಬೇಕೆನಿಸತು. ಮತ್ತೆ ಕತ್ತಲಲ್ಲಿ ತಡಕಾಡಿ ಹಾವನ್ನು ಹಿಡಿದು ತಂದರು. ಮತ್ತೆ ಮೂಲೆಯ ರೋಜಾಳ ಮೇಲೆಸೆದರು. ಅವಳು ಇನ್ನಷ್ಟು ಗಾಬರಿಯಾದಳು. ಇವರು ಇನ್ನಷ್ಟು ನಕ್ಕರು. ಮತ್ತೆ ಮತ್ತೆ ಅದನ್ನೇ ರಿಪೀಟ್ ಮಾಡಿ ಆಟ ಆಡತೊಡಗಿದರು. ಇವರೊಬ್ಬರೇ ಹೋ ಎಂದು ನಗುವುದು, ಕತ್ತಲಲ್ಲಿ ಈ ಪರಿ ತಡಕಾಡುವುದು, ರಬ್ಬರ್ ಹಾವೆಸೆಯುವುದು ಹ ಹ್ಹಾ ಎನ್ನುವುದು ಇದನ್ನೆಲ್ಲ ಬೇರೆ ಯಾರಾದರೂ, ಯಾರೋ ಏನು ಗಿರಿಜಮ್ಮ ನೋಡಿದ್ದರೂ ಇವರಿಗೆ ಹುಚ್ಚ ಹತ್ತಿತ್ತೆಂದು ಗಾಬರಿಯಾಗುತ್ತಿದ್ದಳು.

ಹೀಗೆ ಮಕ್ಕಳಂತೆ ಆಟ ಆಡಿ ದಣಿದು ಯಾವಾಗ ಮಲಗಿದ್ದರೋ ಮುಂಜಾನೆ ಎಚ್ಚೆತ್ತಾಗ ಆಗಲೇ ಸೂರ್ಯೋದಯವಾಗಿತ್ತು. ಹಾವು ಎದೆಯ ಮೇಲೆ ಹಾಗೆ ಇತ್ತು. ಆದರೆ ಎಸೆದಾಡಿದ್ದರಿಂದ ಅದರ ಕಣ್ಣುಗಳು ಕಳೆದು ಹೋಗಿದ್ದವು. ಹೆಡೆಯ ಕಲರ್ ಮಸುಕಾಗಿತ್ತು. ಮಡದಿಯ ನೆನಪಾಗಿ ಎದ್ದು ಬಂದರು. ಔಷಧಿ ತಗೊಂಡು ಗಿರಿಜಮ್ಮನ ಹತ್ತಿರ ಹೋದರೆ ಆಕೆ ಯಾವಾಗಲೋ ಶಿವನ ಪಾದ ಸೇರಿದ್ದಳು. ಅವಳ ಕೈಯಲ್ಲಿ ರೋಜಾ ಬರೆದ ಪ್ರೇಮಪತ್ರವಿತ್ತು. ನೋಡಿ ಎದೆ ಧಸ್ ಎಂದು ಕುಸಿದರು.

೧೨

ಎಷ್ಟೂ ತಪ್ಪದೆ ಅಂತ್ಯಕ್ರಿಯೆ, ಅದರ ನಂತರದ ಕ್ರಿಯೆಗಳನ್ನು ಮಾಡಿದರು. ಜೀಕೆ ಆಮೇಲೆ ಆಳಾಗಲೇ ಇಲ್ಲ. ಹೆಂಡಿಯ ಸಾವಿಗೆ ತಾನೇ ಕಾರಣನೆಂದು, ಅದು ಸಾವಲ್ಲ ಕೊಲೆ ಎಂದು ಬಹಳಷ್ಟು ಬಾರಿ ಚಿಂತೆ ಮಾಡಿದರು. ಆಳವಾದ ಶೂನ್ಯತೆ ಅವರನ್ನಾವರಿಸಿಬಿಟ್ಟಿತ್ತು. ರೋಜಾಳ ಮೋಹದಲ್ಲಿ ಹೆಂಡತಿಯ ಬಗೆಗಿನ ಕರ್ತವ್ಯಕ್ಕೆ ಎರವಾಗಿದ್ದರು. ಬದುಕಿದ್ದಾಗ ಗಿರಿಜಮ್ಮನ ಜೊತೆ ಇವರ ಸಂಬಂಧ ಅಷ್ಟೊಂದು ನಿಕಟವಾಗಿರಲಿಲ್ಲವೆನ್ನುವುದು ನಿಜ. ಇಬ್ಬರಿಗೂ ಮಕ್ಕಳಿಲ್ಲದ ಚಿಂತೆ ಇತ್ತು. ಇದ್ದೊಬ್ಬ ಮಗ ಸತ್ತಾಗಿನಿಂದ ಆಕೆ ಸದಾ ಒಂದಿಲ್ಲೊಂದು ರೋಗದಿಂದ ನರಳುತ್ತಿದ್ದಳು. ಆದ್ದರಿಂದಲೇ ಆಕೆಯ ಬಗ್ಗೆ ಇವರಿಗೆ ಅನುಕಂಪೆಯಿತ್ತು. ಅನೇಕ ಬಾರಿ ಮರುಮದುವೆಗೆ ಇವರನ್ನು ಆಕೆ ಒತ್ತಾಯಪಡಿಸಿದ್ದರೂ ಇವರೇ ಒಪ್ಪಿರಲಿಲ್ಲ. ಆದರಿದು ನಿಜ. ರೋಜಾಳ ಸನಿಹದಲ್ಲಿ ಸಿಕ್ಕ ತೀವ್ರ ಪ್ರೀತಿಯ ಅನುಭವ ಅವರಿಗೆ ಯಾವ ಹೆಣ್ಣಿನಿಂದಲೂ ಸಿಕ್ಕಿರಲಿಲ್ಲ. ಗಿರಿಜಮ್ಮ ತಮ್ಮ ಕರ್ತವ್ಯದ ಭಾಗವಾಗಿದ್ದಳೇ ಹೊರತು ರೋಜಾಳ ಹಾಗೆ ಹುಚ್ಚು ಹತ್ತಿಸಿರಲಿಲ್ಲ. ತಮ್ಮ ಕಟ್ಟುನಿಟ್ಟಿನ ವ್ಯಕ್ತಿತ್ವ ಆಳದಲ್ಲಿ ಇಷ್ಟು ತೀವ್ರವಾದ, ಉತ್ಕಟವಾದ ಪ್ರೀತಿ ಅಡಗಿದ್ದನ್ನ ಅದರ ಸಾಧ್ಯತೆಗಳನ್ನ ತೋರಿಸಿಕೊಟ್ಟವಳೇ ರೋಜಾ. ಮತ್ತು ಈ ಅನುಭವಕ್ಕೆ ತಾವೇ ಮೂಕವಿಸ್ಮಿತರಾಗಿದ್ದರು. ಆದರೂ ಪಾಪ ಪುಣ್ಯ ಎಂಬುದಿರುತ್ತದಲ್ಲ. ಗಿರಿಜಮ್ಮನಿಗೆ ಗೊತ್ತಿಲ್ಲದೆ ಅನುಮತಿಯನ್ನು ಆರಂಭದಲ್ಲೇ ಪಡೆದಿದ್ದರೆ ಚೆನ್ನಾಗಿತ್ತು. ಆದರವಳು ಆ ಸಂದರ್ಭದಲ್ಲಿ ಒಪ್ಪುತ್ತಿದ್ದಳೋ ಇಲ್ಲೋ. ಜಾತಿಯಲ್ಲಿ ಅವಳು ಕ್ರಿಶ್ಚಿಯನ್ ಹುಡುಗಿ. ಅವಳ ಹುಚ್ಚಿನಲ್ಲಿ ತಾವೇನೂ ಜಾತಿ ವ್ಯವಸ್ಥೆಯನ್ನು ಪರಿಗಣಿಸಿರಲಿಲ್ಲ. ಅಷ್ಟೆ.

ಕಟ್ಟುನಿಟ್ಟಿನ ಕಣ್ಣಪಟ್ಟಿ ಕಟ್ಟಿಕೊಂಡು ಹೆರವರ ಮೆಚ್ಚಗೆಗಾಗಿ ಸದಾ ಚಡಪಡಿಸುವ ತಮ್ಮ ಹಳೆಯ ವ್ಯಕ್ತಿತವ ಎಲ್ಲಿ? ಹುಡುಗರಂತೆ ಹುಡುರಾಗಿ ಸೀಮೆಯಿಂದ ಸೀಮೆಗೆ ಹಾರಿ ಹೊಸ ಹೊಸ ಭಾವನೆಗಳಿಗೆ ಹಸಿದ ಈಗಿನ ವ್ಯಕ್ತಿತ್ವ ಎಲ್ಲಿ? ರೋಜಾಳಿಂದ ತಾವು ಎಷ್ಟೆಷ್ಟೋ ದಾಟಿ ಬಂದಿದ್ದರೂ, ಗಿರಿಜಮ್ಮನಿಗೆ ಈ ಅವಕಾಶ ಇರಲಿಲ್ಲ. ಮದುವೆಯಾದ ಹೊಸದರಲ್ಲಿ ತಮ್ಮ ಕಟ್ಟುನಿಟ್ಟಿನ ಜೀವನದ ಜೊತೆ ಒಮ್ಮೆ ಹೊಂದಾಯಿಕೆ ಮಾಡಿಕೊಂಡಾದ ಮೇಲೆ, ಅವೆಲ್ಲ ಹೊಂದಾಣಿಕೆಗಳಿಗೆ ಉಕ್ಕಿನ ಫ್ರೇಮು ಸಾಕಿಬಿಟ್ಟಳು. ಆದರೂ ತಾವೂ ತಿಳಿಸಿ ಹೇಳಿದ್ದರೆ ಆ ಫ್ರೇಮು ಮುರಿಯಲು ಸಿದ್ಧಲಾಗಬಹುದಿತ್ತು. ಅಥವಾ ಮಕ್ಕಳ ಬಯಕೆಯಿಂದಾದರೂ ರೋಜಾಳನ್ನು ಒಪ್ಪಿತ್ತಿದ್ದಳು. ಅಥವಾ ಒಪ್ಪುತ್ತಿರಲಿಲ್ಲ. ಪ್ರೇಮಪತ್ರ ಓದಿದಳೆಂದು ತೋರತ್ತದೆ. ಗಂಡ ದ್ರೋಹ ಮಾತಡುತ್ತಿದ್ದಾನೆ, ತಾನಿದ್ದು ಯಾಕೆ ಅವನ ಸುಖಕ್ಕೆ ಅಡ್ಡಗಾಲು ಹಾಕಬೇಕೆಂದಳೋ ಏನೋ? ಅಥವಾ ತನ್ನ ಆಸೆ ಈಡೇರಿತೆಂದೋ ದ್ರೋಹದ ನೋವಿನಂದಲೋ

ಅಂತೂ ಶಿವನ ಪಾದ ಸೇರಿದ್ದಳು. ಕಟ್ಟುನಿಟ್ಟೆಂದು ಮಗನನ್ನು ಕಳೆದುಕೊಂಡಾಯಿತು. ಈಗ ರೋಜಾ ಎಂದು ಹೇಳಿ ಹೆಂಡಿಯನ್ನ ಕಳೆದುಕೊಂಡೆ. ತಾನು ಒಟ್ಟಾರೆ ಪಾಪಿ ಎನ್ನಿಸಿತು. ಆಗಲೇ ಅವರ ತಲೆಯಲ್ಲಿ ಶಿವಲಿಂಗದೇವರು ಇಣಿಕಿಹಾಕಿದ್ದು. ಹಳೇಲಿಂಗವನ್ನು ಮಚ್ಚಿಟ್ಟ ಕರಡಿಗೆಯಿಂದ ತೆಗೆದು ಅಂಗೆಯಲ್ಲಿಟ್ಟುಕೊಂಡು ಚಿತ್ತವನ್ನು ಏಕಾಗ್ರಗೊಳಿಸಲು ಪ್ರಯತ್ನಿಸಿದರು. ಆಗಲಿಲ್ಲ. ತಾನು ದೇವರಿಗೆ ಲಾಯಖ್ಖಾಗಲಿಲ್ಲ ಎಂರು.

ಈ ಮಧ್ಯೆ ಊರಿನವರೆಲ್ಲ ಬಂದು ಅವರಿಗೆ ಸಹಾನುಭೂತಿ ಸೂಚಿಸಿ ಹೋದರು. ಜೀಕೆ ನಿರ್ಭಾವದಿಂದ್ದರು. ಕಾಲೇಜಿಗೂ ಹೋಗಲಿಲ್ಲ. ತುಂಬ ಅಗತ್ಯವಾದದ್ದು ಏನಾದರೂ ಇದ್ದರೆ ಎಂಟಿ ಇಲ್ಲಿಗೇ ತಂದು ಸಹಿ ಹಾಕಿಸಿಕೊಂಡು ಹೋಗುತ್ತಿದ್ದ. ಹೀಗೆ ಹದಿನೈದಿಪ್ಪತ್ತು ದಿನ ಕಳೆಯಿತು. ಬಿ.ಎ. ರಿಸಲ್ಟು ಶುಕ್ರವಾರ ಪ್ರಕಟವಾಗುವುದೆಂದು ಪತ್ರಿಕೆಗಳಲ್ಲಿ ಕಾಣಿಸದ್ದೇ - ಚುರುಕಾದರು. ಎದ್ದು ಕಾಲೇಜಿನ ಕಡೆಗೂ ಹೋಗಿ ಬಂದರು. ಹುಬ್ಬಳ್ಳಿಗೆ ಹೋಗಿ ರೋಜಾಳನ್ನು ಕಂಡು ಮಾತಾಡಿ ಬರಬಹುದಲ್ಲ, ಮದುವೆಯ ವಿಚಾರ ಆಮೇಲೆ ನೋಡಿಕೊಂಡರಾಯಿತು. ಅಥವಾ ಇರಲಿ ಎಂದು ಬ್ಯಾಂಕಿಗೆ ಹೋಗಿ ಇದ್ದ ಹತ್ತು ಸಾವಿರ ರೂಪಾಯಿಗಳನ್ನು ತಕ್ಕೊಂಡರು. ಹುಬ್ಬಳ್ಳಿಯ ಬಸ್ ಹತ್ತಿದರು.

## ೧೩

ಹುಬ್ಬಳ್ಳಿ ತಲುಪಿದಾಗ ಹನ್ನೊಂದು ಗಂಟೆಯಾಗಿತ್ತು. ಸೀದಾ ಅಶೋಕ ಹೋಟೆಲ್‌ಗೆ ಹೋದರು. ರೋಜಾ ಬಂದಿರಲಿಲ್ಲ. ತಾವೇ ಒಂದು ರೂಮು ಬಾಡಿಗೆ ಹಿಡಿದು ವಿಶ್ರಾಂತಿ ತಕ್ಕೊಂಡರು. ಅರ್ಧ ತಾಸಿಗೊಮ್ಮೆ ರಿಸೆಪ್ಷನ್ನಿಗೆ ಹೋಗಿ ರೋಜಾ ಬಂದದ್ದರ ಬಗ್ಗೆ ವಿಚಾರಿಸಿದರು. ಪ್ರತಿಸಲವೂ ಆ ಹೆಸರಿನವರು ಯಾರೂ ಬಂದಲಿಲ್ಲವೆಂದು ಉತ್ತರವೇ ಬಂತು. ಆಕೆ ಸುಳ್ಳು ಹೇಳಿರಬಹುದೆ? ಆದರೆ ಆ ದಿನ ಹೇಳಿಕೊಳ್ಳುವಂಥ ಕಟವೇನೂ ಆವಳ ಕಣ್ಣಿನಲ್ಲಿರಲಿಲ್ಲ. ಅಥವಾ ಇವತ್ತು ರಿಸಲ್ಟ್ ಇದೆಯಲ್ಲ, ಯೂನಿವರ್ಸಿಟಿಗೆ ಹೋಗಿರಬೇಕು. ತಾವೂ ಅಲ್ಲಿಗೇ ಹೋದರಾಯಿತೆಂದು ಎದ್ದರು. ತನ್ನನ್ನು ಕೇಳಿಕೊಂಡು ರೋಜಾ ಎಂಬ ಹೆಸರಿನ ಹುಡುಗಿ ಎಂದರೆ ಕೊಡಿರೆಂದು ಹೇಳಿ ರಿಸೆಪ್ಷನ್ನಿನಲ್ಲಿ ಕೀ ಇಟ್ಟರು. ಧಾರವಾಡ ಬಸ್ಸು ಹಿಡಿದು ಯೂನಿವರ್ಸಿಟಿ ಕ್ಯಾಂಪಸ್ಸಿಗೆ ಹೋದರು. ರಿಸಲ್ಟಿನ ಬೋರ್ಡಿನ ಮುಂದೆ ಹುಡುಗರ ಗುಂಪಿತ್ತು. ಆದರೆ ಅಲ್ಲಿ ಅವಳಿರಲಿಲ್ಲ. ಹೋಗಲೆಂದು ತಮ್ಮ ಕಾಲೇಜಿನ ರಿಸಲ್ಟು ನೋಡಿದರು. ಈ ಸಲ ಆರು ಫಸ್ಟ್‌ಕ್ಲಾಸ್ ಸಿಕ್ಕಿತ್ತು. ಸಮಾಧಾನಪಟ್ಟುಕೊಂಡು ತಿರುಗಿದರು.

ಕ್ಯಾಂಪಸ್ಸಿನ ತುಂಬಾ ಅಡ್ಡಾಡಿದರು. ಕಂಡ ಪರಿಚಿತರನ್ನು ಸಂಕ್ಷಿಪ್ತವಾಗಿ ಭೇಟಿಮಾಡಿ ನಿವಾರಿಸಿದರು. ಹುಡುಗಿಯರಿದ್ದ ಕಡೆಗೆಲ್ಲ ಸಂಚರಿಸಿದರು. ಯಾವೊಬ್ಬ ಹುಡುಗಿ ದೂರದಲ್ಲಿ ಕಂಡರೂ ಅಕಾ ಅವಳಿರಬಹುದೆಂದು ಧಾವಿಸುತ್ತಿದ್ದರು. ಹೀಗೆ ಅಲೆದಾಡಿ ಸುಸ್ತಾಗಿ ಕೊನೆಗೆ ಆ ಫಸ್ಟ್‌ಕ್ಲಾಸ್ ಬಂದವರು ಯಾರ್ಯಾರಿರಬಹುದೆಂದು ತಿಳಿಯಲು ಪರೀಕ್ಷಾ ವಿಭಾಗಕ್ಕೆ ಹೋದರು. ಅಲ್ಲಿದ್ದ ಕ್ಲರ್ಕು ಇವರ ಪರಿಚಿತನೇ. ಕೇಳಿದೊಡನೆ ರಿಸಲ್ಟಿನ ಶೀಟು ಮತ್ತು ತ್ಸಂಬಂಧಿಯಾದ ಮೂಲಗಳನ್ನು ತಂದುಕೊಟ್ಟ. ನೋಡಿದರೆ ರೋಜಾ ಮತ್ತು ಗಿರೆಪ್ಪ ಇಬ್ಬರೂ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದರು!

ಮೋಸವಾಗಿದೆ ಎಂದುಕೊಂಡರು. ಅವರಿಬ್ಬರೂ ಖಂಡಿತ ಫಸ್ಟ್‌ಕ್ಲಾಸ್ ಬರುವ ಪೈಕಿ ಅಲ್ಲ. ರೋಜಾ ಬಂದಿರಬಹುದು ಎನ್ನೋಣ. ಯಾಕೆಂದರೆ ಉತ್ತರಪತ್ರಿಕೆಯನ್ನು ಅವಳ ಕೈಗೇ ಕೊಟ್ಟಿದರಲ್ಲ. ಅವಳು ಅದರ ಸದುಪಯೋಗ ಪಡೆದಿರಬಹುದು. ಬಹುದೇನು ಸಾಗೆ ಪಡೆದೇ ಫಸ್ಟ್‌ಕ್ಲಾಸ್ ದೊರಕಿಸಿದ್ದು. ಆದರೆ ಗಿರೆಪ್ಪ ಖಂಡಿತ ಮೂರನೇ ಕ್ಲಾಸಿನ ಹುಡುಗ. ಅವನು ಫೇಲಾಗಬಹುದೆಂದು ಇವರ ಅಂದಾಜಿತ್ತು. ಇವ ಹ್ಯಾಗೆ ಈ ಪರಿ ಪಾಸಾದ? ಅಥವಾ ತನ್ನ ಗೆಳತಿಯ ಉತ್ತರ ಪತ್ರಿಕೆಗೂ ಇವಳೆ ಮಾರ್ಕ್ಸ ಹಾಕಿದಳಲ್ಲ ಅದು ಇವನದೇ ಇದ್ದಿರಬಹುದೇ? ಹೌದೆಂದುಕೊಂಡರು. ಮೋಸವಾದದ್ದು ಸ್ಪಷ್ಟವಾದೊಡನೆ ತೊಡೆ ಕುಸಿದಂತಾಗಿ ನಿಶ್ಶಕ್ತರಾದರು. 'ನಿಮ್ಮ ಕಾಲೇಜಿನಿಂದ ಆರು ಫಸ್ಟ್‌ಕ್ಲಾಸ್ ಬಂದಾವ, ಪೇಡೆ ಕೊಡಸರಿ ಸರ' ಎಂದು ಕ್ಲರ್ಕು. 'ಕೊಡಿಸೋಣ ಕೊಡಿಸೋಣ' ಎಂದು ಮೆಲ್ಲಗೆ ಎದ್ದು ಯಾತ್ರಿಕವಾಗಿ ಸಿಟಿಯ ಕಡೆ ಹೊರಟರು.

ಹುಬ್ಬಳ್ಳಿ ಬಸ್ಸಿನಲ್ಲಿ ಕುಳಿತಾಗಲೂ ಚಿತ್ರ ಸ್ವಸ್ಥವಾಗಲಿಲ್ಲ. ಆಕೆ ಗಿರೆಪ್ಪನಿಗೆ ಅಂಕಗಳನ್ನು ಹಾಕಿದ್ದೇ ನಿಜವಾದರೆ ತನ್ನನ್ನು ಮೋಸ ಮಾಡಿದ್ದೂ ನಿಜವೆಂದಾಯಿತು. ಇದು ನಿಜವಾದರೆ ತನಗೆ ಗೊತ್ತಿಲ್ಲದೆ ಗಿರೆಪ್ಪನ್ನು ಪ್ರೀತಿಸುತ್ತಿದ್ದಾಳೆಂಬುದೂ ನಿಜವಾಯಿತು. ಅಂದರೆ ಇಡೀ ವರ್ಷ ತಾನು ಮೂರ್ಖತನದ ಉತ್ಕಟಾವಸ್ಥೆಯಲ್ಲಿದ್ದಂತೆ ಆಯಿತು. ಅಥವಾ ಹೀಗೂ ಇದಿತು. ಪರೀಕ್ಷೆಗಳಲ್ಲಿ ಏನೇನೋ ಹೆಚ್ಚುಕಮ್ಮಿಯಾಗುತ್ತದೆ. ತಾನೇ ಕಂಡಂತೆ ಎಷ್ಟೊಂದು ಏರುಪೇರುಗಳಾಗಿಲ್ಲ? ಹೀಗೆ ಯಾವುದೋ ಒಂದು ಆಕಸ್ಮಿಕ ತಾಗಿ ಗಿರೆಪ್ಪನಿಗೆ ಕ್ಲಾಸ್ ಬಂದಿದಿತು. ಉಳಿದ ನಾಲ್ವರು ಯಾರೆಂದು ತಿಳಿದಿದ್ದರೆ ಅಂದಾಜು ಸಾಕಲು ಅನುಕೂಲವಾಗುತ್ತಿತ್ತು. ಛೇ ತಾನು ಉಳಿದವರ ಹೆಸರನ್ನು ತಿಲಿಯಲಿಲ್ಲ ಎಂದು ಪಶ್ಚಾತ್ತಾಪಪಟ್ಟರು. ಈಗಲೂ ಏನು ಆಗಿಲ್ಲವೆಂದೇ ನಂಬಲು ಪ್ರಯತ್ನಪಟ್ಟರು. ಗಿರೆಪ್ಪ ರೀಒಜಾಳ ಮಧ್ಯೆ ಏನಾದರೂ ಇದ್ದಿದ್ದರೆ ಎಂಟಿಗೆ ಗೊತ್ತಾಗದಿರಲು ಸಾಧ್ಯವೇ?

ಈ ಅರೆಬರೆ ಆಶಾಭಾವನೆಯಲ್ಲೇ ಹುಬ್ಬಳ್ಳಿಗೆ ಬಂದರು. ಹೋಟಲು ತಲುಪಿದಾಗ ಹತ್ತುಗಂಟೆಯಾಗಿತ್ತು. ರಿಸೆಪ್ಷನ್‌ನಲ್ಲಿ ಕೀ ಕೇಳಲು ಹೋದಾಗ 'ನಿಮ್ಮ ಪೈಕಿ ಯಾರೋ ಬಂದಾರ' ಎಂದು ಹೇಳಿದ. 'ಅರೆ ಬಂದಾಳಲ್ಲ!' ಎಂದು ಮನಸ್ಸಿಗೆ ಹೌಸಿಯಾಯಿತು. ಲವಲವಿಕೆಯಿಂದ ಮೆಟ್ಟಲೇರಿ ರೂಮಿಗೆ ಹೋದರು. ಬಾಗಿಲಿಕ್ಕಿತ್ತು. ಮಡಿದರು. ಮತ್ತೆ ಬಡಿದು ಕಾಯುತ್ತ ನಿಂತರು. ತಡವಾಗಿ ಬಾಗಿಲು ತೆರೆಯಿತು. ಬಾಗಿಲು ತೆಗೆದು ಎದುರಿಗೆ ನಿಂತಿದ್ದವನು ಗಿರೆಪ್ಪ!

ಇವರನ್ನು ನೋಡಿದವನೆ ಕೈಯಲ್ಲಿಯ ಸಿಗರೇಟೆಸೆದು ಹೆದರಿ 'ಬರ್ರಿ ಸರ' ಎಂದ. 'ಯಾರೋ ಗಿರಿ' ಎಂದು ಒಳಗಿನಿಂದ ರೋಜಾ ಕೇಳಿದಳು. ಕೇಳಿದ್ದೇ ಆಯಿತು. ಎದೆಯ ನೆತ್ತರು ನೆತ್ತಿಗಡಿರಿದಂತಾಗಿ ಕೈಕಾಲು ನಡುಗಿ ಜೀಕೆ ಬೀಳಲಿದ್ದರು. ಗಿರೆಪ್ಪ ತಕ್ಷಣ ಬಂದವನೆ ಅವರನ್ನು ಹಿಡಿದುಕೊಂಡು ಮೆಲ್ಲಗೆ ಒಳಗೆ ನಡೆಸಿಕೊಂಡುಹೋದ. ಗಾಬರಿಯಾಗಿ ರೋಜಾ ಎದ್ದುನಿಂತಳು. ಗಿರೆಪ್ಪ ಮೆಲ್ಲಗೆ ಅವರನ್ನು ಕುರ್ಚಿಯಲ್ಲಿ ಕೂರಿಸಿದ. ಅಷ್ಟರಲ್ಲಿ ಜೀಕೆ ಮೂರ್ಛೆ ಹೋಗಿದ್ದರು, ಮುದುಕ ಆ ದಿನ ಬಹಳ ಘಾಸಿಯಾಗಿದ್ದರು. ಪ್ರವಾಸ ಮಾಡಿ, ನಡೆದಾಡಿ, ರಿಸಲ್ಟ್ ನೋಡಿ ನಿರಾಶೆ ಹೊಂದಿದ್ದರು. ದ್ರೋಹದ ಅನುಮಾನಕ್ಕೆ ನೊಂದಿದ್ದರು. ಸಾಲದ್ದಕ್ಕೆ ಉಪವಾಸವಿದ್ದರು. ಗಿರೆಪ್ಪ ಹಾಗೇ ಹಿಡಿದುಕೊಂಡಿದ್ದ. ರೋಜಾ ಗಡಿಬಿಡಿ ಮಾಡಿ ನೀರು ತಂದು ಚಿಮುಕಿಸಿದಳು. ತುಸು ಹೊತ್ತಾಗ ಮೇಲೆ ಜೀಕೆ ಕಣ್ಣು ತೆರೆದರು. ಮುಖ ಹೀರಿ ಹೆಣದ ಹಾಗೆ ಕಾಣುತ್ತಿದ್ದರು. ಗಿರೆಪ್ಪ 'ಚಾ ತರಸೋಣೇನ್ರಿ ಸರ' ಎಂದ. ಬೇಡವೆಂದ ಕೈಸನ್ನೆ ಮಾಡಿ ಹಾಗೇ ಕಣ್ಣು ಬಾಯಿ ತಕ್ಕೊಂಡು ಹಿಂದಕ್ಕೆ ಒರಗಿದರು. ರೋಜಾ ಸರ್ರನೆ ದಿಂಬು ತಂದು ತಲೆ ಆಧಾರ ಕೊಟ್ಟಳು. 'ಸರ, ಡಾಕ್ಟರನ್ನ ಕರೆಸೋಣೇನ್ರೀ' ಎಂದಳು ರೋಜಾ. ಅದಕ್ಕೂ ಬೇಡವೆಂದು ಸನ್ನೆ ಮಾಡಿದರು. ಹುಡುಗರಿಬ್ಬರಿಗೂ ಏನು ಮಾಡಬೇಕೆಂದು ತೋಚದಾಯಿತು. ರೋಜಾ ಪತ್ರಿಕೆ ತಗೊಂಡು ಗಾಳಿ ಬೀಸತೊಡಗಿದಳು. ಅದನ್ನು ನೋಡಿ ಗಿರೆಪ್ಪ ಫ್ಯಾನು ಹಾಕಿದ. ಗಾಳಿ ಹಾಕುವುದನ್ನು ನಿಲ್ಲಿಸಿ ಆಕೆ ಮೆಲ್ಲಗೆ ಆರಾಮಾಗಲೆಂದು ಅವರ ಪಾದ ತಿಕ್ಕತೊಡಗಿದಳು. ಬೇಡವೆಂದು ಜೀಕೆ ಸನ್ನೆ ಮಾಡಿದರೂ ಕೇಳಲಿಲ್ಲ.

ಜೀಕೆಗೆ ಬಹಳ ಆಯಾಸವಾಗಿತ್ತು. ಇನ್ನು ವಿವರಿಸಬೇಕಾದ್ದೇನೂ ಉಲಿದಿರಲಿಲ್ಲ. ಮೋಸ ಹೋಗಿದ್ದರು, ಹಾಸ್ಯಾಸ್ಪದರಾಗಿದ್ದರು. ಇವಳ ಕೈಯಿಂದ ಮಾರ್ಕ್ ಹಾಕಿಸಿ ಭ್ರಷ್ಟಾಚಾರ ಮಾಡಿದ್ದರು. ಇವಳಿಗಾಗಿ ಹೆಂಡತಿಯನ್ನು ಕಳೆದುಕೊಂಡಿದ್ದರು ಮತ್ತು ಜೀವ ತೆರುವವರಿದ್ದರು. ಇದನ್ನೆಲ್ಲ ನೆನೆದಂತೆ ನಾಚಿಕೆಯಾಗಿ ಮನಸ್ಸಿನಲ್ಲೇ ತಮ್ಮ ಮುಖದ ಮೇಲೆ ಥೂ ಎಂದು ಉಗುಳಿಕೊಂಡರು. ಏನಾದರೇನು ಕಳೆದುಕೊಂಡದ್ದು ಬರುತ್ತದೆಯೇ? ಶಿವನಿಂಗಾ ನನ್ನನ್ನು ಯಾಕೆ ಒಯ್ಯುತ್ತಿಲ್ಲ ಎಂದರು. ಅಂದು ಅಂದು ಪಶ್ಚಾತ್ತಾಪದಿಂದ ಕಣಿರು ಸುರಿಸುತ್ತ, ರೋಜಾಳನ್ನೇ ತದೇಕ ದೃಷ್ಟಿಯಿಂದ ಶಾಪ ಹಾಕುವಂತೆ ನೋಡಿದರು. ಒಂದೇ ಸಮ ಕಣಿರು ಸುರಿಯುತ್ತಿತ್ತಲ್ಲ. ಅದನ್ನು ಕಂಡು ರೋಜಾಳ ಕರುಳು ಬಾಯಿಗೆ ಬಂತು. ತಿಕ್ಕುತ್ತಿದ್ದ ಜೀಕೆ ಕಾಲನ್ನು ಗಟ್ಟಿಯಾಗಿ ಹಿಡಿದು,

'ಸಾರಿ ಸರ, ನಾವೇನೋ ನಿಮ್ಮ ಜೋಡಿ ಆಟ ಆಡಬೇಕೆಂದಿವಿ. ನೋಡೋಣ ಅವರ್ನ ಬುಟ್ಟಿಗೆ ಹಾಕಿಕೋ ನೂರ ರೂಪಾಯಿ ಕೊಡತೇನಂತ ಗಿರೆಪ್ಪ ಬೆಟ್ ಕಟ್ಟಿದ. ಆದರೆ ನೀವು ಇಷ್ಟು ಸೀರಿಯಸ್ಸಾಗಿ ನಮಗೆ ಮೋಸ ಹೋಗತೀರಂತ ಇಬ್ಬರಿಗೂ ಕಲ್ಪಾನಾ ಇರಾಕಿಲ್ಲರಿ ಸರ. ನಾ ಕೊಟ್ಟ ಪ್ರೇಮಪತ್ರ ಗಿರೆಪ್ಪನಃ ಬರೀತಿದ್ದ. ನೀವು ಮೋಸ ಹೋದ ಹೋದಾಂಗ ನಾವೂ ಆಟಕ್ಕ ಬದ್ದಿವಿ.

ಇದನ್ನೆಲ್ಲಾ ಇಂದ ಹೇಳಿ ನಿಮ್ಮ ಕೈಕಾಲ ಕಟ್ಟಿಕೋಬೇಕಂತ ನಿಮಗೆ ಹುಬ್ಬಳ್ಳಿಗೆ ಬರಾಕ ಹೇಳಿದೆ. ತಪ್ಪಾತು, ನಮ್ಮ ತಪ್ಪ ಮಾಫಿ ಮಾಡರಿ ಸರ….' ಎಂದಳು.

ಗಿರೆಪ್ಪ ತಾನೂ ಅವರ ಪಾದದ ಬಳಿ ಕುಳಿತು,

'ಹೌದರಿ ಸರ, ನೀವು ನನ್ನ ಕಂಡಾಗೆಲ್ಲ ಯಾಕೋ ಒಂದ ನಮೂನಿ ಉರೀತಿದ್ದಿರಿ. ನಿಮ್ಮನ್ನಷ್ಟು ಆಟ ಆಡಿಸಿದರ ಹೆಗಿದ್ದೀತಂತ ನಾನಃ ಬೆಟ್ ಕಟ್ಟಿದೆ. ನೀವು ದೊಡ್ಡವರು ನಮ್ಮ ಬಲೀಗಿ ಬೀಳಾಕಿಲ್ಲಂತ ತಿಳಿದಿದ್ದೀವಿ. ಆದರ ನೀವು ನಮ್ಮನ್ನು ನಂಬಿಬಿಟ್ಟರಿ, ತಪ್ಪಾತ್ರಿ ಸರ. ನಾ ನಿಮ್ಮ ಮಗ ಅಂತ ತಿಳಕೊಂಡು ನಮ್ಮ ತಪ್ಪ ಹೊಟ್ಟಾಗ ಹಾಕ್ಕೊಳ್ರಿ.'

- ಎಂದು ಹೇಳಿ ಅವನೂ ಕಣಿರು ಸುರಿಸುತ್ತ ಕಾಲು ಹಿಡಿದ. ಜೀಕೆ ಬರೀ ಕಣಿರು ಸುರಿಸಿದರು. ಬಹಳ ಹೊತ್ತು ಯಾರೂ ಮಾತಾಡಲಿಲ್ಲ. ಜೀಕೆ ಮಾತಾಡದೆ ಏಳಬಲ್ಲೆ ಎಂದು ವಿಶ್ವಾಸ ಮೂಡಿದ ಮೇಲೆ ಮೆಲ್ಲಗೆ ಎದ್ದರು. ರೋಜಾ, ಗಿರೆಪ್ಪ ಇಬ್ಬರೂ 'ಸರ' ಎಂದು ಕೈಹಿಡಿಯ ಹೋದರು. ತನ್ನನ್ನು ತಡೆಯಬೇಡಿರೆಂದು ಇಬ್ಬರಿಗೂ ಕೈಸನ್ನೆ ಮಾಡಿ ಬಾಗಿಲ ಕಡೆ ನಡೆದರು. ಆದರೂ ಇವರು ಬೆನ್ನು ಹತ್ತಿದರು. ಮುಖ ತಿರುಗಿಸಿ ಕಣ್ಣು ಕಿಸಿದು ಶಾಪ ಹಾಕುವರಂತೆ ಇಬ್ಬರನ್ನೂ ನೋಡಿ ತನ್ನನ್ನು ತಡೆಯಬೇಡಿರೆಂದು ಇಬ್ಬರಿಗೂ ಕೈಸನ್ನೆ ಮಾಡಿ ನಡೆದರು. ಹುಡುಗರಿಬ್ಬರೂ ಹೆದರಿ ಅಲ್ಲಿಯೇ ನಿಂತರು. ಸ್ವಯಂ ಹೆಣವೇ ಎದ್ದು ಸ್ಮಶಾನಕ್ಕೆ ನಡೆದಂತೆ ಜೀಕೆ ಅಸ್ಥಿರವಾದ ಕಾಲುಗಳನ್ನು ಮೆಲ್ಲಗೆ ಇಡುತ್ತ ಇಳಿದು ಹೋದರು.

ಹೋಟಲ ಬಿಟ್ಟು ಹೊರಗೆ ಬಂದಾಗ ಮಧ್ಯರಾತ್ರಿ ಮೀರಿದ್ದಿತು ಚಳಿ ಇತ್ತು. ಮುಂದೆ ಹೆಜ್ಜೆ ಇಡಲಾಗಲಿಲ್ಲ. ಗೇಟಿನ ಬಳಿ ಕುಸಿದರು. ಈ ಸಲ ಮೂರ್ಛೆ ಹೋಗಲಿಲ್ಲ. ಮೈ ಅರಿವಿಲ್ಲದೆ ಬಹಳ ಹೊತ್ತಿನ ತನಕ ಕೂತಿದ್ದರಲ್ಲ, ಚಳಿಗಾಳಿಯನ್ನುಂಡ ಮೈಗೆ ತುಸು ಚೇತರಿಕೆ ಬಂತು. ಮಲ್ಲಗೆ ಎದ್ದು ಸ್ಟೇಷನ್ನಿಗೆ ಹೋದರು. ರಾತ್ರಿ ಎಷ್ಟಾಗಿತ್ತೋ, ಅಂಗಡಿ ಬೆಳಕುಗಳಿರುವ ಭಾಗ ಬಿಟ್ಟು ಸಂಚಾರವಿಲ್ಲದಲ್ಲಿಗೆ ಹೋಗಿ ಕಲ್ಲುಬೆಂಚಿನ ಮೇಲೆ ಕೂತರು. ದೂರದಲ್ಲಿ ಕೂತವನೊಬ್ಬ ಮೈಮೇಲೆ ಗಟ್ಟಿ ಬಟ್ಟೆಯಿಲ್ಲದೆ ಚಳಿಯಿಂದ ಗಡಗಡ ನಡುಗುತ್ತಿದ್ದ. ಸಾಧ್ಯವಾದಷ್ಟೂ ಮೈಯನ್ನು ಮುದುಡಿಯಾಗಿಸಿದ್ದ ಅವನನ್ನೇ ನೋಡುತ್ತ ಜೀಕೆ ಕುಳಿತರು. ಅಷ್ಟರಲ್ಲಿ ಯಾವುದೋ ಗಾಡಿ ಬಂತು. ಸರ್ರನೆ ತಮ್ಮ ಕೋಟು ಕಳಚಿ, ಅಕಾ, ಆ ನಡುಗುತ್ತಿದ್ದವನಿಗೆ ಕೊಟ್ಟು ಗಾಡಿ ಹತ್ತಿದರು.

## ೧೪

ಮಾರನೇ ದಿನದ ದಿಪತ್ರಿಕೆಯಲ್ಲಿ ಜೀಕೆ ಮಾಸ್ತರರು ರೈಲು ಹಳಿಯಲ್ಲಿ ಸಿಕ್ಕು ಸತ್ತರೆಂಬ ಸುದ್ದಿ ಬಂತು. ಹೆಣ ಜಿಬ್ಬಿಜಿಬ್ಬಿಯಾದ್ದರಿಂದ ಗುರುತು ಸಿಗುತ್ತಿರಲಿಲ್ಲ. ಕೋಟಿನಲ್ಲಿದ್ದ ಅವರ ವಿಳಾಸ, ಸೆಸರಿನ ಡೈರಿ ನೋಡಿ ಅವರೇ ಸತ್ತರೆಂದು ಪೇಪರಿನಲ್ಲಿ ಬಂತು. ಅದನ್ನುನಂಮಿ ಆ ಊರಿನವರು ದೊಡ್ಡ ಸಭೆ ಕರೆದು ಅವರ ಆತ್ಮಕ್ಕೆ ಶಾಂತಿ ಕೋರಿದ್ದಲ್ಲದೆ ಕಾಲೇಜಿಗೆ ಜೀಕೆ ಮಾಸ್ತರರ ಹೆಸರನ್ನಿಟ್ಟರು. ಮತ್ತು ಅವರ ಪ್ರಿಯ ಚೇಲಾ ಎಂಟಿ ಅದರ ಪ್ರಿನ್ಸಿಪಾಲನಾದ.

ರೋಜಾ ಮತ್ತು ಗಿರೆಪ್ಪ ಪ್ರೀತಿಸಿದ್ದರೇನೋ ನಿಜ. ಆದರೆ ಇಬ್ಬರೂ ಬಡವರು ಮತ್ತು ಅನಾಥರು. ಎಷ್ಟು ಅಲೆದಾಡಿದರೂ ಗಿರೆಪ್ಪನಿಗೆ ನೌಕರಿ ಸಿಗಲಿಲ್ಲ. ಅವನು ಇದೆಲ್ಲಾ ಜೀಕೆ ಮಾಸ್ತರರನ್ನು ನೋಯಿಸಿದ್ದರ ಫಲವೆಂದು ಪಶ್ಚಾತ್ತಾಪ ಪಡುತ್ತ ಕೂಳಿಗೆ ಪಿರಿಯಾಗಿ ಅಲೆದಾಡುತ್ತಿದ್ದ. ರೋಜಾ ಹುಟ್ಟಿನಲ್ಲಿ ವೇಶ್ಯೆಯರ ಕುಲದವಳು. ಆದರೂ ಇಬ್ಬರೂ ಮದುವೆಯಾಗಿ ಸಂಸಾರ ಹೂಡಬೇಕೆಂದು ಕನಸು ಕಂಡಿದ್ದರು. ಆದರೆ ಅವಳಿಗೂ ಕೆಲಸ ಸಿಕ್ಕಲಿಲ್ಲವಾದ್ದರಿಂದ ಇದೆಲ್ಲ ಜೀಕೆ ಮಾಸ್ತರರ ಶಾಪವಾಗಿರಬೇಕೆಂದು ಪಶ್ಚಾತ್ತಾಪಪಡುತ್ತ ಕುಲಕಸುಬಿಗೇ ಹಿಂದುರುಗಿದಳು. ಆದರೂ ಆಗಾಗ ಇಬ್ಬರೂ ಕೂಡುತ್ತಿದ್ದರು. ತಮ್ಮ ಕನಸುಗಳನ್ನು ಮೆಲುಕು ಹಾಕುತ್ತಿದ್ದರು.

ಒಂದು ದಿನ ಸಂಜೆ ಇಬ್ಬರೂ ಹುಬ್ಬಳ್ಳಿಯಲ್ಲಿ ಸ್ಟೇಷನ್ ರೋಡಿನ ಗುಂಟ ನಡೆದಿದ್ದರು. ಇಬ್ಬರ ಬಳಿಯೂ ಹಣ ಇರಲಿಲ್ಲ. ಇದ್ದಕ್ಕಿದ್ದಂತೆ ಯಾರೋ 'ಗಿರೆಪ್ಪ, ಏ ರೋಜಾ' ಎಂದು ಕೂಗಿದರು. ಇವರು ಹಿಂದುರುಗಿ ನೋಡಿದರು. ಗುರುತಿದ್ದವರು ಯಾರೂ ಕಾಣಿಸಲಿಲ್ಲ. ಮತ್ತೆ ಮುಂದುವರೆಸಿದರು. ಅಷ್ಟರಲ್ಲಿ ಅಸ್ತವ್ಯಸ್ತೆ ಬಟ್ಟೆಯ ಎತ್ತರದ ಆಸಾಮಿಯೊಂದು ಹೊಳೆವ ಕಣ್ಣುಗಳಿಂದ ಇವರನ್ನೇ ನೋಡುತ್ತ, ಇವರ ಕಡೆಗೇ ಧಾವಿಸಿ ಬರುತ್ತಿತ್ತು. ತುಸು ಹೊತ್ತು ಗೊಂದಲದಲ್ಲಿ ನಿಂತರು. ಗುರುತು ಸಿಕ್ಕಂತಾಯಿತು. ಸಿಕ್ಕ ತಕ್ಷಣ ಇಬ್ಬರ ಜಂಘಾಬಲ ಉಡುಗಿ ಮೈ ತುಂಬ ನಡುಕ ಬಂತು. ತಲೆ ಸುತ್ತಿ ರೋಜಾ ಮೂರ್ಛೆ ಬೀಳುತ್ತಿದ್ದಳು. ಅಷ್ಟರಲ್ಲಿ ಆ ವ್ಯಕ್ತಿಯೇ ಬಂದು ಅವಳನ್ನು ಹಿಡಿದುಕೊಂಡ. ಗಿರೆಪ್ಪನಿಗೆ ಭಯ. ಮಾತು ಹೊರಡಲ್ಲೊಲ್ಲದು. ಸುತ್ತ ಜನ ಓಡಾಡುತ್ತಿದ್ದರು ನಿಜ. ಆದರೂ ಎದುರು ಕಾಣುತ್ತಿದ್ದದು ಕನಸೋ ಭ್ರಮೆಯೋ ಹಳವಂಡವೋ - ಈ ಜನ ಸುಳ್ಳೋ ನಿಜವೋ ಇಬ್ಬರೂ ಅಕ್ಷರಶಃ ತತ್ತರಿಸಿಬಿಟ್ಟರು. ಬಂದವರು 'ಯಾಕ ಮೈಯಾಗ ಹುಷಾರಿಲ್ಲೇನು?' ಅಂದರು. ಆಗಲೂ ಮಾತಾಡಲೊಲ್ಲರು. ಪಿಳಿಪಿಳಿ ಕಣ್ಣುಬಿಟ್ಟು ಅವರನ್ನೇ ನೋಡುತ್ತಿದ್ದರು. ಆಮೇಲೆ ಅವರೇ ಏನೇನೋ ಮಾತಾಡಿದ ಮೇಲೆ ತುಸು ನಿಜದ ಪ್ರಜ್ಞೆ ಬಂದ ಹಾಗಾಯಿತು. ಇಬ್ಬರ ಮೈಯಿಂದ ಬಿಸಿನೀರಿನ ಬೆವರಿಳಿಯುತ್ತಿತ್ತು.

'ಸರ, ನೀವು ಸತ್ತಿರಂತ.... ಪೇಪರದಾಗ....'

'ಹೌಂದಪ ನಿಮ್ಮ ಜೀಕೆ ಮಾಸ್ತರ ಸತ್ತಾನಂತ ಬಂದಿತ್ತು. ಅದಃ ಹೌಂದಲ್ಲೋ?'

ಇಬ್ಬರೂ ಹೌಂದೆಂದು ತಲೆಯಲ್ಲಾಡಿಸಿದರು. 'ಎಲ್ಲಾ ಹೇಳತೇನ ಬರ್ರಿ' ಎಂದು ಅವರನ್ನು ಕರೆದುಕೊಂಡು ವಿರುದ್ಧ ದಿಕ್ಕಿನತ್ತ ನಡೆದರು. ಸತ್ತವನೊಬ್ಬ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾದರೆ ಹ್ಯಾಗಿರುತ್ತದೆ? ಆದರೆ ಅವರ ಕೈಯ್ಯ ಪ್ರತ್ಯಕ್ಷ ಸ್ಪರ್ಶ ಮತ್ತು ಸುತ್ತ ಪ್ರತ್ಯಕ್ಷ ಕಾಣುತ್ತಿದ್ದ ಜನ ಮತ್ತು ಸ್ವಂತ ಪಂಚೇದ್ರಿಯಗಳ ಅನುಭವದಿಂದ ಇದು ಭೂತವಲ್ಲ ಎಂಬ ನಂಬಿಕೆ ನಿಧಾನವಾಗಿ ಬಂದು, ಇವರು ಜೀವಂತ ವ್ಯಕ್ತಿಯೆ ನಮ್ಮ ಜೀಕೆ ಮಾಸ್ತರರೇ ಎಂದು ಖಾತ್ರಿಯಾಗಿ, ಆದರೂ ಅರೆಬರೆ ಹೆದರಿಕೆಯಲ್ಲಿ ಕುರಿಯಂತೆ ಅವರ ಬೆನ್ನುಹತ್ತಿದರು.

ಮತ್ತೆ ಅಶೋಕ ಹೋಟೆಲಿಗೇ ಬಂದರು. ಒಂದು ರೂಮು ತಗೊಂಡು ಒಳಗೆ ಕುಳಿತರು. ಚಹಾ ತರಿಸಿ ಕುಡಿದರು. ಜೀಕೆ ಮಾಸ್ತರ್ ತಾವು ಆ ದಿನ ಇಲ್ಲಿಂದ ಹೊರಟಿದ್ದರಿಂದ ಹಿಡಿದು ಚಳಿಯಲ್ಲಿ ನಡುಗುತ್ತಿದ್ದವನಿಗೆ ಕೋಟು ಕೊಟ್ಟುದನ್ನು ಹೇಳಿ ಅವ ಸತ್ತು ತಾವೇ ಸತ್ತವೆಂಬ ಸುದ್ದಿ ಹ್ಯಾಗೆ ಬಂತೆಂದು ಹೇಳಿದರು. ಗಿರೆಪ್ಪನಿಗೆ ಹೊಯ್ಕಾಯಿತು.

'ಅಲ್ಲರಿ ಸರ ಆಮೇಲಾದ್ರೂ ನೀವು ಪತ್ರ ಬರೆದು ತಿಳಿಸಬಹುದಿತ್ತಲ್ಲ' ಎಂದ.

'ಇಲ್ಲ, ನಾ ಸತ್ತದ್ದಃ ಒಳ್ಳೇದಾಯ್ತು. ಆ ಜನ್ಮ ನನಗ ಸಾಕಾಗಿತ್ತು. ಹೊಸ ಮನುಷ್ಯ ಆಗೇನಿ. ಆ ಹೆಸರಿಗೆ ಎಷ್ಟೊಂದು ಬಂಧನ ಎಷ್ಟೊಂದ ಕಟ್ಟುನಿಟ್ಟಿದ್ದವು. ಈಗ ನೋಡು ನಾ ಸ್ವತಂತ್ರ. ಎಲ್ಲಿ ಬೇಕಲ್ಲಿ ಅಡ್ಡಾಡತೀನಿ, ನೋಡತೀನಿ, ಹುಡಕತೀನಿ.... ಯಾರಿಗೂ ನನ್ನ ಗುರುತಿಲ್ಲ, ಹಿಂದಿನ ಹೆಸರಿಲ್ಲ. ಆದರ ನಿಮ್ಮಿಬ್ಬರ ಬಗ್ಗೆ ತುಸು ಜವಾಬ್ದಾರಿ ಇತ್ತು. ಅದಕ್ಕಃ ನಿಮ್ಮನ್ನ ಹುಡುಕುತ್ತಿದ್ದೆ. ಆ ದಿನ ನೀವಿಬ್ಬರೂ ಅತ್ತಿರಿ. ಕರೆದಿರಿ, ಕಾಲ ಹಿಡಿದಿರಿ, ಮಕ್ಕಳಂತ ತಿಳಿದ ತಪ್ಪ ಮಾಫಿ ಮಾಡಲಿ ಅಂತ ಹೇಳದ್ರಿ. ಆದರ ಜೀಕೆ ಮಾಸ್ತರಗ ಅದ್ಯಾವುದೂ ಕಾಣಿಸಲಿಲ್ಲ. ಕೇಳಿಸಲಿಲ್ಲ. ಖರೆ ಹೇಳಬೇಕೆಂದರ ಆ ದಿನ ನಿಮಗ ಮನಸ್ಸಿನಾಗ ಬಹಳ ಶಾಪ ಹಾಕಿದೆ. ಆಮ್ಯಾಲ ಎಲ್ಲೆಲ್ಲೋ ಅಡ್ಡಾಡಿದೆ. ತಿರುಗಿದೆ. ಮನಸ್ಸು ಶಾಂತ ಆಗಲಿಲ್ಲ. ಏನೋ ಹುಡುಕುತ್ತಿದ್ದೆ. ಏನಂತ ಗೊತ್ತಾಗಿರಲೇ ಇಲ್ಲ. ಶಿವನಿಂಗನ ದ್ಯಾನ ಮಾಡಿದೆ. ಒಂದು ಮನಸ್ಸು ಬರಲೇ ಇಲ್ಲ. ಒಂದು ದಿನ ಯಾವುದೋ ಕಾಡಿನಾಗ ಬಿದ್ದುಕೊಂಡಿದ್ದೆ. ಕನಸಿನಾಗ ಒಬ್ಬ ಎಳೀ ಹುಡುಗ ಕಾಣಿಸಿಕೊಂಡ. ಕರ್‍ರಗಿದ್ದ. ನಿಲೀಕಣ್ಣು, ದಾಳಂಬರಿ ಬೀಜಧಾಂಗ ಹಲ್ಲ, ದನಾ ಕಾಯುವರ್ಧಾಂಗ ಕೈಯಾಗ ಕೋಲ ಹಿಡಿದಿದ್ದ. ಕತ್ತಿಗೆ ಲಿಂಗ ಕಟ್ಟೆದ್ದ ಸೊಂಟದಾಗ ಒಂದು ಮಿಡಿ ನಾಗರಹಾವಿತ್ತು. ನಿಮ್ಮ ಕ್ಲಾಸಿನಾಗ ಆಟ ಆಡಿದ್ದಿರಲ್ಲ, ಅದಲ್ಲ, ಖರೆ ಖರೆ ಹಾವು! ಹುಡುಗ ಭಲೆ ಹುರುಪಿನವ. ಹಾಡಿಕೊಂಡ. ನನ್ನ ಮೈಮ್ಯಾಲೆ ಥೈ ಥೈ ನವಿಲಿನ್ಹಾಂಗ ಕುಣೀತಿದ್ದ. ಕುಣೀತ ಕೆಳಗ ಜಿಗಿದ. "ಸಿಕ್ಕಿಯೋ

ಶಿವ!" ಅಂತ ಅವನ ಕುಣಿಯೋ ಕಲಾ ಗಟ್ಟಿಯಾಗ ಹಿಡಕೊಂಡುಬಿಟ್ಟೆ. ಹುಡುಗ ಕುಲುಕುಲು ನಗ್ತಾ ಕತ್ತಲಾಗ ಕರಗಿಬಿಟ್ಟ! ನಿಮಗಿಬ್ಬರಿಗೂ ದೇವರು ದಿಂಡಿರೊಳಗ ನಂಬಿಗಿ ಐತೇನು?' ಇಬ್ಬರು ಇಲ್ಲವೆಂಬಂತೆ ಕತ್ತು ಹಾಕಿದರು.

'ಇರಾಕ ಬೇಕಂತಿಲ್ಲ. ಆದರ ನನಗೆ ಆಗೀಗ ಅಷ್ಟೋ ಇಷ್ಟೋ ನಂಬಿಕೆ ಬರತೈತಿ. ಎಚ್ಚರಾಯಿತಲ್ಲ. ಆಮ್ಯಾಲ ನೆನಪು ಮಾಡಿಕೊಂಡೆ. ಈ ಹುಡಗನ್ನ ಎಲ್ಲೋ ನೋಡಿಧಾಂಗೈತಲ್ಲ. ನನ್ನ ಸತ್ತ ಮಗ ಇರಬೇಕೇನೊ? ಅಲ್ಲ, ಅಲ್ಲ. ಇನ್ಯಾರಿದ್ದೀತು? ಭಾಳ ಪ್ರಯತ್ನ ಮಾಡಿದಾಗ ಗುರುತಾ ಸಿಕ್ತು.'

- ಎಂದು ಹೇಳಿ ಜೀಕೆ ತುಸು ಸುಮ್ಮನಾದರು. ಈಗವರ ಕಣ್ಣುಗಳಲ್ಲಿ ಮೊದಲಿನ ಚಂಚಲತೆ ಇರಲಿಲ್ಲ. ಶಾಂತವಾದ ಸ್ನೇಹಮಯವಾದ ಪ್ರಕಾಶದಿಂದ ಅವು ಹೊಳೆಯುತ್ತಿದ್ದವು. ಯಾವುದೋ ಒಂದು ದೊಡ್ಡ ಗುಟ್ಟನ್ನು ಅತಿ ಪ್ರಯಾಸದಿಂದ ಕಂಡ ತೃಪ್ತಿ ಮತ್ತು ಇನ್ನೂ ಕಾಣಬೇಕೆಂಬ ಅತೃಪ್ತಿ ಅವುಗಳಲ್ಲಿತ್ತು. ಜೀಕೆ ಇಬ್ಬರ ಬೆನ್ನುಗಳ ಮೇಲೆ ಭಾವಪೂರ್ಣವಾಗಿ ಕೈಯಾಡಿಸಿ ತೃಪ್ತಿಯಾದ ಮೇಲೆ,

'ಆ ಹುಡುಗ ಹೆಂಗಿದ್ದ ಅಂದರೆ ಥೇಟ್ ನಿನ್ಹಾಂಗ ಇದ್ದ!'

- ಎಂದು ಗಿರೆಪ್ಪನ ಕಡೆ ನೋಡಿದರು. ಅವರ ಮಾತುಗಳಲ್ಲಿ ಮುಂಚೆ ಇಲ್ಲದ ವಿಚಿತ್ರ ಮಾಂತ್ರಿಕ ಶಕ್ತಿಯೊಂದು ಇದ್ದು ಅದೇನೆಂದು ತಿಳಿಯಲಾರದಷ್ಟು ಗಿರೆಪ್ಪ ಇವರಿಂದ ಆಕರ್ಷಿತನಾಗಿದ್ದ. ಕನಸಿನ ಹುಡುಗ ತನ್ನಂತಿದ್ದ ಎಂದು ಕೇಳಿದೊಡನೆ ಸಂಕೋಚವಾಯಿತು. ತನಗೇ ಗೊತ್ತಿಲ್ಲದೆ ವಿನಯದಿಂದ ಕೈ ಮುಗಿದ.

'ನಿನಗ ಗೊತ್ತಿಲ್ಲಪ್ಪ, ಮನುಷ್ಯನೊಳಗ ಅಗಾಧ ಶಕ್ತಿ ಐತಿ. ನಾವು ನಮನಮಗ ಅನುಕೂಲವಾದ ಸಣ್ಣ ಭಾವನೆ ಹಿಡಕೊಂಡು ಅದರಾಗ ಉರಳಾಡತೀವಿ. ನೋಡು ರೋಜಾನ ಭೇಟಿ ಆಗೋತನಕ ಪ್ರೀತಿ ಅಂಬೋದs ನನಗೆ ಗೊತ್ತಿರಲಿಲ್ಲ. ನಿನ್ನ ನೋಡೋ ಮುಂಚೆ ಮತ್ಸರ ಗೊತ್ತಿರಲಿಲ್ಲ. ಅಥವಾ ಅದೇನೋ ಭಾವನೆಗಳು ಅಂತ ಹೇಳಿದೆನಲ್ಲ ಅವನ್ನಾದರೂ ನಾನು ಬರೋಬರಿ ತಿಳಕೊಂಡಿದ್ದೀನೋ ಇಲ್ಲೋ ಗೊತ್ತಿಲ್ಲ. ಅಥವಾ ನನ್ನ ಹಸಿ ಭಾವನೆಗಳನ್ನ ದೇವರೊಬ್ಬನೇ ಬಲ್ಲ. ಅದರ ನನಗೆ ಆಗೇತಿ, ನಿಮ್ಮೆಲ್ಲರ ದಯದಿಂದ ನಾ ಇನ್ನೊಂದ ಜನ್ಮ ತಾಳೇನಿ. ನನಗೀಗ ಏನು ಆಸೆ ಗೊತ್ತ? ಮಕ್ಕಳಾಸೆ!'

- ಎಂದು ಹೇಳಿದೊಡನೆ ಫಳಕ್ಕನೆ ಅವರ ಕಣ್ಣಿಂದ ಆನಂದದ ಕಣಿರು ಉದುರಿದವು. ಆನಂದದ ತೀವ್ರ ಅನುಭವದಲ್ಲಿ ಅವರೀಗ ನಡುಗುತ್ತಿದ್ದರು.

'ಯಾವ ಎಳೆಯ ಮಕ್ಕಳನ್ನು ನೋಡಿದರೂ ತಬ್ಬಿಕೊಳ್ಳೋಣ ಅಂತ ಅನಿಸತೈತಿ. ಈ ಸಂಬಂಧ ಅಂತೀವಲ್ಲ ಇದಾರಾಗೇನೋ ದೊಡ್ಡದೈತಪ್ಪ. ನನಗದು ಖಾತ್ರಿ ಆಗೇತಿ ಖರೆ. ಆದರೆ ಹೇಳಲಿಕ್ಕೆ ಬರಲೊಲಲ್ಲದು. ಆ ದೊಡ್ಡದನ್ನ ಕಾಣ್ಬೇಕು. ಅದರ ಗಣಿತ ಬೇರೆ. ಇಲ್ಲದಿದ್ದರ ನಾ ಯಾರು? ರೋಜಾ ಯಾರು? ನೀ ಯಾರು?... ಅದೇನೋ ದೊಡ್ಡದೈತಿ. ನಾ ಬಿಡು ಪಾಪಿ, ನನಗದು ಕಾಣಿಸೋದಿಲ್ಲ. ಆದರೆ ನನಗ ಅದನ್ನ ಕಾಣಬೇಕಂತ ಹಟ ಐತಿ. ಹಿಂದಿನ ಹಿರೇರು ಆ ದೊಡ್ಡದಕ್ಕ ಶಿವನಿಂಗಸ್ವಾಮಿ ಅಂದರೇನೋ! - ಅದಕ್ಕ ಅನಾಥ ಮಕ್ಕಳ ಸೇವಾ ಮಾಡಾಕ ಒಂದ ಅವಕಾಶ ಸಿಕ್ಕೈತಿ. ಒಪ್ಪಿಕೊಂಡೆನಿ' ಎಂದು ಹೇಳುತ್ತ ಮಾತು ಅತಿಯಾಯಿತೆಂಬಂತೆ ಬೂಟಾಟಿಕೆಯೂ ಯಾಕಾಗಿರಬಾರದೆಂದು ಅನ್ನಿಸಿ ನಮ್ರರಾದರು. 'ಬೋರ್ ಮಾಡಿದೆನೇನು?' ಎಂದರು.

'ಇಲ್ಲ ಹೇಳ್ರಿ ಸರ...' ಎಂದಳು ರೋಜಾ. ಅವಳಾಗಲೇ ಕಣ್ಣೀರು ಮಿಡಿಯುತ್ತಿದ್ದಳು.

‘ಏನಿಲ್ಲ ಬಿಡು. ಅಷ್ಟು ದೊಡ್ಡ ಮಾತಾಡುವಷ್ಟು ದೊಡ್ಡ ಮನುಷ್ಯ ನಾನಲ್ಲ. ಬಾಯಿ ಚಪಲ. ಅದಿರಲಿ. ಅದ್ಯಾಕೆ ನೀವು ಈ ಥರ ಇದ್ದೀರಿ?’ ಎಂದು ಕೇಳಿದರು.

- ಗಿರೆಪ್ಪ ತನ್ನ ಕೆಲಸವಿಲ್ಲದ ಸ್ಥಿತಿ, ರೋಜಾ ತಾನು ಸೂಳೆಯಾಗಬೇಕಾದ ಸ್ಥಿತಿ ತೋಡಿಕೊಂಡರು. ಅದನ್ನೆಲ್ಲ ಕೇಳುತ್ತ ಏನೇನೋ ಲೆಕ್ಕ ಹಾಕುತ್ತ ಜೀಕೆ ಮೌನ ತಳೆದರು.

ಎರಡು ದಿನ ಇಬ್ಬರನ್ನೂ ತಮ್ಮಲ್ಲಿಯೇ ಉಳಿಸಿಕೊಂಡರು. ಮಕ್ಕಳನ್ನು ಕಳೆದುಕೊಂಡ ತಂದೆ ಅವರು ಪುನಃ ಸಿಕ್ಕಾಗ ಸಂತೋಪಡುವಂತೆ ಆನಂದವಾಗಿದ್ದರು. ಅವರಿಬ್ಬರೂ ಈಗಲೂ ಮದುವೆಯಾಗಲೂ ಸಿದ್ಧರಿದ್ದುದನ್ನು ತಿಳಿದು ಸಂತೋಷಪಟ್ಟರು. ಕೊನೆಗೆ ಹೇಳಿದರು.

‘ಈಗ ನಿಮಗೆ ನನ್ನಿಂದ ಸ್ವಲ್ಪ ಸಹಾಯ ಆಗಬಹುದು ಅಂತ ಅನಸತ್ತೈತಿ. ನೋಡ ಗಿರೆಪ್ಪ ಮುನಿಸಿಪಾಲಿಟಿ ಛೇರ್ಮನ್ನರಿಗೆ ಹಳೆಯ ತಾರೀಖು ಹಾಕಿ ಒಂದು ಪತ್ರ ಕೊಡತೀನಿ. ಅವರು ನನ್ನ ಹಳೆ ಶಿಷ್ಯರು. ನನ್ನ ಮಾತನ್ನು ತೆಗೆದು ಹಾಕಲಾರರು. ನನ್ನ ಪತ್ರ ಅವರಿಗೆ ತೋರಿಸಿದರ ನಿನಗೊಂದು ನೌಕರಿ ಕೊಟ್ಟೇ ಕೊಡತಾರ. ಇಬ್ಬರೂ ಅಲ್ಲೇ ಇರಬಹುದಲ್ಲ.’

ಇಬ್ಬರಿಗೂ ಸರಿ ಎನ್ನಿಸಿತು.

ಮಾರನೇ ದಿನ ಅವರು ಹೋಗುವುದಕ್ಕೆ ಸಿದ್ಧರಾಗಿ ಸ್ಟೇಷನ್ನಿಗೆ ಬಂದರು. ಜೀಕೆ ಮಾಸ್ತರ ಅಥವಾ ಅವರೀಗ ಯಾರೊ... ಅಲ್ಲಿಗೂ ಹೋಗಿದ್ದರು. ಇನ್ನೇನು ಟ್ರೇನು ಬಿಡುತ್ತದೆ ಎಂದಾಗ ತಮ್ಮ ಬಳಿ ಉಳಿದಿದ್ದ ಹಣವನ್ನೂ ಒಂದು ಕವರನ್ನೂ ಕೊಟ್ಟರು. ಕವರಿನಲ್ಲಿ ತಮ್ಮ ಮನೆಯನ್ನು ಗಿರೆಪ್ಪ ಮತ್ತು ರೋಜಾಳ ಹೆಸರಿಗೆ ಮಾಡಿದ ಉಯಿಲಿತ್ತು. ಟ್ರೇನು ಬಿಟ್ಟೊಡನೆ ಎರಡೂ ಕೈ ಎತ್ತಿ ‘ಆಗಲಿ ಮಕ್ಕಳೆ ನಿಮ್ಮ ಪವಿತ್ರವಾದ ಆಸೆಗಳು ಏನಿವೆಯೋ ಅವನ್ನೆಲ್ಲ ಶಿವಲಿಂಗಸ್ವಾಮಿ ಈಡೇರಿಸಲಿ’ ಎಂದು ಹರಿಸಿ ಅದೇನೋ ದೊಡ್ಡದೆಂದರಲ್ಲ, ಅದನ್ನು ಹುಡುಕಿಕೊಂಡು ಕತ್ತಲಲ್ಲಿ ಮರೆಯಾದರು.

***